॥ಶ್ರೀಹನುಮದ್ಭೀಮಸುಮಧ್ವಹಂಸಾಂತರ್ಯಾಮಿನ್ ಶ್ರೀನರಹರಿರಾಮಕೃಷ್ಣವೇದವ್ಯಾಸಾಭಿನ್ನಶ್ರೀಲಕ್ಷ್ಮೀಹಯಗ್ರೀವಾಯ ನಮಃ॥

ಶ್ರೀ108 ಶ್ರೀಮಲ್ಲಕ್ಷ್ಮೀಂದ್ರತೀರ್ಥ (ಶ್ರೀ ಶೀರೂರು ಮಠ, ಉಡುಪಿ) ವಿರಚಿತ

# ಸಿದ್ಧಾಂತೋಪದೇಶವು.

**ಮತ್ತು** ಶ್ರೀ ಅಮರಗೋಳಸತ್ಯವರಾಚಾರ್ಯರಿಂದ ಸಂಗ್ರಹಿಸಲ್ಪಟ್ಟ ಬ್ರಹ್ಮಸೂತ್ರಭಾಷ್ಯದಿಂದ ಪ್ರತಿಪಾದಿತವಾಗುವ

# ಮಧ್ವಸಿದ್ಧಾಂತ ಪ್ರಶ್ನೋತ್ತರಾವಳಿ.

(ಈ ಗ್ರಂಥವನ್ನು ಶ್ರೀಶೀರೂರುಮಠದಿಂದ 1961ರಲ್ಲಿ ಸಂಸ್ಕೃತಲಿಪಿಯಲ್ಲಿ ಪ್ರಕಾಶಿಸಲ್ಪಟ್ಟಿತ್ತು. ಅದನ್ನು ಸಜ್ಜನರಿಗೆ ಉಪಯೋಗವಾಗಲೆಂದು ಗಣಕೀಕರಿಸಿರುತ್ತೆ. ಬರೆಯುವುದಕ್ಕೆ ಶ್ರೀಲಕ್ಷ್ಮೀಂದ್ರತೀರ್ಥ ಗುರ್ವಂತರ್ಗತ ಶ್ರೀಗಣೇಶಾಂತರ್ಗತ ಶ್ರೀವಿಶ್ವಂಭರಮೂರ್ತಿಯನ್ನು ನಿರ್ವಿಘ್ನಕೊಡಲೆಂದು ಪ್ರಾರ್ಥಿಸಿರುತ್ತಾ ಶ್ರೀಲಕ್ಷ್ಮೀಂದ್ರತೀರ್ಥರ ಪಾದಚರಣಗಳಿಗೆ ನಮಸ್ಕರಿಸುತ್ತಾ ಪ್ರಾರಂಭಿಸಿರುತ್ತೆ. )

ಶ್ರೀಲಕ್ಷ್ಮೀಂದ್ರತೀರ್ಥಗುರ್ವಂತರ್ಗತ ಶ್ರೀಮಧ್ವಾಂತರ್ಯಾಮಿನ್ ಶ್ರೀವಿಠ್ಠಲಾಯ ನಮಃ॥

ಮಧ್ವಪ್ರತಿಷ್ಠಿತಂ ತ್ವಾಂ ವಿಧ್ವಸ್ತಾಶೇಷಕುಜನಕುಲಮ್।
ಮೂರ್ಧ್ನಾ ಪ್ರಣಮ್ಯ ಯಾಚೇ ತದ್ವಿರಚಯ ಯದ್ಧಿತೇ ಮಮಾದ್ಯ ಹರೇ॥ 1 ॥
ಪಾಪಾವಲೀಪಾತನಪಟ್ವಪಾಂಗಃ ಶ್ರೀಪಾಣಿಪದ್ಮಾಂಚಿತಜಾನುಜಂಘಃ।
ಗೋಪಾಲಬಾಲಃ ಕೃಪಯಾ ಸ್ವಯಂ ನಃ ಶ್ರೀಪಾಂಡುರಂಗೋ ಭವತು ಪ್ರಸನ್ನಃ॥ 2 ॥
ಕುಪಿತಾಹಿಫಣಚ್ಛಾಯಾ ಸಮೀಕೃತ್ಯಾಪರಂ ಸುಖಮ್।
ಸೇವಂತೇ ಯತ್ಪದಂ ಧೀರಾಃ ತಂ ಭಜೇ ವಲ್ಲಭಂ ಶ್ರಿಯಮ್ ॥ 3 ॥
ತ್ರಿಧಾಮಾ ಯಸ್ಯ ಹೃತ್ಸೀಮ್ನಿ ಕೃತಧಾಮಾ ನಿರಂತರಮ್।
ಸುಧೀಶ್ರಿಯಂ ದಿಶತು ನಃ ಸ ಮಧ್ವಕ್ಷೀರಸಾಗರಃ॥ 4 ॥
ಕಾಮಧೇನುರ್ಯಥಾಪೂರ್ವಂ ಸರ್ವಾಭೀಷ್ಟಫಲಪ್ರದಾ।
ತಥಾ ಕಲೌ ವಾದಿರಾಜಶ್ರೀಪಾದೋಽಭೀಷ್ಟದಃ ಸತಾಮ್ ॥ 5 ॥
ಪೂರ್ವಃ ಪೂರ್ವಃ ಪೂರ್ವಪಕ್ಷಃ ಯಾವನ್ಮಧ್ವಮತೋದಯಃ।
ಅಂತೇ ಸಿದ್ಧಸ್ತು ಸಿದ್ಧಾಂತಃ ಮಧ್ವಸ್ಯಾಗಮ ಏವ ಹಿ॥ 6 ॥

ವರ್ಷಕಾಲದ ಕೃಷ್ಣಪಕ್ಷದ ಸ್ವಲ್ಪವೂ ಪ್ರಕಾಶವಿಲ್ಲದ ನಡುರಾತ್ರಿಯಲ್ಲಿ ಪ್ರವಾಹದಿಂದ ತುಂಬಿದ ನಕ್ರಕೂರ್ಮಮೀನಾದಿಗಳಿಂದ ಭೀಷಣವಾದ ಕೋಡುಕಲ್ಲುಗಳಿಂದ ಅತೀವ ಅಪಾಯಕಾರಿಯಾದ ಮಹಾನದಿಯ ಪ್ರವಾಹಮಧ್ಯದಲ್ಲಿ ಸಿಲುಕಿದ ಈಜು ತಿಳಿಯದ ಧೈರ್ಯಗುಂದಿರುವ ಮಾನವನಿಗೆ ಸುಸಜ್ಜಿತವಾದ ಯೋಗ್ಯ ಮತ್ತು ಪ್ರಾಜ್ಞಕರ್ಣಧಾರ(ನಾವಿಕ) ನಿಂದ ಕೂಡಿದ ನಾವೆಯು ಪಾರಕಾಣಲು ಹೇಗೆ ಅವಶ್ಯಕವೋ, ಅದೇ ರೀತಿಯಲ್ಲಿ ಸಂಸಾರಸಾಗರದಲ್ಲಿ ವೈಷಯಿಕಸುಖಗಳೆಂಬ ನಕ್ರಮೀನಾದಿಗಳ ನಡುವೆ ಸಿಲುಕಿರುವ ಮತ್ತು ದುಃಖಜನಕಗಳಾದ ವಿವಿಧಮತಜನಿತ ಜ್ಞಾನಗಳೆಂಬ ಬಂಡೆಗಳ ಆಘಾತಗಳಿಗೊಳಪಟ್ಟ ಸಂಸಾರಕಜೀವನಿಗೆ ಸಂಸಾರಸಾಗರದಿಂದ ಪಾರಗಾಣಲು ಉತ್ತಮನಾದ ಕರ್ಣಧಾರ- ಸ್ಥಾನೀಯನಾದ ಉಪದೇಶಕನು ಅವಶ್ಯ. ಅಂತಹ ಉಪದೇಶಕನು ರಾತ್ರಿಯಲ್ಲಿ ದಿಕ್ಕುತೋಚದ ಸಮಯದಲ್ಲಿ ನಾವೆಯನ್ನು ನಡೆಸುವ ದಕ್ಷಸೂಕ್ಷ್ಮದರ್ಶಿಯಂತೆ ಸರ್ವವನ್ನೂ ತಿಳಿದ ವಿಶೇಷ ಜ್ಞಾನಿಯಾಗಿರಬೇಕು. ಝುಂಝಾವಾತಾದಿ ಪ್ರಸಂಗಗಳಲ್ಲಿ ಸಿಲುಕಿದ ಪಾಂಥನಂತೆ ಕಂಗೆಟ್ಟವನಾಗಿರಬಾರದು. ಗಮ್ಯವಾದ ದೇಶವನ್ನು ಯಾವ ಪ್ರಸಂಗದಲ್ಲಿಯೂ ನಿಶ್ಚಯವಾಗಿ ತಿಳಿದವನಾಗಬೇಕು. ಹಾಗೆಯೇ ನಾವೆ ನಡೆಸಲು ತಂತ್ರೋಪಕರಣಾದಿಗಳ ಪರಿಜ್ಞಾನವುಳ್ಳವನಾಗಿರಬೇಕು. ಪ್ರಕೃತ ಸಂಸಾರಸಾಗರದಲ್ಲಿ ಬಿದ್ದ ಅಜ್ಞಜೀವರಾಶಿಗೆ ಪಾರಗಾಣಲು ಮುಖ್ಯವಾದ ಸಾಧನವೆಂದರೆ ನಾವೆಯಂತಿರುವುದು ಪರಮ- ಪುರುಷನಾದ ಶ್ರೀಮನ್ನಾರಾಯಣನ ಉತ್ತಮವಾದ ಅಪರೋಕ್ಷಜ್ಞಾನವೇ. ಈ ಅಪರೋಕ್ಷಜ್ಞಾನ ರೂಪವಾದ ನಾವೆಗೆ ಸಮರ್ಥಚಾಲಕರು ಗಮ್ಯನಾದ ನಾರಾಯಣನ ಜ್ಞಾನವುಳ್ಳ ಯಾವತರಹದ ದೋಷವೂ ಇಲ್ಲದ ಜ್ಞಾನಾದಿಗುಣಗಳಿಂದ ಆಢ್ಯರಾದ ವಾಯುದೇವರೇ. ಇನ್ನು ಜ್ಞಾನಾತಿರಿಕ್ತಗಳಾದ ಸಾಧನಗಳು ಇವೆ ಎಂದು ಲೋಕಪ್ರವಾದಾದಿ

ಗಳಿಂದಾಗಲೀ ಇತರಶಾಸ್ತ್ರಾದಿಗಳಿಂದಾಗಲೀ ತಿಳಿಯಬಹುದು. ಆದರೆ ಅವು ಮುಖ್ಯಸಾಧನಗಳಲ್ಲ. ಕೆಲವು ಸತ್ಕರ್ಮಗಳು ಅಂತಃಕರಣಶುದ್ಧಿದ್ವಾರಾ ಪರಮಪುರುಷನ ಜ್ಞಾನಕ್ಕೆ ಪರಂಪರಯಾ ಸಾಧನಗಳಾಗಬಹುದು. ಇನ್ನು ಕೆಲವು 'ಅಪಾಮ ಸೋಮಮಮೃತಾ ಅಭೂಮ' ಇತ್ಯಾದಿ ಶ್ರುತಿಗಳಿಂದ ಆಪಾತತಃ ಪರಮಸಾಧನಗಳೆಂದು ತೋರುವ ಪಶುಹಿಂಸಾದಿಗಳಿಂದ ಕೂಡಿದ ಯಾಗಾದಿ ಕರ್ಮಗಳು ಪುನಃ ಪುನಃ ಸಾಂಸಾರಿಕದುಃಖಜನಕಗಳೇ ಹೊರತು ಮುಖ್ಯಸಾಧನಗಳಾಗಲಾರವು. ಹೀಗೆ ಮುಖ್ಯಸಾಧನಗಳಾದ ಕರ್ಮಗಳಲ್ಲಿಯೂ ಕಾಮ್ಯ ಅಕಾಮ್ಯವೆಂದು ದ್ವೈವಿಧ್ಯವಿದೆ. ಅದರಲ್ಲಿ ಕಾಮ್ಯವಾದ ಕರ್ಮವು ಎಂದರೆ, ಯಶಆದಿಕಾಮನಾದಿಂದಾಗಲೀ ಇತರರ ಭೀತ್ಯಾದಿಗಳಿಂದಾಗಲೀ ಮಾಡುವ ಕರ್ಮವು. ಶ್ರೀಮನ್ನಾರಾಯಣನ ಕೇವಲಪ್ರೀತಿಕಾಮನಾದಿಂದಾಗಲೀ ಮೋಕ್ಷಕಾಮನಾದಿಂದಾಗಲೀ ಮಾಡುವ ಕರ್ಮವು ಅಕಾಮ್ಯವಾದುದು. ಇದೇ ನಮಗೆ ತಾರಕವಾದ ಕರ್ಮವು. ಇಂತಹ ಕರ್ಮವೇ ಆಗಲೀ, ಸಾಕ್ಷಾತ್ ಮೋಕ್ಷಜನಕವಾಗುವಂತಿಲ್ಲ, 'ನಾಸ್ತ್ಯಕೃತಃ ಕೃತೇನ' ಅಕೃತಃ ನಿತ್ಯವಾದ ವೈಕುಂಠಾದಿಲೋಕವು ಕೃತೇನ ಜನ್ಯವಾದ ಕರ್ಮದಿಂದ ಆಗುವಂತಿಲ್ಲ, ಎಂಬ ಶ್ರುತಿಯು ಈ ವಿಷಯದಲ್ಲಿ ಪ್ರಮಾಣವು. ಕರ್ಮವು ಧರ್ಮರೂಪವಾದುದು. ತಾನು ರಕ್ಷಿತವಾದರೆ ರಕ್ಷಕನಾದ ಕರ್ಮಕರ್ತನನ್ನು ರಕ್ಷಿಸುವುದು. ಅಂತಹ ಕರ್ಮವು ಕೃತಾದಿಯುಗಭೇದೇನ ಭಿನ್ನವಾದುದು. ಕೃತಯುಗದಲ್ಲಿ ಶ್ರೇಷ್ಠವಾದ ಕರ್ಮವೆಂದರೆ ತಪಸ್ಸು. ತ್ರೇತಾಯುಗದಲ್ಲಿ ಸತ್ಯವು. ದ್ವಾಪರಯುಗದಲ್ಲಿ ಯಜ್ಞವು. ಕಲಿಯುಗದಲ್ಲಿ ದಾನವು. ಈ ವಿಷಯದಲ್ಲಿ ''ತಪಃ ಪರಂ ಕೃತಯುಗೇ ತ್ರೇತಾಯಾಂ ಸತ್ಯಮುತ್ತಮಮ್ । ದ್ವಾಪರೇ ಯಜ್ಞಮೇವಾಹುರ್ದಾನಮೇವ ಕಲೌಯುಗೇ॥''

ಎಂಬ ಭಾರತವಾಕ್ಯವು ಪ್ರಮಾಣವು. ಈ ದಾನವು ಅನೇಕ ವಿಧವಾಗಿರುವುದು. ಅವುಗಳಲ್ಲಿ ಯಾವತರಹದ ದೋಷದಿಂದಲೂ ರಹಿತವಾದ ದಾನವೆಂದರೆ ನ್ಯಾಯದಿಂದ ಕಷ್ಟಾರ್ಜಿತವಾದ ಆದರದಿಂದ ಕೂಡಿದ ವಿಷ್ಣ್ವರ್ಪಣ ಬುದ್ಧಿಯಿಂದ ಮಾಡಿದ ಭೂದಾನ, ಶಾಲಿಗ್ರಾಮದಾನ, ಸುವರ್ಣದಾನ, ಅನ್ನದಾನ, ಜಲದಾನ ಇವೇ ಮೊದಲಾದವುಗಳು. ಆ ಪೈಕಿಯೂ 'ಕುಪಾತ್ರದಾನಾಚ್ಚ ಭವೇದ್ದರಿದ್ರಃ' ಎಂದಿರುವುದರಿಂದ ಎಲ್ಲಾ ದಾನಗಳಿಗೆ ಪಾತ್ರಾಪಾತ್ರವಿವೇಕವು ಅವಶ್ಯಕವು. ಮತ್ತು ಯಾವುದೇ ಆಗಲಿ ದಾನವು ಪ್ರತಿಗೃಹೀತೃಗೆ ಸರ್ವಥಾ ತೃಪ್ತಿಯನ್ನುಂಟುಮಾಡುವುದೆಂದು ಹೇಳಲು ಶಕ್ಯವಿಲ್ಲ. ಅನ್ನದಾನ ಜಲದಾನಗಳು ಹಾಗಲ್ಲ. ತತ್ಕಾಲದಲ್ಲಿ ತೃಪ್ತಿಯನ್ನುಂಟುಮಾಡುವುದು. ಅಲ್ಲದೇ ಈ ಎರಡು ದಾನಗಳಿಗೆ ಪಾತ್ರಾಪಾತ್ರವಿಚಾರವು ಅವಶ್ಯಕವಿಲ್ಲ. ಅನ್ನದಾನ ಜಲದಾನಗಳು ಎರಡೂ ಪ್ರಾಣದಾನಗಳೆಂದು ಭಾರತದಲ್ಲಿ ಕೊಂಡಾಡಲ್ಪಟ್ಟಿವೆ. ಈ ವಿಷಯದಲ್ಲಿ ''ಅನ್ನಸ್ಯ ಕ್ಷುಧಿತಂ ಪಾತ್ರಂ ಪಾನೀಯಸ್ಯ ಪಿಪಾಸಿತಂ ॥ ಅನ್ನದೋ ಜಲದಶ್ಚೈವ ಆತುರಸ್ಯ ಚಿಕಿತ್ಸಕಃ॥ ತ್ರಯಸ್ತೇ ಸ್ವರ್ಗಮಾಯಾಂತಿ ವಿನಾ, ಯಜ್ಞೇನ ಭಾರತ॥'' ಎಂದು ಭಾರತೋಕ್ತಿಯು ಇದೆ. ಇಂತಹ ಅನ್ನದಾನಾದಿ ವಿಚಾರದಲ್ಲಿ ಮಹಾಮಹಿಮೆಯನ್ನು ಇಟ್ಟುಕೊಂಡೇ ಸರ್ವಜ್ಞರಾದ ಶ್ರೀಮದಾನಂದತೀರ್ಥ ಭಗವತ್ಪಾದರು ಶ್ರೀಕೃಷ್ಣಸನ್ನಿಧಿಯಲ್ಲಿ ಅನ್ನದಾನವನ್ನೇ ಪ್ರಧಾನಧರ್ಮವನ್ನಾಗಿ ಸ್ಥಾಪಿಸಿರುವುದು ಅದ್ಯಾಪಿ ಶ್ರೀಕೃಷ್ಣದರ್ಶನಾರ್ಥವಾಗಿ ಬಂದ ಜನರಿಗೆ ಪ್ರತ್ಯಕ್ಷವಾಗಿ ಕಾಣುವುದು. ಅತಏವ ಭಾರತದಲ್ಲಿಯೇ '' ಧರ್ಮಃ ಶ್ರುತೋ ವಾ ದೃಷ್ಟೋ ವಾ ಕೃತೋ ವಾ ಕಾರಿತೋಽಪಿವಾ॥ ಅನುಮೋದಿತೋಽಪಿ ರಾಜೇಂದ್ರ ಪಂಚೈತೇ ಫಲಭಾಗಿನಃ॥'' ಎಂದಿರುವುದರಿಂದ ಈ ಧರ್ಮಸಾಹಾಯ್ಯವು ಧರ್ಮವಾಗಿರುವುದರಿಂದ ಅನೂಚಾನವಾಗಿ ಸರ್ವದೇಶಗಳಲ್ಲಿಯೂ ಸರ್ವಗುರುಪೀಠಗಳಲ್ಲಿಯೂ ಸರ್ವಕ್ಷೇತ್ರಗಳಲ್ಲಿಯೂ ಸಜ್ಜನರಿಂದ ಆಚರಿತವಾಗಿ ಬಂದಿದೆ.

ಜ್ಞಾನವೇ ಮುಖ್ಯಮೋಕ್ಷಸಾಧನವು. ಯಾವನೇ ಒಬ್ಬನು ಪ್ರಭುವಿನಿಂದ ಉತ್ತಮತರಹದ ಅನುಗ್ರಹವನ್ನು ಅಪೇಕ್ಷಿಸುವವನು ಅನುಗ್ರಹವಾಗಬೇಕಾದರೆ ಆತನ ಸ್ವರೂಪವನ್ನು ಇತರರಿಂದ ತಿಳಿದು ಆತನ ದರ್ಶನವನ್ನು ಪಡೆದು ಪೂರ್ವಸ್ಮಾದಪಿ ಅಧಿಕವಾಗಿ ಪ್ರೀತ್ಯಾದರ ಗಳನ್ನು ನಾವು ತೋರಿಸುತ್ತಾಬಂದರೆ ಅವನು ನಮ್ಮಲ್ಲಿ ಪ್ರಸನ್ನನಾಗಿ ನಮ್ಮ ಶ್ರೇಯಸ್ಸನ್ನು ಕೋರುತ್ತಾನೆಂಬುದುವುದು ಗುಣಿಗಳಾದ ಮಹಾನುಭಾವರಲ್ಲಿ ಬಹುಕಡೆ ಸರ್ವಾನುಭವಸಿದ್ಧವಾದ ಪ್ರಯುಕ್ತ ನಾವು ಹೆಚ್ಚು ಹೇಳುವುದು ಅಗತ್ಯವಿಲ್ಲ.

ಆದಕಾರಣ ನಮ್ಮ ಪ್ರಭು ಶ್ರೀಮನ್ನಾರಾಯಣನ ಪರಮಪ್ರಸಾದದಿಂದ ಲಭ್ಯವಾದ ಮೋಕ್ಷವು ಲಭಿಸಬೇಕಾದರೆ, ಅವನ ಅಪರೋಕ್ಷಜ್ಞಾನವು ನಮಗಾಗಬೇಕು. ನಾವು ಹೊಂದಲಿರುವ ಅಪರೋಕ್ಷಜ್ಞಾನವೊಂದೇ ನಮ್ಮಲ್ಲಿದ್ದಸಾಧನಗಳಲ್ಲಿ ಪರಮಸಾಧನವು. ಯದ್ಯಪಿ ಅವನ ಪರಮಪ್ರಸಾದವೇ ಮೋಕ್ಷಸಾಧನವು. ಅದು ಜೀವನಿಷ್ಠವಲ್ಲ. ಜೀವನಲ್ಲಿರುವ ಸಾಧನಗಳಲ್ಲಿ ಇದೇ ಮುಖ್ಯವು. ಅತಏವ ''ನಾನ್ಯಃ ಪಂಥಾ ಅಯನಾಯ ವಿದ್ಯತೇ'' ಎಂಬ ಶ್ರುತಿಯು ಇತರಸಾಧನಗಳಿಗೆ ಮುಖ್ಯತ್ವವನ್ನು ನಿಷೇಧಿಸಿದೆ. ಪೂರ್ವದಲ್ಲಿ

ಪ್ರಸಕ್ತವಾದ ಅಪರೋಕ್ಷಜ್ಞಾನವು ನಿರಂತರದಲ್ಲಿ ತೈಲಧಾರೆಯಂತೆ ಅವಿಚ್ಛಿನ್ನವಾದ ಮಾನಸಿಕವಾಸನಾಮಯವಾದ ಭಗವಂತನ ದಿವ್ಯವಿಗ್ರಹದ ದರ್ಶನರೂಪವಾದಧ್ಯಾನದಿಂದ ಹೊರತು ಇತರದಿಂದ ಸಾಧ್ಯವಿಲ್ಲ. ಇಂತಹ ಭಗವಂತನ ಸತತಚಿಂತನವು ನಿರಂತರವಾದ ಶಾಸ್ತ್ರವಿಮರ್ಶನರೂಪ ಮನನವಿಲ್ಲದೇ ಲಭಿಸುವಂತಿಲ್ಲ. ಅಂತಹ ಮನನವು ಬಹುಕಾಲೀನವಾದ ಶ್ರವಣವನ್ನು ಹೊರತು ಹುಟ್ಟುವಂತಿಲ್ಲ. ಅತಏವ ''ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತ್ರವ್ಯೋಮಂತವ್ಯೋ ನಿಧಿಧ್ಯಾಸಿತವ್ಯಃ'' ಎಂಬ ಶ್ರುತಿಯು ಈ ಅರ್ಥವನ್ನು ಪ್ರತಿಪಾದಿಸುವುದು. ಈ ಶ್ರವಣಾದಿಗಳೂ ಕೂಡ ಅಲ್ಪಕಾಲದಿಂದ ಫಲಪ್ರದಗಳಲ್ಲ. ಕಿಂತು ಬಹುಕಾಲದಲ್ಲಿ ಕಿಂಬಹುನಾ ಬಹುಜನ್ಮಗಳಲ್ಲಿ ಅಭ್ಯಾಸಮಾಡಿದರೇನೇ ನಮಗೆ ಜ್ಞಾನಪ್ರದವಾದ ಅಂತಹ ಧ್ಯಾನವು ಶಕ್ಯವಾದೀತು. ಇದನ್ನೇ ಶ್ರೀಕೃಷ್ಣಪರಮಾತ್ಮನು 'ಬಹೂನಾಂ ಜನ್ಮನಾಮಂತೇ ಜ್ಞಾನವಾನ್ಮಾಂ ಪ್ರಪದ್ಯತೇ' ಎಂದು ಗೀತೆಯಲ್ಲಿ ಅಪ್ಪಣೆಕೊಟ್ಟಿರುವನು. ಇಂತಹ ಶ್ರವಣಮನನಾದಿಗಳಿಗಾಗಿ ಯಾರನ್ನು ಹೊಂದಬೇಕೆಂದು ವಿಚಾರ ಮಾಡುವಾಗ 'ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್' ಎಂಬ ಶ್ರುತಿಯು ಗುರುವನ್ನು ಉಪದೇಶಕಾರಣನನ್ನಾಗಿ ಸೂಚಿಸುತ್ತದೆ. ಗುರುವೆಂದರೆ, 'ಅಸಂಶಯಸ್ಸಂಶಯಚ್ಛಿತ್' ಎಂದಿರುವ ಕಾರಣ ಸ್ವಯಂ ಭಗವದ್ವಿಷಯಕಸಂಶಯರಹಿತನಾಗಿ ಇತರರ ಸಂಶಯವನ್ನು ಪರಿಹರಿಸುವಶಕ್ತಿಯುಳ್ಳವನಾಗಿ ಇರಬೇಕು. ಅಂತಹ ಪರಮಗುರುವೆಂದರೆ ಜೀವೋತ್ತಮರಾದ ಭಾರತೀಪತಿಶ್ರೀಮುಖ್ಯಪ್ರಾಣದೇವರೇ.

ಈ ಕಲಿಕಾಲದಲ್ಲಿ ಕಾಲಬಲದಿಂದಲೂ ಭೀಮಾರ್ಜುನರ ಗದಾಶರಾಘಾತಗಳಿಂದ ಮೃತರಾಗಿ ಉತ್ಪನ್ನರಾದ ದೇವವಿರೋಧಿಗಳ ಶಕ್ತಿಯಿಂದಲೂ ಜ್ಞಾನಯೋಗ್ಯರಾದವರೂ ಕೂಡ ಜ್ಞಾನಶೂನ್ಯರಾದವರು ಆದರು. ಈ ವಿಷಯದಲ್ಲಿ ''ಅಸ್ಮದಾವೇಶಬಲತಃ ಕಲೇಃ ಶಕ್ತ್ಯಾಚ ಪೀಡಿತಾಃ। ಭವಂತಿ ಮಲಿನಾತ್ಮಾನಃ ಸಜ್ಜನಾಸ್ಸಾಂಖ್ಯಯೋಗಿನಃ'' ಎಂಬ ವಚನವೇ ಪ್ರಮಾಣವು. ಜಗತ್ತಿನಲ್ಲಿ ಇಂತಹ ಜ್ಞಾನಸೂರ್ಯನು ಅಸ್ತಪ್ರಾಯನಾಗಿ ಜನರು ಅಜ್ಞಾನವೆಂಬ ಕಗ್ಗತ್ತಲಿನಲ್ಲಿ ಸಿಲುಕಿ ದಿಙ್ಮೂಢರಾಗಿರಲು ಕರುಣಾಳುಗಳಾದ ಬ್ರಹ್ಮಾದಿದೇವತೆಗಳು ಶ್ರೀಮನ್ನಾರಾಯಣನನ್ನು ಮೊರೆಯಿಟ್ಟರು.

ಬ್ರಹ್ಮಾದಿದೇವತೆಗಳಿಂದ ಪ್ರಾರ್ಥಿತನಾದ ಜಗಜ್ಜನ್ಮಾದಿಕಾರಣನಾದ ಶ್ರೀಮನ್ನಾರಾಯಣನು ತ್ರಿಯುಗಹೂತಿಯೆಂದು ಶ್ರುತಿಯಲ್ಲಿ ಪ್ರಸಿದ್ಧನಾದ ಕಾರಣ ಸ್ವಯಂ ಅವತಾರವನ್ನಿಚ್ಛಿಸದೇ ಉಳಿದ ಸರ್ವಜ್ಞರಲ್ಲಿ ಚತುರ್ಮುಖ-ಮುಖ್ಯಪ್ರಾಣ ಇಬ್ಬರ ಪೈಕಿ ಚತುರ್ಮುಖನು ಅವತಾರಶೂನ್ಯನಾದುದರಿಂದ ವಾಯುದೇವರನ್ನೇ ತತ್ವಜ್ಞಾನಶೂನ್ಯರಾದ ಸಾತ್ವಿಕರಾದ ಪ್ರಜೆಗಳನ್ನು ಮೋಕ್ಷಜನಕವಾದ ತತ್ತ್ವಜ್ಞಾನದಿಂದ ಸಂತೋಷಗೊಳಿಸುವುದಕ್ಕಾಗಿ ರೂಪಾಂತರದಿಂದ ಭೂಲೋಕವನ್ನು ತೆರಳು, ಎಂದು ಅಪ್ಪಣೆಯನ್ನೀಯಲು, ಭವದ್ಭಕ್ತರಲ್ಲಿ ಅಗ್ರಗಣ್ಯರಾದ ಮುಖ್ಯಪ್ರಾಣದೇವರು ಪರಮಾತ್ಮನ ಈ ಆಜ್ಞೆಯನ್ನು ಶಿರೋರತ್ನವೆಂದು ಭಕ್ತಿಯಿಂದ ಶಿರಸಾವಹಿಸಿ ದೇವತೆಗಳ ಪ್ರಾರ್ಥನೆಯನ್ನು ಹೃತ್ಪೂರ್ವಕವಾಗಿ ಮುಕ್ತಾಮಾಲಿಕೆಯಂತೆ ಹೃದಯದಲ್ಲಿಟ್ಟುಕೊಂಡು ಭಕ್ತಜನರನ್ನು ಉದ್ಧರಿಸಲೋಸುಗ ಅವತರಿಸಲಿಚ್ಛಿಸಿದರು.

ಇತ್ತ ರಜತಪೀಠಪುರದಲ್ಲಿ ಸಾಧುವೃಂದವು ಮೋಕ್ಷಜನಕವಾದತತ್ವಜ್ಞಾನವು ಯಾವುದು ಅದರ ಲಾಭವು ನಮಗೆ ಹೇಗಾದೀತೆಂದು ಚಿಂತಾಕುಲವಾಗಿರುವಾಗ ಅಂತಹ ಸಾಧುವರ್ಗದ ಪ್ರೀತಿಗಾಗಿ ಈ ರಜತಪೀಠಪುರದಲ್ಲಿ ಅನಂತೇಶ್ವರನೆಂದು ಪ್ರಸಿದ್ಧನಾದ ಶ್ರೀಮನ್ನಾರಾಯಣನು ಶುಭಸೂಚನೆಗಾಗಿ ಸ್ವಭಾವತಃ ಜಡತುಲ್ಯನಾದ ಯತ್ಕಂಚನ ಭಕ್ತನನ್ನು ಪ್ರವೇಶಿಸಿ ಸರ್ವಜನರಿಗೂ ವಿಶ್ವಾಸಹುಟ್ಟಿಸುವಂತೆ ಉನ್ನತವಾದ ಧ್ವಜಸ್ತಂಭವನ್ನಾರೋಹಣಮಾಡಿ ರಂಗಮಂಟಪದಲ್ಲಿ ನಟನಂತೆ ಅಂಗಚೇಷ್ಟಾಪೂರ್ವಕ ನರ್ತಿಸಿ ಮಹತ್ತರವಾದ ಮಹೋತ್ಸವಕ್ಕಾಗಿ ನೆರದಿರುವ ಜನವೃಂದವು ಈ ಮಹಾವಿಸ್ಮಯವನ್ನು ಏಕದೃಷ್ಟಿಯಿಂದ ನೋಡುತ್ತಿರಲು ಅಂತಹ ಜನವೃಂದವನ್ನು ಸಂಬೋಧಿಸಿ ಉಚ್ಚಧ್ವನಿಯಿಂದ ನಿಮ್ಮೆಲ್ಲರ ಅಭಿವೃದ್ಧಿಗಾಗಿ ಸರ್ವಜೀವನಕಾರಣನಾದ ಮಹಾನುಭಾವನು ಸದ್ಯದಲ್ಲಿಯೇ ಅವತರಿಸುವನೆಂದು ಆಜ್ಞೆ ಇತ್ತನು.

ಇತ್ತ ಯೋಗ್ಯರಾದ ಮಧ್ಯಗೇಹಭಟ್ಟರೆಂದು ಪ್ರಸಿದ್ಧರಾದ ಓರ್ವ ವಿಪ್ರವರ್ಯರು ಪಾತಿವ್ರತ್ಯಸೌಶೀಲ್ಯಾದಿ ಗುಣಗಳಿಂದ ಭರಿತಳಾದ ವೇದವತಿನಾಮಕ ತನ್ನ ಭಾರ್ಯೆಯಿಂದ ಕೂಡಿಕೊಂಡು ಅಪುತ್ರರಾಗಿ ಚಿಂತಾಕ್ರಾಂತರಾಗಿ, ಕರ್ದಮಪರಾಶರ-ಪಾಂಡುಮೊದಲಾದವರಿಗೆ ಸತ್ಪುತ್ರದಾನದಿಂದ ಚಿಂತಾಮಣಿಯಂತಿರುವ ಇದೇ ಅನಂತೇಶ್ವರನೆಂದು ಪ್ರಸಿದ್ಧನಾದ ಶ್ರೀನಾರಾಯಣನನ್ನು ಪುನ್ನಾಮನರಕದಿಂದ ರಕ್ಷಿಸಲು ಶಕ್ತನಾದ ವಿದ್ಯಾವಿನಯಾದಿಗುಣಗಳಿಂದ ಭರಿತನಾದ ಪುತ್ರಕಾಮನಯಾ ತಾವು ದಂಪತಿಗಳು ಸ್ವಯಂದಾಂತರಾದರೂ ವಿರಕ್ತಿಯಿಂದ ವಿಷಯಭೋಗಗಳನ್ನು ಮಿತವಾಗಿ ಹರಿಸಿಕೊಂಡವರಾದರು. ತೀವ್ರಗಳಾದ

ಪಯೋವ್ರತಾದಿಗಳಿಂದ ಅದಿತಿಕಶ್ಯಪರು ವಾಮನನಪ್ರಾಪ್ತಿಗಾಗಿ ಶ್ರೀನಾರಾಯಣನನ್ನು ಸಂತೋಷ ಪಡಿಸಿದಂತೆ ಇವರೂ ಪ್ರಸನ್ನೀಕರಿಸಿಕೊಂಡರು. ''ಕಿಮಲಭ್ಯಂ ಭಗವತಿ ಪ್ರಸನ್ನೇ ಶ್ರೀನಿಕೇತನೇ'' ಎಂದು ಭಾಗವತಾಚಾರ್ಯರು ಅಪ್ಪಣೆಕೊಡಿಸಿದಂತೆ ಸತೀಮಣಿಯಾದ ವೇದವತಿಯು ಋತುಕಾಲದಿಂದ ತನ್ನ ಪತಿ ನಾರಾಯಣ ಭಟ್ಟ(ಮಧ್ಯಗೇಹ ಭಟ್ಟ)ರಿಂದ ಗರ್ಭಾಧಾನವನ್ನು ಹೊಂದಿದಳು. ಆ ಗರ್ಭವು ಶರತ್ಕಾಲೀನ ಶುಕ್ಲಪಕ್ಷದ ಚಂದ್ರಮನಂತೆ ವೃದ್ಧಿಹೊಂದಿ ಶುಭಲಕ್ಷಣಗಳಿಂದೊಡಗೂಡಿದ ಸಕಾಲದಲ್ಲಿ ಪ್ರಸವವಾಯಿತು. ಅದೇ ನಮ್ಮ ಶ್ರೀಮದಾಚಾರ್ಯರ ಅವತಾರವು. ಆಗ 'ದುರ್ಜನವೃಂದವು ದುಃಖಯುತವಾಗುವುದು, ಸತ್ಸಮೂಹವು ಆನಂದಭರಿತವಾಗುವುದೆಂ'ದು ದೇವ ದುಂದುಭಿಯು ಧ್ವನಿಗೈಯಲು ಸಜ್ಜನವೃಂದವು ಸಂತೋಷವನ್ನು ಹೊಂದಿತು. ಕುಲಪತಿಯಾದ ಅನಂತೇಶ್ವರದೇವರನ್ನು ವಂದಿಸಿ ತನ್ನ ಪಾಜಕಕ್ಷೇತ್ರದ ಸ್ವಗೃಹಕ್ಕೆಂದು ತೆರಳಿದ ಮಧ್ಯಗೇಹಭಟ್ಟರು ಮಧ್ಯಮಾರ್ಗದಲ್ಲಿ ಈ ಅಪೂರ್ವಪುತ್ರೋತ್ಪತ್ತಿಯನ್ನು ಕೇಳಿ ಪರೋಕ್ಷವಾದಜ್ಞಾನದಿಂದಾಗುವ ಆನಂದವನ್ನು ಅನುಭವಿಸಿ ಮನೆಯನ್ನು ಹೊಂದಿ ನಂದನನ ಮುಖೇಂದುವನ್ನು ನೋಡಿ ಅಪರೋಕ್ಷಜ್ಞಾನಜನ್ಯವಾದ ಆನಂದವನ್ನು ತನ್ನ ಕುಲಪತಿ- ಯಾದ ನಾರಾಯಣನಿಂದ ದತ್ತವಾದ್ದೆಂದು ಅವನ ಗುಣಗಾನವನ್ನು ಮಾಡಿ ಶಾಂತಚಿತ್ತರಾದರು.

ಆಮೇಲೆ ಮಧ್ಯಗೇಹಭಟ್ಟರು ಸುಮುಹೂರ್ತದಲ್ಲಿ ಜಾತಕರ್ಮಾದಿಗಳನ್ನು ಮಾಡಿ ತಾನು ಭಗವದ್ಭಕ್ತಿಪರಾಯಣ ರಾದುದರಿಂದ ಹುಟ್ಟಿದ ಶಿಶುವಿಗೆ ವಾ-ಜ್ಞಾನದಾನಾರ್ಥವಾಗಿ, ಅಸುದೇವ-ಮುಖ್ಯಪ್ರಾಣದೇವರು ಉತ್ಪನ್ನರಾದ ಪ್ರಯುಕ್ತ ದೈವಪ್ರೇರಿತರಾಗಿ **ವಾಸುದೇವನೆಂದು** ನಾಮವನ್ನು ಇಟ್ಟರು.

ಒಂದಾನೊಂದುದಿನ ಬಾಲಲೀಲೆಗಳನ್ನು ಮುಗಿಸಿ ವಾಸುದೇವಭಟ್ಟರು ತಾತಪಾದರನ್ನು ಭೋಜನಾರ್ಥವಾಗಿ ಒಳಗೆ ಬರಲು ಪ್ರೇರಿಸಲು, 'ವತ್ಸ ಈ ಧನಿಕನು ನಮಗೆ ವೃಷಭವನ್ನು ಕೊಟ್ಟವನು. ಆತನ ಧನವನ್ನು ಕೊಡದಕಾರಣ, ಭೋಜನಾರ್ಥವಾಗಿ ಹೊರಡಲು ತಡೆಯುವಕಾರಣ, ಹೊರಡಲು ಅಶಕ್ತನೆಂದು ಪುತ್ರಮುಖವನ್ನು ನೋಡಿ ತಂದೆಯು ಹೇಳಲು ವಾಸುದೇವಭಟ್ಟರು ತನ್ನ ಸುಕೋಮಲವಾದ ಕರಕಮಲಗಳಿಂದ ಹತ್ತಿರವೇ ಬಿದ್ದಿರುವ ಕೆಲವು ಹುಣಿಸೆ- ಬೀಜಗಳನ್ನು ನಗುಮುಖರಾಗಿ ಆ ಸಾಹುಕಾರನಿಗೆ ಕೊಡಲು ಪೂರ್ವಕರ್ಮದ ಪರಿಪಾಕವನ್ನು ಹೊಂದಿದ ಆ ವರ್ತಕನು ಬಹುವಿನಯದಿಂದ ಆ ಬೀಜಗಳನ್ನು ಸ್ವೀಕರಿಸಿ ಆ ಬಾಲಕರಾದ ವಾಸುದೇವಭಟ್ಟರ ಮುಖೇಂದು ದರ್ಶನದಿಂದ ಆಹ್ಲಾದಿತನಾಗಿ ಭೋಜನಾರ್ಥವಾಗಿ ಪಿತೃಪುತ್ರರಿಗೆ ತೆರಳಲು ಬಿನ್ನವಿಸಿ, ತನ್ನ ಮನೆಯನ್ನು ಸೇರಿದನು. ಅದೇ ಸ್ವಲ್ಪಕಾಲದನಂತರ ಮಧ್ಯಗೇಹಭಟ್ಟರು ವರ್ತಕನ ಹಣವನ್ನು ಕೊಡಲು ಹೋದಾಗನಿಮ್ಮ ಪುತ್ರರತ್ನರಿಂದ ನನ್ನ ಹಣವು ಪ್ರಾಪ್ತವಾಗಿದೆಂದು ಹೇಳಲು ಮಧ್ಯಗೇಹಭಟ್ಟರು ಆಶ್ಚರ್ಯವನ್ನೂ, ಆ ವರ್ತಕನು ಹುಣಿಸೇಬೀಜ ನೆಪದಿಂದ ಮೋಕ್ಷಾದಿಪುರುಷಾರ್ಥ ವನ್ನೂ ಹೊಂದಿದರು. ಬಾಲಕರಾದ ವಾಸುದೇವಭಟ್ಟರು ದಿನೇ ದಿನೇ ತನ್ನ ಬಾಲಲೀಲೆಗಳಿಂದ ಮಾತಾಪಿತೃಗಳಿಗೆ ಸಂತೋಷವನ್ನುಂಟು ಮಾಡುತ್ತಿದ್ದು ತನ್ನ ತಂದೆಯು ಅಕ್ಷರಮುಹೂರ್ತವನ್ನು ಮಾಡಿ ಮಾರನೇ ದಿನ ಅದೇ ಅಕ್ಷರಗಳನ್ನು ಬರಿಯುತ್ತಿರಲು, ನಿನ್ನೆ ಬರೆದ ಅಕ್ಷರಗಳನ್ನೇ ತಾತ ಯಾಕೆ ಬರೆಯುವಿರೆಂದು ತನ್ನ ಅಲೌಕಿಕವಾದ ಪ್ರತಿಭಾಲೇಶವನ್ನು ವ್ಯಕ್ತಗೊಳಿಸಿ ತಾತಪಾದರನ್ನು ವಿಸ್ಮಯಯುಕ್ತರನ್ನಾಗಿ ಮಾಡಿದರು

ಮಧ್ಯಗೇಹಭಟ್ಟರು ತನ್ನ ಪುತ್ರ ವಾಸುದೇವಭಟ್ಟರು ಅಲೌಕಿಕಪ್ರತಿಭಾದಿಂದ ಸಮಸ್ತರನ್ನು ವಿಸ್ಮಯಗೊಳಿಸುತ್ತಿರಲು ಉಚಿತವಾದ ವಯಸ್ಸಿನಲ್ಲಿ ಉಪನಯನ ಮಾಡಲು ಯಾವತರಹದದೋಷವೂ ಇಲ್ಲದ ಶುಭಗ್ರಹರುಗಳಿಂದ ಕೂಡಿದ ನಿರ್ದುಷ್ಟವಾದ ಮುಹೂರ್ತದಲ್ಲಿ ಉಪನಯನ ಮಹೋತ್ಸವವನ್ನು ತನ್ನ ವಿಭವಾನುಸಾರವಾಗಿ ಜರುಗಿಸಿದರು.

ಈ ವಾಸುದೇವಭಟ್ಟರ ಉಪನಯನಕಾಲದಲ್ಲಿ ವೇದಾಭಿಮಾನಿನಿಗಳಾದ ಶ್ರೀಭಾರತೀವಾರುಣೀಪಾರ್ವತೀ- ಪ್ರಭೃತಿಗಳಾದ ದೇವತಾಸ್ತ್ರೀಯರು ಇನ್ನು ಉಪನೀತರಾದ ಇವರ ಮುಖಕಮಲದಿಂದ ನಮ್ಮಿಂದ ಅಭಿಮನ್ಯಮಾನಗಳಾದ ವೇದಗಳು ಅರ್ಥಪ್ರಕಾಶನಪೂರ್ವಕವಾಗಿ ಪ್ರಕಾಶಿಸಿಕೊಳ್ಳುವುವೆಂದು ಸಂತೋಷದಿಂದ ಸಭರ್ತೃಕರಾಗಿ ಆಕಾಶವನ್ನು ಹೊಂದಿ ಸ್ವಯಂ ವೇದಾಭಿಮಾನಿಗಳಾದ ಮುಖ್ಯಪ್ರಾಣದೇವರ ಅಂಶಸಂಭೂತರಾದ ಇವರನ್ನು ವಟುರೂಪದಿಂದ ಗಾಯತ್ರೀದೀಕ್ಷೆಯನ್ನು ಹೊಂದಿದವರನ್ನು ನೋಡಿ ಪೂರ್ವದಲ್ಲಿ ವಟುರೂಪಿಯಾದ ವಾಮನನನ್ನು ನೋಡಿ ಸಂತೋಷ ಪಟ್ಟಂತೆ ಸಂತೋಷಪಟ್ಟರು.

ಇತ್ತ ಮಧ್ಯಗೇಹಭಟ್ಟರು ತನ್ನ ಪುತ್ರನ ಮಹಾಮಹಿಮೆಯನ್ನು ತಿಳಿಯದೇ ಲೋಕಶಿಕ್ಷಾರ್ಥವಾಗಿ ತಾನು ತ್ರಿಲೋಕಗುರುರುದ್ರನಿಗೂ ಗುರುವಾದರೂ ''ಪ್ರಾಪ್ತೇ ನರೇಷು ಜನನೇ ನರವತ್ಪ್ರವೃತ್ತಿಃ '' ಎಂದಿರುವ ಕಾರಣ ತಂದೆಯಾದ ಮಧ್ಯಗೇಹಭಟ್ಟರಲ್ಲಿ ಪುತ್ರವೃತ್ತಿಯನ್ನು ತೋರಿಸಿ ವಿನಯಾದಿಗಳಿಂದ ಕೂಡಿರುವ ವಾಸುದೇವಭಟ್ಟರನ್ನು ''ವಿಪ್ರಾಗ್ನಿಗಳ

ಪರಿಚರ್ಯೆಯು ಆವಶ್ಯಕವು । ಬ್ರಹ್ಮಚರ್ಯೆಯನ್ನು ಧರಿಸಿಕೊಂಡು ಸಕಲ ವೇದಾದಿಗಳ ಅಧ್ಯಯನವನ್ನು ಮಾಡು'' ಎಂದು ಉಪದೇಶಿಸಿ, ತನ್ನ ಅಗ್ನಿಸೇವಾಸಂಧ್ಯಾದಿಕರ್ಮಾಚರಣೆಯಲ್ಲಿ ಚತುರರಾಗಿ ಕುಮಾರರ ಗುಣಗಳಿಂದೊಡಗೂಡಿದ ನಿಜಕುಮಾರರನ್ನು ನೋಡಿ, ಭಟ್ಟರು ಸಂತೋಷಪಡುತ್ತಿರಲು ದೇವತಾಸಮುದಾಯವು ಜಗತ್ಪ್ರಭುವಾದ ಮುಖ್ಯಪ್ರಾಣ- ದೇವರ ತಮ್ಮ ಸ್ವರೂಪಾಚ್ಛಾದನೆಯನ್ನೂ ಲೋಕಶಿಕ್ಷಾಕ್ರಮವನ್ನೂ ನೋಡಿ ಇನ್ನು ತತ್ವಜ್ಞಾನಯೋಗ್ಯರಾದ ಸಜ್ಜನರಿಗೆ ತತ್ವಜ್ಞಾನವು ಸದ್ಯದಲ್ಲೇ ಲಭಿಸುವುದೆಂದು ಸಂತೋಷಗೊಂಡಿತು.

''ಜನ್ಮಾಂತರೋऽಪಿ ಸಂಸ್ಕಾರೋ ನ ಗತಃ'' ಎಂಬ ಮಾತಿನಂತೆ ಭೀಮಸೇನದೇವರ ಗದಾಪ್ರಹಾರದಿಂದ ಮೃತನಾದ ಮಣಿಮನ್ನಾಮಕ ದೈತ್ಯನು ಪ್ರಾರಬ್ಧಕರ್ಮವಶಾತ್ ಸರ್ಪಜನ್ಮವನ್ನು ಹೊಂದಿದವನಾದಾಗ್ಯೂ ಕಚ್ಚಿಕೊಲ್ಲುವೆನೆಂಬ ದುರಾಶೆಯಿಂದ ಬಾಲರೂಪಿಯಿಂದಿರುವ ಭಟ್ಟರನ್ನು ಕಚ್ಚಲು, ಅವತಾರದಲ್ಲಿಯೂ ಅವಿಲುಪ್ತಜ್ಞಾನವುಳ್ಳ ವಾಯ್ವಂಶ- ಸಂಭೂತರಾದ ವಾಸುದೇವಭಟ್ಟರು ಯಾವದೆಶೆಯಲ್ಲಿಯೂ ಅಕುಂಠಿತ ಶಕ್ತಿಯುಳ್ಳವರಾದ ಕಾರಣ ಶ್ರೀಕೃಷ್ಣನು ಬಾಲರೂಪ- ದಲ್ಲಿ ವಿಷಭರಿತನಾದ ಕಾಲೀಯನನ್ನು ಮರ್ದಿಸಿ ಭಗ್ನದರ್ಪನನ್ನು ಮಾಡಿದಂತೆ ಪಾದತಲದಿಂದ ಮೆಟ್ಟಿ ಪ್ರಾಣವಿಯುಕ್ತನನ್ನಾಗಿ ಮಾಡಿದರು.

ವಾಸುದೇವಭಟ್ಟರು ತಮ್ಮ ಬಾಲ್ಯಗುರುಗಳು 'ತಾನು ಆಟಪಾಠಾದಿಗಳಲ್ಲಿ ನಿರತನಾಗಿರುವೆನು, ಓದುವುದಿಲ್ಲವೆಂದು' ವೈಮನಸ್ಯ ವನ್ನು ತೋರಿಸಿದಾಗ ಒಮ್ಮೆ ಹೇಳಿದ್ದನ್ನೇ ಪುನಃ ಪುನಃ ಉಚ್ಚರಿಸಿಕೊಂಡಿರುವುದು ನನಗೆ ಪ್ರಿಯವಿಲ್ಲ ಎಂತ ಬಾಲಕನುತ್ತರಿಸಿ ಉಪರಿತನವಾದ (ಓದದಿರುವ) ವೇದಭಾಗವನ್ನು ಪಠಿಸಿ ಗುರುಗಳಿಗೆ ವಿಸ್ಮಯವನ್ನು ದೇವತಾವೃಂದಕ್ಕೆ ಸಂತೋಷವನ್ನು ಉಂಟುಮಾಡಿದರು. ಒಂದಾನೊಂದು ದಿನ ವಾಸುದೇವಭಟ್ಟರು ತನ್ನ ಸತೀರ್ಥ್ಯನಾದ ವಯಸ್ಯನು (ಗುರುಪುತ್ರನು) ತನಗೆ ಬಹುಕಾಲದಿಂದಿರುವ ಶಿರೋವೇದನೆಯಿಂದ ಆರ್ತನಾಗಿರಲು ಮುಖದಿಂದ ಶ್ರವಣಕ್ಕೆ ಗಾಳಿಯನ್ನು ತುಂಬಿಸಿ ಶಿರೋವೇದನೆಯನ್ನು ನಾಶಗೊಳಿಸಿ ಸಾತ್ವಿಕನಾದ ಆ ಬಾಲಕನಿಗೆ ತನ್ನ ಮಹಿಮೆಯ ಏಕದೇಶವನ್ನು ವ್ಯಕ್ತಗೊಳಿಸಿ ಸಂತೋಷಪಡಿಸಿದರು.

ಕೆಲವು ಸಮಯದ ನಂತರ ವಾಸುದೇವಭಟ್ಟರು ಲೋಕದ ತತ್ವಜ್ಞಾನಯೋಗ್ಯರಾದ ಜನರ ಉದ್ಧಾರಕ್ಕಾಗಿ ಜನ್ಮವೆತ್ತಿದ ನನಗೆ ಪಾರಮಹಂಸಧರ್ಮಸ್ವೀಕಾರವೇ ಯೋಗ್ಯವು ಎಂದು ನಿಶ್ಚೈಸಿ ಅನುಜ್ಞಾಪ್ರಾಪ್ತಿಗಾಗಿ ಸರ್ವತ್ರ ವ್ಯಾಪ್ತನಾದ ಶ್ರೀವಿಷ್ಣುವನ್ನು ವ್ಯಾಪ್ತೋಪಾಸಕ ರಾದ ಇವರು ಸಹಜಸಿದ್ಧವಾದ ವೈರಾಗ್ಯಾದಿ ಗುಣಗಳಿಂದೊಡಗೂಡಿ ಸರ್ವವಸ್ತುಗಳನ್ನು ತದಂತರ್ಯಾಮಿ ಉದ್ದೇಶದಿಂದ ನಮಸ್ಕರಿಸುತ್ತಿರಲು, ತನ್ನ ಆಸುಪಾಸಿನ ಜನರು ಏನನ್ನು ನಮಸ್ಕರಿಸುತ್ತಿ ಎಂದು ಕೇಳಲು, 'ನನ್ನ ವಸ್ತುವನ್ನು ನಾನು ನಮಸ್ಕರಿಸುವೆನೆಂದು' ಅರ್ಥಗರ್ಭಿತವಾದ ಉತ್ತರವನ್ನು ಕೊಟ್ಟು ಗುರುಕುಲಾನ್ವೇಷಣವನ್ನು ಮಾಡುತ್ತಾ ಮನೆಯಿಂದ ಹೊರಟರು. ಇತ್ತ ಅದೇ ಸಮಯದಲ್ಲಿ ಶ್ರೀಮದನಂತೇಶ್ವರದೇವಾಲಯದಲ್ಲಿ ಓರ್ವ ನಿಗೃಹೀತಗಳಾದ ಇಂದ್ರಿಯಗಳುಳ್ಳ ವಿರಕ್ತಿಯೇ ಭೂಷಣವಾಗಿ ಉಳ್ಳ ಪೂರ್ವಜನ್ಮದಲ್ಲಿ ದ್ರೌಪದೀದೇವಿಯರ ಕರಕಮಲದಿಂದ ಕಲ್ಪಿತವಾದ ಅನ್ನದ ಭುಕ್ತಿಯಿಂದ ಪವಿತ್ರಾತ್ಮರಾದ ಯತಿಶ್ರೇಷ್ಠರು ಅಚ್ಯುತಪ್ರೇಕ್ಷರೆಂದು ಪ್ರಸಿದ್ಧರಾಗಿ- ರುತ್ತಿದ್ದರು. ಗುರುಗಳ ವಿಯೋಗಾನಂತರ 'ಅಹಂ ಬ್ರಹ್ಮ ಬ್ರಹ್ಮಾತಿರಿಕ್ತವಾದುದು ಯಾವದೂ ಇಲ್ಲ ಎಂಬೀ ತತ್ವವು ಯಾವ ಕಾಲದಲ್ಲಿಯೂ ಯಾರಿಗೂ ಪ್ರತ್ಯಕ್ಷವಾದುದಲ್ಲ. ಆದಕಾರಣವೇ ವಿಶ್ವಸನೀಯವೂ ಅಲ್ಲ. ನೀನು ಮೋಕ್ಷಾರ್ಥವಾಗಿ ಮುಕುಂದ ಶಬ್ದವಾಚ್ಯನಾದ ಶ್ರೀಹರಿಯನ್ನು ಸೇವಿಸು', ಎಂದು ತನ್ನ ಗುರುಗಳು ವಿಯೋಗಕಾಲದಲ್ಲಿ ಅಪ್ಪಣೆಕೊಡಿಸಿದಂತೆ ಉಪದೇಶಹೊಂದಿದವರು ಅನಂತೇಶ್ವರದೇವರನ್ನೇ ತತ್ತ್ವಜ್ಞಾನಪ್ರಾಪ್ತಿಗಾಗಿ ಸೇವಿಸುತ್ತಿದ್ದರು. ಅಂತಹ ಯತೀಶ್ವರರಿಂದ ಸೇವಿತನಾದ ಅನಂತೇಶ್ವರದೇವನು ಓರ್ವ ಪುರುಷನನ್ನು ಪ್ರವೇಶಿಸಿ ಮುಂದೆ ನಿನಗೆ ಲಭಿಸಲಿರುವ ಶ್ರೇಷ್ಠಶಿಷ್ಯನಿಂದ ನನ್ನ ತತ್ವಜ್ಞಾನವನ್ನು ಹೊಂದುವಿ ಎಂದು ಅಪ್ಪಣೆ ಕೊಟ್ಟನು.

ಪುರುಷಾವಿಷ್ಟನಾದ ಅನಂತೇಶ್ವರನಿಂದ ಸೂಚಿಸಲ್ಪಟ್ಟ ಅನುಗ್ರಹವಿಶೇಷವನ್ನೇ ನಿರೀಕ್ಷಿಸುತ್ತಾ ಪ್ರಭುವಾದ ಅನಂತಪದ್ಮನಾಭನನ್ನು ಭಕ್ತ್ಯತಿಶಯದಿಂದ ಸೇವಿಸುವ ಅಚ್ಯುತಪ್ರೇಕ್ಷರನ್ನು ಸ್ವಭಾವಸಿದ್ಧಗಳಾದ ವೈರಾಗ್ಯಾದಿಗುಣಗಳಿಂದ ಕೂಡಿದ ಸನ್ಯಾಸಸ್ವೀಕರಣದ ವಿಷಯದಲ್ಲಿ ದೃಢನಿಶ್ಚಯವನ್ನು ತಾಳಿದ ಸ್ವಯಂ ತ್ರಿಲೋಕಗುರುವಾಗಿ ಪ್ರಕೃತ ಮಾನುಷ- ಬಾಲವಿಗ್ರಹವನ್ನು ಧರಿಸಿದ ವಾಸುದೇವಭಟ್ಟರು ಸನ್ಯಾಸ- ಸ್ವೀಕರಾರ್ಥ ಗುರುತ್ವೇನ ನಿಶ್ಚೈಸಿ ಹೊಂದಿದರು.

ಇತ್ತಲಾಗಿ ಮಧ್ಯಗೇಹಭಟ್ಟರು ದಂಪತಿಗಳು ಏಕಮಾತ್ರಪುತ್ರರಾದ ವಾಸುದೇವಭಟ್ಟರಲ್ಲಿ ಅತಿವತ್ಸಲರಾದವರು ತನ್ನ ಪುತ್ರನು ಸನ್ಯಾಸಾರ್ಥಿಯಾಗಿ ಅಚ್ಯುತಪ್ರೇಕ್ಷರ ಪರಿಚರ್ಯೆಯನ್ನು ಮಾಡುತ್ತಿರುವುದನ್ನು ಕೇಳಿ, ಅಸಹಮಾನರಾಗಿ ಪುತ್ರನನ್ನು ಹೊಂದಿ, ವೃದ್ಧರಾದ ಏಕಮಾತ್ರಪುತ್ರರಾದ ನಮ್ಮನ್ನು ಬಿಟ್ಟು ನಿನಗೆ ಸನ್ಯಾಸಸ್ವೀಕಾರವು ಯೋಗ್ಯವಲ್ಲವೆಂದು ಹೇಳಿದಾಗ ಆ ಮಾತನ್ನು ಪುತ್ರ

ವಾಸುದೇವನು ಅಭಿನಂದಿಸದಿರಲು; ಆ ಮಾತಾಪಿತರು ದುಃಖಾತಿರೇಕದಿಂದ ನಮಸ್ಕಾರವನ್ನು ಮಾಡಿ ಸನ್ಯಾಸವನ್ನು ನಿಷೇಧಿಸಿದರು. ಆಗ ಬಾಲಕನಂತಿರುವ ವಾಸುದೇವಾಚಾರ್ಯರು ದೈವವೇ ನಿಮ್ಮ ಕೈಯಿಂದ ನನಗೆ ಸನ್ಯಾಸದೀಕ್ಷೆಗೆ ಅಪ್ಪಣೆಯನ್ನು ಕೊಡಿಸಿತಲ್ಲ! ಅನ್ಯಥಾ ನಿಮ್ಮ ಪುತ್ರನಾಗಿ ಶುಶ್ರೂಷೆಗಾಗಿ ಇರುವ ನನಗೆ ನೀವು ಮಾಡಿದ ನಮಸ್ಕಾರವು ನಿಷಿದ್ಧವಲ್ಲವೇ, ಎಂದು ಹೇಳಿ ನಿರುತ್ತರರನ್ನು ಮಾಡಿದಾಗ ಆ ಮಾತಾಪಿತೃಗಳು ಪುತ್ರನ ಈ ವರ್ತನವನ್ನು ನೋಡಿ ಗುರುಗಳಾದ ಅಚ್ಯುತಪ್ರೇಕ್ಷರಿಗೆ ವಂದಿಸಿ ಮನೆಯನ್ನು ಹೊಂದಿ ಪುತ್ರನನ್ನೇ ಚಿಂತಿಸುತ್ತಾ ಕಾಲಕಳೆಯಲು ಅಸಮರ್ಥರಾಗಿ ಪುನಃ ಅಚ್ಯುತಪ್ರೇಕ್ಷರ ಸನ್ನಿಧಿಗೆ ಬಂದು ಸನ್ಯಾಸವಿಷಯದಲ್ಲಿ ದೃಢನಿಶ್ಚಯರಾದ ವಾಸುದೇವರನ್ನು ಹೊಂದಿ; 'ನೀನು ಸನ್ಯಾಸಸ್ವೀಕಾರಮಾಡಿದರೆ ನಾನು ಅನಶನಾದಿರೂಪದಿಂದ ವ್ರತವನ್ನು ಹೊಂದುವೆನೆಂದು ಕುಪಿತರಾಗಿ ಹೇಳಲು, ಪುತ್ರನು ವಸ್ತ್ರವನ್ನು ಖಂಡಿಸಿ ಕೌಪೀನವನ್ನು ಮಾಡಿ 'ತಾತ ನಿಮ್ಮ ಸಾಹಸವನ್ನು ಆಚರಿಸುವುದು. ಆದರೆ ಜಗನ್ಮಂಗಲದಾಯಕವಾದ ನನ್ನ ಈ ಸನ್ಯಾಸಸ್ವೀಕಾರದಲ್ಲಿ ನೀವು ವಿಘ್ನವನ್ನಾಚರಿಸುವುದು ಯುಕ್ತವಲ್ಲ'ವೆಂದೆನಲು, ಆ ಮಧ್ಯಗೇಹಭಟ್ಟರು 'ಮಾತಾಪಿತರ ಸೇವೆಯನ್ನು ಹೊರತು ಇತರವಾದ ಶುಭಕರ್ಮವನ್ನು ಮನ್ವಾದಿಗಳು ಹೇಳುವುದಿಲ್ಲ। ನಮಗಾದರೂ ಪಾಲಕನಾಗಿ ಇತರ ಪುತ್ರನಿಲ್ಲ'ವೆಂದೆನಲು, ಪುತ್ರರಾದ ವಾಸುದೇವರು ಯಾವನೇ ಮನುಷ್ಯನು ಸಂಸಾರದಲ್ಲಿ ವಿರಕ್ತನಾಗುವನೋ, ಅದೇ ಕ್ಷಣದಲ್ಲಿ ಸನ್ಯಾಸಸ್ವೀಕಾರವು ಆತನಿಗೆ ವಿಹಿತವೆಂದು ಶ್ರುತಿಯು ಇರುವ ಕಾರಣ ನನಗೆ ಸನ್ಯಾಸಸ್ವೀಕಾರವು ವಿಧಿವಿಹಿತವೇ ಆಯಿತು. ಆದರೂ ಮಾತಾಪಿತರಾದ ನಿಮಗೆ ಇನ್ನೊಬ್ಬರಕ್ಷಕನನ್ನಾಗಿ ಪುತ್ರವನ್ನು ಅನುಗ್ರಹಿಸದೇ ಸನ್ಯಾಸವನ್ನು ಸ್ವೀಕರಿಸುವುದಿಲ್ಲವೆಂದೆನಲು ಮಧ್ಯಗೇಹಭಟ್ಟರು 'ವತ್ಸ! ನಾನು ಯದ್ಯಪಿ ಶ್ರುತಶಾಸ್ತ್ರನಾದ ಕಾರಣ ನಿನ್ನ ವಿರಹವನ್ನು ಸಹಿಸಬಹುದು. ನಿನ್ನ ಮಾತೆಯು ಎಷ್ಟಕ್ಕೂ ನಿನ್ನ ವಿರಹವನ್ನು ಸಹಿಸಲಶಕ್ತಳು. ಆ ಮಾತೆಯನ್ನು ದುಃಖಪಡಿಸಬೇಡ' ಎಂದು ಸಾಮದಿಂದ ಅನಲು ಆ ವಾಸುದೇವರು 'ತಾತ! ನೀವು ಅಪ್ಪಣೆಯನ್ನು ಕೊಡಿರಿ. ಮಾತೆಯಿಂದ ಅಪ್ಪಣೆಯನ್ನು ಪಡೆಯುವ ಭಾರ ನನಗಿರಲೆಂದು ಹೇಳಿದಾಗ ಭಟ್ಟರು ವಿಚಾರ ಮಾಡಿ ನಿರುತ್ತರರಾಗಿ ಮಾತೆಯು ಸಮ್ಮತಿಪಟ್ಟರೆ ನನ್ನ ಆಕ್ಷೇಪವಿಲ್ಲವೆಂದು ಹೇಳಿ ಕಷ್ಟದಿಂದ ಮನೆಯನ್ನು ಹೊಂದಿ ಸತಿಯ ಸಮೀಪದಲ್ಲಿ ನಡೆದ ಸಮಸ್ತವೃತ್ತಾಂತವನ್ನು ಅರುಹಿದರು.

''ಹರೌ ಪ್ರಸನ್ನೇ ಕಿಮಿಹಾಸ್ತ್ಯಸಾಧ್ಯಂ'' ಎಂಬ ಗುರುರಾಜರ ವಾಕ್ಯದಂತೆ ಇಡೀ ಜಗತ್ತಿಗೆ ಜೀವನದಾತರಾದ ವಾಸುದೇವಾ-ಚಾರ್ಯರು ಸಂತೋಷದಿಂದ ಮಾತಾಪಿತರಿಗೆ ತನ್ನ ತಮ್ಮನಾಗಿ ಇನ್ನೊಬ್ಬ ಸುತನು ಜನಿಸಲೆಂದು ಸಂಕಲ್ಪಿಸಿದ್ದೇ ತಡ ಶ್ರೀದೇವರ ಅನುಗ್ರಹದಿಂದ ಶ್ರೀರಾಮನ ಅನುಜಲಕ್ಷ್ಮಣನಂತೆ ವಿನಯಾದಿಸದ್ಗುಣಗಳಿಂದ ಕೂಡಿ ಓರ್ವ ಪುತ್ರನು ವಾಸುದೇವಾಚಾರ್ಯರಿಗೆ ಅನುಜನಾಗಿ ಜನಿಸಿದನು.

ವಾಸುದೇವಾಚಾರ್ಯರು ಒಂದು ದಿನ ಮನೆಯನ್ನು ಹೊಂದಿ ಮಾತಾಪಿತರಿಗೆ ಜನಿಸಿದ ತಮ್ಮನನ್ನು ನಿವೇದಿಸಿ ಪತಿದೇವನ ಅಪ್ಪಣೆಯಿಂದ ತನ್ನ ಸನ್ಯಾಸವನ್ನು ನಿಷೇಧಿಸುವ ವಿಷಯದಲ್ಲಿ ದೃಢನಿಶ್ಚಯವುಳ್ಳ ಮಾತೆಯನ್ನು ಹೊಂದಿ 'ಅಂಬ, ಒಂದಾನೊಂದು ಕಾಲಕ್ಕಾದರೂ ನನ್ನನ್ನು ನೋಡಲು ಇಚ್ಛಿಸುವಿಯಾದರೆ ನನಗೆ ಸನ್ಯಾಸಸ್ವೀಕಾರದಲ್ಲಿ ಅಪ್ಪಣೆಯನ್ನು ಕೊಡು. ಇಲ್ಲದಿದ್ದರೆ ಯಾವಾಗಲೂ ನಿನ್ನ ದೃಷ್ಟಿವಿಷಯನಾಗಲಾರೆನು. ನಾನು ಈ ದೇಶವನ್ನೇ ಬಿಟ್ಟು ಹೋಗುವೆನು, ಎಂದು ಹೇಳಿದ ಈ ದಾರುಣವಚನವನ್ನು ಕೇಳಿ ಆ ಸಾಧ್ವೀಮಣಿಯು ಪುತ್ರನ ಅದರ್ಶನವು ಅವನ ಮರಣಕ್ಕೆ ಸಮವೆಂದು ಆಲೋಚಿಸಿ ಆತನ ಸನ್ಯಾಸವನ್ನು ತಡೆಯಲಿಲ್ಲ.

ಅನಂತರದಲ್ಲಿ ಜಗದ್ಗುರುಗಳಾದ ವಾಸುದೇವಾಚಾರ್ಯರು ತಾನು ಜೀವಶ್ರೇಷ್ಠನಾಗಿ ದೇವಪದಾರೂಢವಾದಕಾರಣ ಸಮಸ್ತ ಆಶ್ರಮಧರ್ಮಗಳಿಗೆ ಭಾಗಿಗಳಾದರೂ ಲೋಕದೃಷ್ಟ್ಯನುಸಾರೇಣ ಅಚ್ಯುತಪ್ರೇಕ್ಷರನ್ನು ಸಂತೋಷಪಡಿಸಿ ಸನ್ಯಾಸಾಶ್ರಮಕ್ಕೆ ಬೇಕಾದ ಕರ್ಮಕಲಾಪವನ್ನು ಮಾಡಿ ಸರ್ವದಾ ತನ್ನಲ್ಲಿ ಪ್ರಸನ್ನನಾದ ಶ್ರೀಹರಿಯ ಅಧಿಕ ಅನುಗ್ರಹಾರ್ಥವಾಗಿ ಸನ್ಯಾಸವನ್ನು ಸ್ವೀಕರಿಸಿ ಅಕಾರ, ಉಕಾರ, ಮಕಾರ ರೂಪವಾದ ತ್ರಿಮಾತ್ರಗಳುಳ್ಳ ಅನಂತಮಾತ್ರವಾದ ಸಮಸ್ತವೇದಗಳಿಂದ ವ್ಯಾಖ್ಯೇಯವಾದ ಪ್ರಣವಮಂತ್ರದ ಜಪಾಧಿಕಾರಿಗಳಾದರು. ಈ ಬಾಲಯತಿಗಳನ್ನು ಗುರುಗಳು ಇತರ ವಿದ್ವಜ್ಜನರಿಂದ ಕೂಡಿ ''ದಶಪ್ರಮತಿಂ ಜನಯಂತ ಯೋಷಣಃ'' ಎಂಬೀ ವೇದಗಳಿಂದ ಅನ್ವರ್ಥವಾದ **ಪೂರ್ಣಬೋಧ** ಎಂಬೀ ನಾಮದಿಂದ ಯುಕ್ತರನ್ನಾಗಿ ಮಾಡಿದರು. ಈ ಬಾಲಯತಿಗಳು ಕೈಯಲ್ಲಿ ದಂಡಧಾರಿಗಳಾಗಿ ಇಡೀ ಸಭೆಗೆ ಅಲಂಕಾರಪ್ರಾಯರಾಗಿ ಅಂಗರಾಗಾದಿಗಳಿಂದ ರಹಿತರಾದಾಗ್ಯೂ ಇವರ ಶೋಭೆಯು ಅಸದೃಶವಾದದ್ದು ಎಂದು ಇವರನ್ನು ಸಮಸ್ತರೂ ಕೊಂಡಾಡಿದರು. ಪೂರ್ಣಬೋಧರು ಶೇಷರುದ್ರಾದಿಗಳಿಂದ ಕಾಲಪ್ರತೀಕ್ಷಾಪೂರ್ವಕ ವಂದಿತರಾದಾಗ್ಯೂ ''ಪ್ರಾಪ್ತೇ ನರೇಷು ಜನನೇ ನರವತ್ಪ್ರವೃತ್ತಿಃ'' ಎಂಬೀ ವಚನದಂತೆ

ಲೋಕವಿಡಂಬನಾನುಸಾರವಾಗಿ ಅಚ್ಯುತಪ್ರೇಕ್ಷರೇ ಮೊದಲಾದ ಗುರುವರ- ರನ್ನು ವಂದಿಸಿದರು. ಸದ್ಯದಲ್ಲೇ ಪರಮಹಂಸಾಶ್ರಮವನ್ನು ಹೊಂದಿದ ಪೂರ್ಣಬೋಧರಿಗೆ ಸನ್ಯಾಸಾಶ್ರಮದ ವಿಶೇಷಾಚಾರ ಶಿಕ್ಷಣವನ್ನು ಕಲಿಸಬೇಕೆಂದಿದ್ದ ಗುರುಗಳಾದ ಅಚ್ಯುತಪ್ರೇಕ್ಷರು ಪೂರ್ಣಬೋಧರ ಆಚಾರವಿಶೇಷದ ಆಚರಣೆಯನ್ನು ನೋಡಿ ತಾವು ಸ್ವತಃ ವಿಶೇಷಶಿಕ್ಷಣೆಯನ್ನು ಹೊಂದಿದ್ದಲ್ಲದೇ ಮನಸಾ ವಿಸ್ಮಯವನ್ನೂ ಹೊಂದಿದರು.

ಪೂರ್ಣಬೋಧರು ರೌಪ್ಯಪೀಠವಾಸಿಯಾದ ತನಗೆ ವಿಶೇಷತಃ ಪ್ರಭುವಾದ ಅನಂತಾಸನದೇವರಿಗೆ ನಮಸ್ಕಾರವನ್ನು ಮಾಡಿದಾಗ ಅನಂತಪದ್ಮನಾಭದೇವರು ಯತ್ಕಿಂಚಿತ್ಪುರುಷನನ್ನು ಪ್ರವೇಶಿಸಿ ಪೂರ್ಣಬೋಧರ ಭುಜದಲ್ಲಿ ಹಿಡಿದು, ಅಚ್ಯುತಪ್ರೇಕ್ಷರನ್ನು ಕುರಿತು 'ನೀನೇನು ಬಹುಕಾಲದಿಂದ ತತ್ವಬುಭುತ್ಸುವಾಗಿ ಭಕ್ತ್ಯಾದರಗಳಿಂದ ನನ್ನ ಸೇವಾಮಾಡಿದಿ। ಆ ಸೇವಾಫಲರೂಪವಾಗಿ ಈ ಶಿಷ್ಯಶ್ರೇಷ್ಠನನ್ನು ನಿನಗೆ ಕೊಡುವೆ'ನೆಂದು ಅನುಗ್ರಹಿಸಲು, ಈ ಅನುಗ್ರಹವನ್ನು ಪಡೆದು ನಾನು ಕೃತಕೃತ್ಯನೆಂದು ನೆನೆಸಿಕೊಂಡು ಸರ್ವದಾ ಅಚ್ಯುತನಲ್ಲೇ ತನ್ನ ಮನಸ್ಸಿಟ್ಟಿರುವ ಅತಏವ ಸಾರ್ಥಕನಾಮರಾದ ಅಚ್ಯುತಪ್ರೇಕ್ಷರು ಜಗತ್ತಿನಲ್ಲಿ ಸರ್ವತ್ರ ಅಸಂಗರಾದಾಗ್ಯೂ ಈ ಶಿಷ್ಯಸಚ್ಛಿರೋಮಣಿಗಳಾದ ಪೂರ್ಣಬೋಧರಲ್ಲಿ ಹಾರ್ದಿಕ ಸಂಗವುಳ್ಳವ- ರಾದರು. ''ಸತ್ಸಂಗಂ ಸತ್ಕ್ರಿಯಾಂ ಚೈವ''(ಸೂ. ಶ್ರೀವಾದಿರಾಜರ ಪ್ರಾರ್ಥನಾದಶಕಸ್ತೋತ್ರ) ಎಂಬೀ ಸ್ತೋತ್ರದಲ್ಲಿ ಸತ್ಸಂಗವು ಪ್ರಾರ್ಥ್ಯವಾಗಿಯಿದೆ. ಆದ್ದರಿಂದ ಈ ಯತಿವರರಿಗೆ ಶಿಷ್ಯವಾತ್ಸಲ್ಯವು ದೂಷ್ಯವಲ್ಲ.

ಪೂರ್ಣಬೋಧರು ಸನ್ಯಾಸದೀಕ್ಷಾಸ್ವೀಕಾರಾನಂತರದಲ್ಲಿ ಗಂಗಾಸ್ನಾನಾರ್ಥವಾಗಿ ಗುರ್ವನುಜ್ಞಾಪ್ರಾಪ್ತಿಗೋಸ್ಕರ ನಮಸ್ಕರಿಸುತ್ತಿರಲು ಗುರುಗಳಾದ ಅಚ್ಯುತಪ್ರೇಕ್ಷರು ತನ್ನ ಶಿಷ್ಯರ ವಿರಹಶಂಕೆಯಿಂದ ದುಃಖಿತವಾದ ಮನಸ್ಸುಳ್ಳವರಾಗಿ ಪೂರ್ವದಲ್ಲಿ ತನ್ನಿಂದ ಸಂಸೇವ್ಯನಾದ ಅನಂತಪದ್ಮನಾಭನನ್ನು ನಮಸ್ಕರಿಸಿದರು. ಆಗ ಕರುಣಾಸಮುದ್ರನಾದ ಶ್ರೀಹರಿಯು ಯತ್ಕಿಂಚಿತ್ ಮನುಷ್ಯನನ್ನು ಪ್ರವೇಶಿಸಿ ಪೂರ್ಣಬೋಧರನ್ನು ಕುರಿತು ಇಂದಿನಿಂದ ಮೂರನೇ ದಿನ ಸುರನದಿಯಾದ ಗಂಗೆಯು ನಿನಗೋಸ್ಕರ ಕೃತಾದಿಯುಗದಲ್ಲಿ ವಿರಜೆಯೆಂದು ಪ್ರಸಿದ್ಧವಾದ ಈಗ ಅನಂತಸರಸ್ಸೆಂದು ಖ್ಯಾತಿಪಟ್ಟ ಈ ನಮ್ಮ ಸರೋವರವನ್ನು ಕುರಿತು ಬರುವ ಕಾರಣ ನೀನು ಹೋಗುವುದು ಬೇಡವೆಂದು ಅಪ್ಪಣೆಯನ್ನು ಈಯಲು, ಆ ಅಪ್ಪಣೆಯಿಂದ ಬಂದ ಗಂಗೆಯ ಜಲದಲ್ಲಿ ಜನಸಮೂಹವು ಪೂರ್ಣಬೋಧರಿಂದೊಡಗೂಡಿ, ಸ್ನಾನಮಾಡಲು ತದನಂತರ ಆ ತೀರ್ಥವು **ಮಧ್ವಸರೋವರ** ವೆಂದು ಸುಗ್ರಹೀತನಾಮವಾಗಿ ಇಂದಿಗೂ ಬಂದ ಜನರಿಗೆ ಪಾಪನಾಶನ ಮಾಡಿ ಪುಣ್ಯಸಂಚಯಕೊಟ್ಟು ಅನುಗ್ರಹಿಸುತ್ತಿದೆ. ತದನಂತರ ಹನ್ನೆರಡು ವರ್ಷಕ್ಕೊಮ್ಮೆ ಇಂದಿನ ವರೆಗೂ ಪರಮಾತ್ಮನ ಮತ್ತು ಆಚಾರ್ಯರ ಭಕ್ತಳಾದ ಭಾಗೀರಥಿಯು ಈ ಸರೋವರದಲ್ಲಿ ಬರುವುದು ಇತಿಹಾಸ ಪ್ರಸಿದ್ಧಮಾತ್ರವಲ್ಲದೇ ಬಹುಸಲ ಪ್ರತ್ಯಕ್ಷಸಿದ್ಧವಾಗಿಯೂ ಇದೆ.

ಪೂರ್ಣಬೋಧರು ಯತ್ಯಾಶ್ರಮವನ್ನು ಹೊಂದಿ ನಲವತ್ತನೇ ದಿವಸ ತರ್ಕಶಾಸ್ತ್ರದ ವಾದವಿಶಾರದರಾದ ವಾಸುದೇವನಾಮಕ ಪಂಡಿತರೇ ಮೊದಲಾದ ತಾರ್ಕಿಕರನ್ನು ಜಯಿಸಿ ಜಯಪತ್ರವನ್ನು ಹೊಂದಿದರು. ಅಚ್ಯುತಪ್ರೇಕ್ಷರು ತಮ್ಮ ಶಿಷ್ಯರ ವಾದವೈಚಿತ್ರ್ಯವನ್ನು ನೋಡಿ ಇನ್ನೂ ಪಂಡಿತ ಪ್ರಕಾಂಡರನ್ನಾಗಿ ಮಾಡುವ ಉದ್ದೇಶದಿಂದ ಇಷ್ಟಸಿದ್ಧಿನಾಮಕ ಅದ್ವೈತಗ್ರಂಥ ವಿಶೇಷವನ್ನು ಪಾಠಹೇಳಲು ಉಪಕ್ರಮಿಸಿದಾಗ ಶ್ರೀಮದಾಚಾರ್ಯರು ಗ್ರಂಥದಲ್ಲಿ ಆದರ ಇಲ್ಲದವರಾದರೂ ಲೋಕಾನುಸರಣಕ್ಕೋಸ್ಕರ ಸನ್ನದ್ಧರಾಗಿ ಪ್ರಥಮ ಶ್ಲೋಕದ ಪಾಠ ನಡೆಯುತ್ತಿರಲು ಪ್ರಥಮಪದ್ಯದಲ್ಲಿಯೇ ಮೂವತ್ತೆರಡು ದೋಷಗಳನ್ನು ಉದ್ಘೋಷಿಸಲು ಆ ದೋಷಪರಿಹಾರದಲ್ಲಿ ಅಸಮರ್ಥರಾದ ಅಚ್ಯುತಪ್ರೇಕ್ಷರು ಇದರ ಪರಿಹಾರವು ಮುಂದೆ ಬರುವುದೆಂದು ತನ್ನ ಅಜ್ಞಾನವನ್ನು ಆಚ್ಛಾದಿಸಿದಾಗ ಪೂರ್ಣಪ್ರಜ್ಞರು ಆ ದೋಷಪರಿಹಾರ ವನ್ನು ಈಗಲೇ ಮಾಡಿರೆಂದೆನಲು ಕ್ರುದ್ಧರಾದ ಅಚ್ಯುತಪ್ರೇಕ್ಷರು ನಿಮಗೆ ಪಾಠಹೇಳುವ ಶಕ್ತಿ ನಮಗಿಲ್ಲವೆಂದನಲು 'ಬ್ರಹ್ಮ ಒಂದೇ ಸತ್ಯ ತದತಿರಿಕ್ತಸರ್ವವೂ ಮಾಯಾಕಲ್ಪಿತವೆಂದು ಪ್ರತಿಪಾದಿಸುವ ಅತ ಏವ ಮಾಯಾಸಮಯವೆಂದೆ'ನಿಸಿಕೊಂಡ ಇಷ್ಟಸಿದ್ಧಿಗ್ರಂಥದಲ್ಲಿ ಸಮೀಪಸ್ಥ ಜನರಿಗೆ ಇದ್ದ ಪ್ರಾಮಾಣ್ಯಜ್ಞಾನವು ನಷ್ಟವಾಗಿ ದೋಷ ಸಂಶಯವು ಉದ್ಭವಿಸಿತು. ಮುಮುಕ್ಷುವಾದವನು ಯಾರಿಗೂ ಸಂಶಯವಿಲ್ಲದಂತೆ ಪ್ರವಚನಮಾಡುವುದು ಆವಶ್ಯಕ. ಹಾಗೆಯೇ ಮುಮುಕ್ಷುವಾದ ಮಂದಾಧಿಕಾರಿಯು ಶ್ರವಣವನ್ನು ಮಾಡಬೇಕು. ಯತಿಗಳಾದವರು ವಿಶೇಷತಃ ಪಾಠಪ್ರವಚನವನ್ನು ಮಾಡಬೇಕೆಂದು ''**ಉಪನಿಷದಮಾ ವರ್ತಯೇತ್ ಉಪನಿಷದಮಾವರ್ತಯೇತ್**'' ಎಂದು ಶ್ರುತಿಯು ಇದ್ದ ಕಾರಣ ಶ್ರೀಮದಾಚಾರ್ಯರು ಪಾಠಪ್ರವಚನಮಾಡುವಾಗ ಸ್ವಯಂ ಶ್ರುತಶಾಸ್ತ್ರರಾದರೂ ತತ್ವವಿಷಯಕ ವಿಶೇಷಜ್ಞಾನೇಚ್ಛುಗಳಾಗಿ ಜನರು

ಶ್ರೀಮದಾಚಾರ್ಯರ ಸಂಶಯಾಜನಕವಾದ ಅಖಂಡ- ವಾದ ಉಪನ್ಯಾಸವನ್ನು ಕೇಳಲುಬಂದರು.

ಒಂದಾನೊಂದು ದಿನ ಗುರುಗಳಾದ ಅಚ್ಯುತಪ್ರೇಕ್ಷರ ಸಮೀಪದಲ್ಲಿ ಭಾಗವತಶ್ರವಣವನ್ನು ಮಾಡುತ್ತಿರುವ ಅನೇಕಶಿಷ್ಯರು ಪಾಠಭೇದದಿಂದ ಬಹುಧಾ ಅನ್ನಲು ಪೂರ್ಣಪ್ರಜ್ಞರು ಆ ಪಾಠಗಳಲ್ಲಿ ಒಂದು ಪಾಠವನ್ನು ನಿಸ್ಸಂಶಯವಾಗಿ ಅನಲು ಇತರ ಪಾಠಗಳಿರುವಾಗ ಇದೇ ಒಂದು ಪಾಠವನ್ನು ದೃಢವಾಗಿ ಹೇಗೆ ಹೇಳುವಿರೆಂದು ಅಚ್ಯುತಪ್ರೇಕ್ಷರು ಅಪೇಕ್ಷಿಸಲು ಪೂರ್ಣಬೋಧರು ಈ ಪಾಠವು ವ್ಯಾಸಕೃತ ವೆಂದು ಸಮಾಧಾನ ಹೇಳಿದರು. ನೀವು ಅಷ್ಟೂ ವ್ಯಾಸಕೃತಿಯನ್ನು ತಿಳಿದವರೇ ಆದರೆ ಇದೇ ಪಂಚಮಸ್ಕಂಧದಲ್ಲಿ ಒಂದು ಗದ್ಯವನ್ನು ಹೇಳಿರೆಂದೆನಲು ಆಚಾರ್ಯರು ಮುಂದಿನ ಅಧ್ಯಾಯಗಳನ್ನೇ ಪಠಿಸುತ್ತಿರಲು ಸಮೀಪವರ್ತಿಗಳಾದ ಶಿಷ್ಯರುಪರೀಕ್ಷಾರ್ಥವಾಗಿ ಪುಸ್ತಕಗಳನ್ನು ನೋಡಿಕೊಂಡಿರಲು ಒಬ್ಬನ ಕೈಯಲ್ಲಿರುವ ಪುಸ್ತಕದ ಪಾಠಕ್ಕನುಗುಣವಾಗಿ ಬಹುಅಧ್ಯಾಯಗಳನ್ನು ಹೇಳಲು ಬಹುಶಿಷ್ಯರಿಂದ ಕೂಡಿದ ಅಚ್ಯುತಪ್ರೇಕ್ಷರು ವಿಸ್ಮಯಗೊಂಡು ಜೈತ್ರ( ಜಯಶಾಲಿಗಳಾದ) ಪೂರ್ಣಬೋಧರೇ ನೀವು ಭಾಗವತವನ್ನು ಈ ಜನ್ಮದಲ್ಲಿ ಓದಿದ್ದಿಲ್ಲ. ಆದರೂ ಹ್ಯಾಗೆ ಮುಂದಿನ ಗ್ರಂಥವು ಪ್ರತಿಭಾತವಾಗುವುದು ಎಂದೆನಲು ಸರ್ವವೂ ಪೂರ್ವಜನ್ಮದಲ್ಲಿ ತಿಳಿಯಲ್ಪಟ್ಟದು ಎಂದು ಅಗಾಧ ಬೋಧರಾದ ಪೂರ್ಣಪ್ರಜ್ಞರು ಉತ್ತರವನ್ನು ಕೊಟ್ಟರು. ಬಾಲಯತಿಗಳಾದ ಪೂರ್ಣಬೋಧರ ನೂತನವಾದ ಈ ಕೀರ್ತಿಯು ಬಾಲಸೂರ್ಯಪ್ರಭೆಯಂತೆ ದಿಗಂತವನ್ನು ಹೊಂದಿತು.

ಅಚ್ಯುತಪ್ರೇಕ್ಷರು ಸನ್ಯಾಸದೀಕ್ಷಾ ಕಾಲದಲ್ಲಿ ವೇದಾಂತವಿದ್ಯಾಸಾಮ್ರಾಜ್ಯ ಪಾಲನದ ಉದ್ದಿಶ್ಯ ಜಲಪೂರಿತವಾದ ಶಂಖದಿಂದ ಯಾವಕಾಲದಲ್ಲಿ ಅಭಿಷೇಕಮಾಡಿ **ಆನಂದತೀರ್ಥ** ಎಂದು ನಾಮವನ್ನು ಇಟ್ಟರೋ, ಆ ನಾಮವು ಈ ಬಾಲಯತಿಗಳಿಗೆ ಆನಂದ ಎಂದರೆ ಸುಖರೂಪನಾದ ಪರಮಾತ್ಮ ಅವನ ತೀರ್ಥ ಎಂದರೆ ಆಶ್ರಯ ಎಂದರ್ಥ. ಹೀಗೆ **ಪ್ರಧಾನಾಂಗಂ ಹಿ ಮಾರುತಿಃ** ಎಂಬ ವಚನ ಪ್ರಕಾರ ಪರಮಾತ್ಮನಿಗೆ ಯಾವದೇ ಒಂದು ಕಾರ್ಯದಲ್ಲಿ ಅಂಗಭೂತರು ಎಂದು ಹೇಳಿರುವ ಕಾರಣ ಆನಂದತೀರ್ಥನಾಮವು ಸಾರ್ಥಕವಾಯಿತು. ಅಥವಾ **ಆನಂದತೀರ್ಥಕರಂ ತೀರ್ಥಂ ಯಸ್ಮಾತ್** ಎಂಬ ವ್ಯುತ್ಪತ್ತಿಯಿಂದಾಗಲೀ ಶ್ರವಣ,ಪಠಣ, ವಿಮರ್ಶನಾದಿಗಳಿಂದ ಮೋಕ್ಷಸುಖವನ್ನು ಕೊಡುವ ಆನಂದಕರವಾದ ಶಾಸ್ತ್ರನಿರ್ಮಾಣಪ್ರಯುಕ್ತವೂ ಇವರು ಆನಂದತೀರ್ಥರೆಂದು ಅನ್ವರ್ಥನಾಮವುಳ್ಳವರಾದರು. ಒಂದಾನೊಂದು ದಿನ ಅಚ್ಯುತಪ್ರೇಕ್ಷರ ಸಖಿಗಳಾದ ಓರ್ವ ಯತಿಗಳು ತರ್ಕಶಾಸ್ತ್ರದಲ್ಲಿ ಪಂಟಿತರಾದ ಬಹುಶಿಷ್ಯರಿಂದ ಕೂಡಿಕೊಂಡು ಅಚ್ಯುತಪ್ರೇಕ್ಷರ ಸಾಮೀಪ್ಯವನ್ನು ಹೊಂದಿದರು. ಆ ಶಿಷ್ಯರು ಈ ಬಾಲಯತಿಗಳನ್ನು ನೋಡಿ ಪಾಂಡಿತ್ಯಮದದಿಂದ ಕೂಡಿದ ವರಾಗಿ ವಾದದಲ್ಲಿ ಜಯಿಸಬೇಕೆಂದು ಬಹುವಿಧಗಳಾದ ಅನುಮಾನಗಳನ್ನು ಪ್ರಯೋಗಿಸಿ ವಾದವನ್ನು ಆರಂಭಿಸಿದರು. ನಮ್ಮೀ ಪೂರ್ಣಬೋಧರು 'ಕಂಟಕಂ ಕಂಟಕೇನೈವ' ಎಂಬಂತೆ ಆಗಮಸಹಾಯವುಳ್ಳ ನಿರವಕಾಶಗಳಾದ ಅನುಮಾನಗಳನ್ನೇ ಪ್ರಯೋಗಮಾಡಿ ಪೂರ್ವಾನುಮಾನಗಳನ್ನು ಖಂಡಿಸಲು ಆಗ ಮಿಳಿತರಾದ ಸಮಸ್ತಜನರೂ ಅಚ್ಯುತಪ್ರೇಕ್ಷರ ಸಖಿಗಳಾದ ಯತೀಶ್ವರರೂ ಇವರ ಪಾಂಡಿತ್ಯಕ್ಕೆ ಮುಗ್ಧರಾಗಿ **ಅನುಮಾನತೀರ್ಥ**ರೆಂದು ಅಂಕಿತವನ್ನು ಕೊಟ್ಟು ಜಯಘೋಷವನ್ನು ಮಾಡಿದರು. ಅವರ ಜತೆಯಲ್ಲಿ ಬಂದ ಬುಧ್ಯಬ್ಧಿ ವಾದಿಸಿಂಹರೆಂಬ ವಾದಿಗಳನ್ನು ಜಯಿಸಿದರು. ಕದಾಚಿತ್ ಗುರುಗಳಾದ ಅಚ್ಯುತಪ್ರೇಕ್ಷರಿಂದ ಕೂಡಿಕೊಂಡು ಲೀಲಾವಿವಾದವು ಪ್ರಾಪ್ತವಾದಾಗ ಸಾಂಕರಭಾಷ್ಯದಿಂದ ಕೆಲವು ದೋಷಗಳನ್ನು ಉದ್ಘಾಟಿಸಿ ಶ್ರೀವೇದವ್ಯಾಸರಿಗೆ ಅಭಿಮತವಾದ ಅರ್ಥವನ್ನು ಹೇಳುತ್ತಿರಲು ಪರಾಜಿತರಾದ ಅಚ್ಯುತಪ್ರೇಕ್ಷರು ನೀವು ಸಮರ್ಥರಾದರೆ ಹೊಸ ಭಾಷ್ಯವನ್ನೇ ಮಾಡಬಹುದು, ಎಂದು ಸಾಪೇಕ್ಷವಾಗಿ ಹೇಳಲು ಪರಮ ಹಂಸರಾದ ಬಾಲಯತಿಗಳು ಹಂಸಕ್ಷೀರನ್ಯಾಯದಂತೆ ( ನೀರು ಮತ್ತು ಕ್ಷೀರಮಿಶ್ರಿತವಾಗಿದ್ದಾಗ ಹಂಸದ ಸ್ವಭಾವವು ಕ್ಷೀರವನ್ನು ಮಾತ್ರ ಗ್ರಹಿಸುವುದು. ಅದರಂತೆಯೇ) ಆಕ್ಷೇಪಾಂಶವನ್ನು ಬಿಟ್ಟು ಬೇರೆ ಭಾಷ್ಯವನ್ನು ಮಾಡಿರಿ ಎಂಬ ವಿಧಾನಾಂಶವನ್ನು ಮಾತ್ರ ಸ್ವೀಕರಿಸಿದರು. ಅಚ್ಯುತಪ್ರೇಕ್ಷರ ಸಖಿಗಳಾದ ಯತಿಗಳಿಗೆ ಬ್ರಹ್ಮಸೂತ್ರಗಳ ವ್ಯಾಸಾಭಿಮತಗಳಾದ ಅರ್ಥಗಳನ್ನು ಪ್ರಾರ್ಥನಾಪ್ರಕಾರ ಹೇಳಿದರು.

ಪೂರ್ಣಪ್ರಜ್ಞರು ದಕ್ಷಿಣದಿಕ್ಕಿನಲ್ಲಿ ಸಂಚಾರಾರ್ಥವಾಗಿ ಹೋದಾಗ ವಿಷ್ಣುಮಂಗಲದೇವಾಲಯದಲ್ಲಿ ಇದ್ದಾಗ ಓರ್ವಭಕ್ತನು ಭಿಕ್ಷಾಮಾಡಿಸಿ ಆಚಾರ್ಯರ ಸತ್ವಪರೀಕ್ಷೆಗಾಗಿ ಭಿಕ್ಷಾವಸಾನದಲ್ಲಿ ಕದಲೀಫಲಗಳನ್ನಿಟ್ಟು ಈ ಫಲಗಳನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಿದಾಗ ತನ್ನ ಮಹಾಮಹಿಮೆಯನ್ನು ಅವನಿಗೆ ತೋರಿಸಿ ಭಕ್ತಿಯನ್ನು ವೃದ್ಧಿಪಡಿಸುವ ಉದ್ದಿಶ್ಯ ಇನ್ನೂರಕ್ಕೂ(200) ಮಿಕ್ಕಿದ ಪಕ್ವಕದಲೀಫಲಗಳನ್ನು ಭುಂಜಿಸಲು ಆಶ್ಚರ್ಯಚಕಿತರಾದ ಗುರುಗಳಾದ ಅಚ್ಯುತಪ್ರೇಕ್ಷರು ಯಾವಾಗಲೂ ಯತಿಧರ್ಮೋಚಿತವಾಗಿ ಮಿತಭೋಜಿಗಳಾದ ಇವರಲ್ಲಿ ಇಂದಿನ ಕದಲೀಫಲಭಕ್ಷಣಕ್ಕೆ ವಿಶೇಷಕಾರಣ ವಿರಬೇಕೆಂದು ಊಹಿಸಿ ತತ್ವಜಿಜ್ಞಾಸುಗಳಾಗಿ

ಸುಚಿತ್ರ(ಶೋಭನಮನೋವೃತ್ತಿಯವರೇ) ಇಷ್ಟು ಫಲಗಳನ್ನು ಭುಂಜಿಸಿದರೂ ನಿಮ್ಮ ಕೃಶವಾದ ಉದರದಲ್ಲಿ ಸ್ವಲ್ಪವೂ ವೃದ್ಧಿಯು ಕಾಣುವುದಿಲ್ಲ. ಇದರ ಸತ್ಯವಾದ ವಿಷಯವನ್ನು ತಿಳುಹಿಸಬೇಕೆಂದೆನಲು, 'ಗುರುಗಳೇ ನನ್ನ ಉದರದಲ್ಲಿ ನಿತ್ಯವೂ ಜಾಜ್ವಲ್ಯಮಾನವಾದ ಅಂಗುಷ್ಠಪರಿಮಿತವಾದ ವೃಕನಾಮಕವಾದ ಅಗ್ನಿಯು ಇರುವುದು. ಅದು ನನಗೆ ಹಿತವೂ ಆಗಿ ಸಮಯವಿಶೇಷದಲ್ಲಿ ವಿಶ್ವವನ್ನೂ ದಹನಮಾಡುವುದರಲ್ಲಿ ಸಮರ್ಥವೂ ಆಗಿದೆ ಎಂದು ತಿಳಿಯಿರಿ' ಎಂತ ಗೂಢವಾಗಿ ತನ್ನ ವೃಕೋದರತ್ವವನ್ನೇ ಸೂಚಿಸಿದರು.

ದಕ್ಷಿಣದಿಕ್ಕನ್ನು ಕುರಿತು ಪ್ರವಹಿಸುವ ಪಯಸ್ವಿನೀನದಿಯನ್ನು ನೋಡಿ ಮುಂದೆ ಇಲ್ಲೆಯೇ ದುರ್ಗಾವತಾರ- ವಾಗಲಿರುವುದು, ಎಂದು ಮುಂದಿನ ಪ್ರಮೇಯವನ್ನು ಸ್ಮರಿಸಿಕೊಂಡು ವಂದಿಸಿ ಮುಂದೆ ಅನಂತಶಯನದಲ್ಲಿ ಬ್ರಹ್ಮಸೂತ್ರಗಳನ್ನು ಶಿಷ್ಯರಿಗೆ ಉಪದೇಶಿಸಿರುತ್ತಿರುವಾಗ ''ವಿಷ್ಣ್ವಾಖ್ಯ ಪರಬ್ರಹ್ಮನು ಜೀವಜಡರಿಂದ ವಿಲಕ್ಷಣನು, ಗುಣಪೂರ್ಣನು'' ಎಂದು ಪ್ರತಿಪಾದಿಸುತ್ತಿರುವಾಗ ಅದ್ವೈತಭಾಷ್ಯಕರ್ತರಾದ ಆದಿಶಂಕರಾಚಾರ್ಯರ ಎರಡನೇ ಅವತಾರಭೂತರಾದ ಬಾದಿಶಂಕರಾಚಾರ್ಯರು ವಾದಕ್ಕೆ ಬರಲು ಅವರನ್ನು ಜಯಿಸಿದರು. ಹಾಗೆಯೇ ಕನ್ಯಾತೀರ್ಥವನ್ನು ಹೊಂದಿ ಅಲ್ಲಲ್ಲಿ ತೀರ್ಥಗಳಲ್ಲಿ ಸ್ನಾನಾದಿಗಳನ್ನು ಮುಗಿಸಿಕೊಂಡು ಶ್ರೀರಾಮಸೇತುವನ್ನು ಹೊಂದಿ ಅಲ್ಲಿಯೇ ಚಾತುರ್ಮಾಸ್ಯ ವ್ರತವನ್ನು ಪೂರೈಸಿಕೊಂಡು ಶ್ರೀರಂಗಕ್ಷೇತ್ರಕ್ಕೆ ಅಧಿಪತಿಯಾದ ರಂಗನಾಥ ಸ್ವಾಮಿಯನ್ನು ನಮಸ್ಕರಿಸಿ ಪಯಸ್ವಿನೀ ನದಿಯ ಸಮೀಪವರ್ತಿಯಾದ ಒಂದಾನೊಂದು ದೇವಾಲಯದಲ್ಲಿ ಕುಳಿತರು.

ಒಂದಾನೊಂದು ದಿನ ಓರ್ವ ಶಿಷ್ಯಶ್ರೇಷ್ಠನು ಐತರೇಯಶಾಸ್ತ್ರದಲ್ಲಿರುವ ಒಂದು ಸೂಕ್ತವನ್ನು ಸೂಚಿಸಿ ಈ ಸಭೆಯಲ್ಲಿರುವ ಜನಸಮೂಹವು ಈ ಸೂಕ್ತದ ಅರ್ಥವನ್ನು ತಮ್ಮ ಮುಖದಿಂದ ಕೇಳಲು ಇಚ್ಛಿಸುವುದೆಂದು ವಿಜ್ಞಾಪಿಸಿದಾಗ ಶ್ರೀಮದಾಚಾರ್ಯರು ವರ್ಣಗಳ ಸೌಷ್ಠ್ಯ ಎಂದರೆ ಸ್ಪಷ್ಟತಾಪೂರ್ವಕವಾಗಿ ಅತಿತ್ವರಿತವೂ ಅಲ್ಲ ಅತಿಮಂದವೂ ಅಲ್ಲ ಆರೀತಿಯಲ್ಲಿ ಮೇಘಧ್ವನಿಯಂತೆ ಗಂಭೀರವಾಗಿ ಸೂಕ್ತಾರ್ಥವನ್ನು ಸೂಕ್ತಪ್ರತಿಪಾದ್ಯವಾಗಿ ವಿಷ್ಣುವನ್ನು ಸರ್ವಗುಣ- ಪರಿಪೂರ್ಣತ್ವೇನ ವರ್ಣಿಸಿದರು. ಆ ಸಭೆಯಲ್ಲಿರುವ ವಿದ್ವದ್ವರರು ಲಕ್ಷಣವಿಶಿಷ್ಟವಾಗಿ ಸೂಕ್ತಾರ್ಥವನ್ನು ವರ್ಣನೆಮಾಡು- ವುದರಲ್ಲಿ ಇವರು ದೇವಗುರುಗಳಾದ ಬೃಹಸ್ಪತ್ಯಾಚಾರ್ಯರನ್ನು ಜಯಿಸುವರೆಂದು ಮನಸಾ ಗೌರವವನ್ನು ಮಾಡಿ ಈ ಸೂಕ್ತಕ್ಕೆ ಇನ್ನೊಂದು ಅರ್ಥವನ್ನು ಹೇಳಿ ಶ್ರೀಮದಾಚಾರ್ಯರು ಹೇಳಿದ ಅರ್ಥವನ್ನು ಸರಿಯಿಲ್ಲವೆಂದು ಸೂಚಿಸಿದರು. ಆಗ ಪೂರ್ಣಪ್ರಜ್ಞರು 'ವಿದ್ವದ್ವರರೇ ವೇದವು ಮೂರು ಅರ್ಥವುಳ್ಳದ್ದು. ಕರ್ಮದೇವತಾ ಕೇವಲ ವಿಷ್ಣುಪರ ಹೀಗೆ. ಆದಕಾರಣ ನಿಮ್ಮ ಅರ್ಥವೂ ಎರಡೂ ಸೂಚಿಸಲ್ಪಡುವುದು. ಭಾರತವು ಹತ್ತು ಅರ್ಥವುಳ್ಳದ್ದು. ಭಾರತದಲ್ಲಿ ಇರುವ ವಿಷ್ಣುಸಹಸ್ರನಾಮವು ಶತಾರ್ಥವುಳ್ಳದ್ದು' ಎಂದು ಅನಲು ಪೂರ್ಣಪ್ರಜ್ಞರನ್ನು ಜಯಿಸುವ ಇಚ್ಛೆಯಿಂದ ಆ ವಿದ್ವದ್ವರರು ಆ ನಾಮಗಳ ಅರ್ಥಗಳನ್ನು ತಮ್ಮ ಮುಖದಿಂದ ಕೇಳಲು ಇಚ್ಛಿಸುವೆವು ಎಂದು ಹೇಳಿದರು. ಆಗ ಪೂರ್ಣಪ್ರಜ್ಞರು ಹಸನ್ಮುಖರಾಗಿ ನಾನು ಹೇಳುವ ಅರ್ಥವನ್ನು ನೀವು ಪುನಃ ಅನುವಾದ ಮಾಡಬೇಕೆಂದು ಹೇಳಲು, ನಾವು ಸಿದ್ಧರೆಂದು ಅತಿಯಾದ ಉದ್ಯಮವನ್ನು ಸೂಚಿಸಿದರು. ಆಗ ಪೂರ್ಣಪ್ರಜ್ಞರು ಶ್ರುತಿಸಮ್ಮತಿಪೂರ್ವಕವಾಗಿ ಮಹಾವ್ಯಾಕರಣದ ರೀತಿಯನ್ನು ಅನುಸರಿಸಿ ಆದಿಮವಾದ ವಿಶ್ವಶಬ್ದದ ಶತಾರ್ಥಗಳನ್ನು ವರ್ಣಿಸಲು ಆ ಒಂದು ನಾಮದ ಶತಾರ್ಥಗಳ ಧಾರಣೆಯಲ್ಲೇ ಅಶಕ್ತರಾಗಿ, 'ಹೇ ಸರ್ವಜ್ಞರೇ! ನಿಮ್ಮ ಪ್ರತಿಭೆಯು ದೇವತೆಗಳಲ್ಲಿ ಸಹಾ ದುರ್ಲಭವಾದುದು. ಹೀಗಿರುವಾಗ ಚಂಚಲಚಿತ್ತರಾದ ನಮ್ಮಲ್ಲಿ ದುರ್ಲಭವೆಂದು ಏನು ಅನ್ನಬೇಕು. ಸೌಮ್ಯಗುಣವುಳ್ಳ ಪೂರ್ಣಪ್ರಜ್ಞರೇ ನಮ್ಮ ಚಾಪಲ್ಯವನ್ನು ಕ್ಷಮಿಸಿರಿ' ಎಂದು ಹೇಳಿ ನಮಸ್ಕರಿಸಿದರು. ಶ್ರೀಮದಾಚಾರ್ಯರು ಕೇರಳದೇಶಸ್ಥ ಇನ್ನೊಂದು ದೇವಾಲಯವನ್ನು ಸೇರಿದರು.

ಒಂದಾನೊಂದು ಸಭೆಯಲ್ಲಿ ಶ್ರೀಮದಾಚಾರ್ಯರು ಕೆಲವು ಬ್ರಾಹ್ಮಣರಿಂದ 'ಕನ್ಯಾವಾರಯತಿಸೋಮಮಪಿ ಶ್ರುತಾವಿದತ್'' ಎಂಬ ಸೂಕ್ತಕ್ಕೆ ಇಂದ್ರದೇವರು ಕನ್ನಿಕೆಯಿಂದ ಆದೃತವಾದಾಗ ಸೋಮರಸವನ್ನು ಪಾನಮಾಡಿ ಆ ಕನ್ನಿಕೆಯನ್ನು ಸೂರ್ಯಸದೃಶವಾದ ಕಾಂತಿಯುಳ್ಳ ವಳನ್ನಾಗಿ ಮಾಡಿದರೆಂದು ಅರ್ಥವನ್ನು ವರ್ಣಿಸಿದಾಗ, ಆ ಸೂಕ್ತ ಘಟಕವಾದ 'ಅಪಾಲಾ' ಶಬ್ದಕ್ಕೆ ತರುಣಿ ಎಂಬ ಅರ್ಥವನ್ನು ಹೇಳಿದ್ದನ್ನು ಆಕ್ಷೇಪಿಸಿ ಆ ಸೂಕ್ತಸ್ಥವಾದ 'ಅಪಾಲಾ'ಶಬ್ದಕ್ಕೆ ಶ್ವಿತ್ರಿಣೀ(ಕುಷ್ಠೀ) ಎಂದು ಅರ್ಥವೆಂದು ಆಚಾರ್ಯರ ಅರ್ಥವನ್ನು ಆಕ್ಷೇಪಿಸಲು, ತನಗಿರುವ ದಿವ್ಯಜ್ಞಾನವನ್ನು ಪ್ರಕಾಶಿಸುವ ಬಗ್ಗೆ 'ಒಬ್ಬ ವಿದ್ವಾನ್ ಬರುವನು. ಅವನನ್ನು ಕೇಳಿರಿ' ಎಂದು ಹೇಳಿ ಅಲ್ಲಿಂದ ತೆರಳಿದರು. ಈ ವಿದ್ವಜ್ಜನರಿಂದ ಕೂಡಿದ ದೇಶವನ್ನು ಶೀಘ್ರದಲ್ಲಿಯೇ ಪೂರ್ಣಪ್ರಜ್ಞರಿಂದ ಸೂಚಿತವಾದ ಆಕಾರವಿಶೇಷಗಳುಳ್ಳ ಓರ್ವ ವಿದ್ವದ್ವರನು ಬರಲು ಅಲ್ಲಿ ಪೂರ್ವದಲ್ಲಿ ಮಿಳಿತರಾದ ವಿದ್ವಾಂಸರು ಹಿಂದೆ ವಿವಾದಾಸ್ಪದವಾದ

'ಅಪಾಲಾ'ಶಬ್ದದ ಎರಡು ಅರ್ಥವನ್ನು ಅನ್ನಲು, ಆ ವಿದ್ವಾಂಸನು ಪೂರ್ಣಪ್ರಜ್ಞರಿಂದ ಉಕ್ತವಾದ ತರುಣೀ ಎಂಬ ಅರ್ಥವನ್ನೇ ಹೇಳಿ ಈ ವಿದ್ವಾಂಸರು ಹೇಳಿದ ಶ್ವಿತ್ರಿಣೀ ಎಂಬ ಅರ್ಥವನ್ನು ನಿಷೇಧಿಸಿದನು. ಆಗ ಅಲ್ಲಿದ್ದ ಸರ್ವವಿದ್ವಾಂಸರು ಈ ಪೂರ್ಣಪ್ರಜ್ಞರನ್ನು ಸಮಸ್ತ ಶ್ರುತ್ಯರ್ಥವನ್ನು ಮಾತ್ರ ತಿಳಿದವರಲ್ಲ , ಭೂತಭವಿಷ್ಯದ್ವರ್ತಮಾನ ವಿಷಯಕಜ್ಞಾನರೂಪಸಾರ್ವಜ್ಞವುಳ್ಳವರೆಂದು ಕೊಂಡಾಡಿದರು.

ಪೂರ್ಣಬೋಧರು ಅಲ್ಲಲ್ಲಿ ದುರ್ವಾದಿಗಳನ್ನು ಖಂಡಿಸುತ್ತಾ ಸಜ್ಜನರಿಗೆ ತತ್ವಜ್ಞಾನವನ್ನು ಉಪದೇಶಿಸುತ್ತಾ ಕ್ರಮೇಣ ರೂಪ್ಯಪೀಠ ಪುರವನ್ನು ಬಂದು ಸೇರಿ ಗುರುಗಳಾದ ಅಚ್ಯುತಪ್ರೇಕ್ಷರಿಂದ ಕೂಡಿದ ಲಿಕುಚಕುಲದಲ್ಲಿ ಉದ್ಭವರಾದ (ಪೇಜತ್ತಾಯ ಕುಲ) ಆಶ್ರಮಜ್ಯೇಷ್ಠ ಯತಿಗಳಿಗೆ ಶ್ರೀಮದ್ಭಗವದ್ಗೀತಾಭಾಷ್ಯವನ್ನು ಮಾಡಿ ದೂರಪ್ರದೇಶಕ್ಕೆ ಹೋಗುವ ಮನುಷ್ಯನು ಸ್ವೀಯಜನಕ್ಕೆ ಕೊಡುವಂತೆ ಆ ಗೀತಾಭಾಷ್ಯವನ್ನು ಕೊಟ್ಟರು. ತನ್ನ ಗಮನದಲ್ಲಿ ದೇವಕಾರ್ಯವನ್ನು ಸೂಚಿಸುವ ವಿಶಾಲವಾದ ಬುದ್ಧಿಯುಳ್ಳ ಪೂರ್ನಪ್ರಜ್ಞರು ತೀರ್ಥಯಾತ್ರಾರ್ಥವಾಗಿ ತನ್ನಲ್ಲಿ ಅನುಜ್ಞೆಯನ್ನು ಅಪೇಕ್ಷಿಸಲು ಆಗ ಅಚ್ಯುತಪ್ರೇಕ್ಷರು ಪೂರ್ಣಪ್ರಜ್ಞರನ್ನು ಭಗವಂತನು ರಕ್ಷಿಸಲಿ ಎಂದು ಹರಸಿ ಅನುಜ್ಞೆಯನ್ನು ಕೊಟ್ಟರು.

ಮಲಯಪರ್ವತದ ಸಮೀಪವರ್ತಿಗಳಾದ ಜನರಿಂದ ಶ್ಲಾಘಿತರಾದ ಮರುದಂಶಸಂಭೂತರಾದ ಪೂರ್ಣಪ್ರಜ್ಞರು ಅಲ್ಲಲ್ಲಿ ತನ್ನ ಸತ್ತತ್ತ್ವೋಪದೇಶದಿಂದ ಪಾಂಥರ ಆಧ್ಯಾತ್ಮಿಕಾದಿ ತಾಪತ್ರಯಗಳನ್ನು ಪರಿಹರಿಸಿ ಉತ್ತರದಿಕ್ಕನ್ನು ಕುರಿತು ಹೋಗುವಾಗ ಅಲ್ಲಲ್ಲಿ ಇರತಕ್ಕಂಥ ತೀರ್ಥಗಳಲ್ಲಿ ಸ್ನಾನಮಾಡಿ ತೀರ್ಥಾಭಿಮಾನಿದೇವತೆಗಳನ್ನು ಶುದ್ಧೀಕರಿಸಿ ಬುದ್ಧಿಗೆ ಶುದ್ಧಿಯನ್ನು ಕೊಡುವ ತನ್ನ ಉಪದೇಶವಿಶೇಷದಿಂದ ಜನಸಮುದಾಯವನ್ನು ಉದ್ಧರಿಸುತ್ತಾ ಅನೇಕತೀರ್ಥಕ್ಷೇತ್ರಗಳಲ್ಲಿ ಸಂಚರಿಸಿಕೊಂಡು ತನ್ನ ಕರ್ಮವಿಶೇಷಗಳ ಸ್ಮರಣೆಮಾತ್ರದಿಂದ ತ್ರಿಲೋಕಸ್ಥಜನರಿಗೂ ಸುಖಪ್ರದಗಳಾದ ಕರ್ಮವಿಶೇಷ- ಗಳನ್ನು ಮಾಡಿಕೊಂಡು ಸಂಚರಿಸಿದರು. ನಿರಂತರದಲ್ಲಿಯೂ ಶ್ರೀಹರಿಯ ಪಾದವನ್ನು ಸೇವಿಸಿಕೊಂಡಿರುವ ರುದ್ರಾದಿಗ- ಳಿಂದಲೂ ಶ್ರೇಷ್ಠರಾದ ಪೂರ್ಣಪ್ರಜ್ಞರು ಗಂಗೆಯನ್ನು ದಾಟಿ ಮನುಷ್ಯರ ದೃಷ್ಟಿಗೋಚರವಾದ ಬದರಿಕಾಶ್ರಮವನ್ನು ಹೊಂದಿದರು.

ಆ ಬದರಿಕಾಶ್ರಮದಲ್ಲಿ ಅಖಂಡವಾದ ಭರತಖಂಡವನ್ನು ಅಲಂಕರಿಸಿಕೊಂಡಿರುವ ಶ್ರೀಮನ್ನಾರಾಯಣನನ್ನು ನಮಸ್ಕರಿಸಿ ಆ ನಾರಾಯಣದೇವರ ಮುಂದೆ ನೆರದಿರುವ ಜನರನ್ನು ಸ್ವಲ್ಪ ದೂರಸರಿಯುವಂತೆ ಮಾಡಿ ತನ್ನಿಂದ ಕೃತವಾದ ಶ್ರೀಮದ್ಗೀತಾಭಾಷ್ಯವನ್ನು ಶಿಷ್ಯರಿಗೆ ವ್ಯಾಖ್ಯಾನಮಾಡಿದರು. ಆಗ ಶ್ರೀಮನ್ನಾರಾಯಣದೇವರು, ಇವರಿಂದ ಆದ್ಯಪದ್ಯದಲ್ಲಿ 'ಗೀತಾರ್ಥಂ ವಕ್ಷ್ಯಾಮಿ ಶಕ್ತಿತಃ' ಎಂದು ರಚಿತವಾದ ಪದದ ಅರ್ಥವನ್ನು ಅನುವಾದಮಾಡಲು ಇಲ್ಲಿ ಸೂಚಿತವಾದ ಅರ್ಥ ಸೂಕ್ಷ್ಮವಾದರೂ ಸಮಗ್ರಾರ್ಥ ಅನುವಾದದಲ್ಲಿ ನೀವು ಸಮರ್ಥರೇ ಆದಕಾರಣ 'ಶಕ್ತಿಃ ಎಂಬಲ್ಲಿ ಲೇಶತಃ' ಎಂದಿರಲಿ ಎಂದು ಸೂಚಿಸಿದರು. ಶ್ರೀಮದಾಚಾರ್ಯರು ಪ್ರವಚನವನ್ನು ಮುಗಿಸಿ ಶ್ರಾಂತರಾದ ಶಿಷ್ಯರ ಉದ್ದಿಶ್ಯ ವಿಶ್ರಾಂತಿಯನ್ನು ಆಚರಿಸುತ್ತಿರಲು ಶ್ರೀಮನ್ನಾರಾಯಣದೇವರಿಂದ ಹಸ್ತತಾಡನಪೂರ್ವಕ ಪ್ರವಚನವು ನಡೆಯಲಿ, ಎಂಬ ಉಚ್ಚರಿತಶಬ್ದವನ್ನು ಶಿಷ್ಯರು ಕೇಳಿ ಆಶ್ಚರ್ಯಪಟ್ಟರು. ಶ್ರೀಮದಾಚಾರ್ಯರು ಪುನಃ ಸರ್ವೋತ್ತಮರಾದ ಶ್ರೀಮನ್ನಾರಾಯಣದೇವರ ಶಬ್ದದ ಭಾವವನ್ನು ತಿಳಿದು ಪ್ರವಚನವನ್ನು ಈ ಶಿಷ್ಯರಿಗಾಗಿ ಪುನಃ ಆರಂಭಿಸಿದರು. ತನ್ನಲ್ಲಿ ಸರ್ವದಾ ಸಂತುಷ್ಟನಾದ ಶ್ರೀಭಗವಂತನ ಸಂತೋಷವಿಶೇಷವನ್ನು ಇಚ್ಛಿಸಿಕೊಂಡು ಜನರು ಶೀತಲವಾದ ಯಾವ ಗಂಗಾಜಲಸ್ಪರ್ಶಕ್ಕೂ ಭಯಗ್ರಸ್ತರಾಗಿದ್ದಾರೋ, ಅಂತಹ ಗಂಗಾಜಲದಲ್ಲಿ ನಿತ್ಯವೂ ಅರುಣೋದಯ ಕಾಲಕ್ಕೆ ಮುಳುಗಿ ಸ್ನಾನವನ್ನು ಮಾಡಿಕೊಂಡು ಶುದ್ಧವಾದ ಉಪವಾಸ ಪೂರ್ವಕವಾಗಿ ಕಾಷ್ಠಮೌನ (ಈಪ್ಸಿತಾರ್ಥಕ್ಕೆ ಸೂಚನೆಯನ್ನು ಮಾಡದೇ ಇರುವ ಮೌನ) ವ್ರತವನ್ನಾಚರಿಸಿದರು. ಈ ರೀತಿಯಲ್ಲಿ ನಲವತ್ತೆಂಟುದಿವಸ ವ್ರತಾಚರಣೆಯಲ್ಲಿ ಇರುವ ತನ್ನ ಪಾದವನ್ನೇ ಸರ್ವದಾ ಧ್ಯಾನಿಸಿಕೊಂಡಿರುವ ಶ್ರೀಪೂರ್ಣಬೋಧರನ್ನು ವೇದವ್ಯಾಸದೇವರು ರಾತ್ರಿಯಲ್ಲಿ ಬಂದು ತನ್ನ ಮನುಷ್ಯ ಅಗಮ್ಯವಾದ ಹಿಮವತ್ಪರ್ವತದ ಉತ್ತರದಿಕ್ಕಿನಲ್ಲಿರುವ 'ಹಿರೇಬದರಿ' ಎಂದು ಪ್ರಸಿದ್ಧವಾದ ಆಶ್ರಮಕ್ಕೆ ಬರಲು ಪ್ರೇರಿಸಿದರು. ಆಗ ಪ್ರಕಾಶವಿಶೇಷದಿಂದ ಪರಮಾತ್ಮನೇ ಬಂದನೆಂದು ಮೇಲ್ತರಗತಿಯ ಶಿಷ್ಯರು ತಿಳಿಯುವವರಾದರು. ಶ್ರೀಪರಮಾತ್ಮನು ಆಚಾರ್ಯರಿಗೆ ಅಪ್ಪಣೆ ಕೊಡಿಸಿ ರಾತ್ರಿಯಲ್ಲೇ ತನ್ನ ಆಶ್ರಮವನ್ನು ಕುರಿತು ಹೋಗಲು ಬೆಳಗಾಗಲು ತನ್ನ ನಿತ್ಯಕರ್ಮಗಳನ್ನು ಮುಗಿಸಿ ಸೂರ್ಯೋದಯವಾದಾಗ ಹೊರಡಲು ಉದ್ಯುಕ್ತರಾಗಿ ಮೌನವ್ರತವನ್ನು ಧರಿಸಿದ ಶ್ರೀಪೂರ್ಣಪ್ರಜ್ಞರು ಶಿಷ್ಯರಲ್ಲಿ ಕರುಣಾಳುಗಳಾದಕಾರಣ ಶಿಷ್ಯಶಿಕ್ಷಾರ್ಥವಾಗಿ ಹೇಳಲಿರುವ ಪ್ರಮೇಯವನ್ನು ಬರೆದರು. '' ಈ ಬದರಿಕಾಶ್ರಮಕ್ಷೇತ್ರದಷ್ಟು

ಪಾಪಘ್ನವಾದ ಕ್ಷೇತ್ರವು ಇನ್ನೊಂದಿಲ್ಲ. ಈ ಗಂಗಾಜಲಕ್ಕೆ ಸಮವಾದ ಜಲವು ಪಾವಿತ್ರ್ಯದಾಯಕವಾದುದು ಇನ್ನೊಂದಿಲ್ಲ. ಶ್ರೀವಿಷ್ಣುವಿಗೆ ಸದೃಶವಾದ ದೇವತೆಯೂ ಮೋಕ್ಷಾದಿಪುರುಷಾರ್ಥದಾಯಕವಾದುದ್ದು ಬೇರೆ ಇಲ್ಲ. ನಿಮಗೆ ಹಿತಬೋಧಕ ವಾದ ವಚನ ನನ್ನ ಈವಚನದಿಂದ ಭಿನ್ನವಾದುದು ಇಲ್ಲ. ನಾನು ಶ್ರೀವ್ಯಾಸರೂಪಿ ಪರಮಾತ್ಮನನ್ನು ನೋಡಲು ಹೊರಡುವೆನು. ಅವನ ಅಪ್ಪಣೆಯಾದಲ್ಲಿ ಹಿಂತಿರುಗಿ ಬರುವೆನು. ಅವನ ಅಭಿಮತವನ್ನು ಸಾಕಲ್ಯವಾಗಿ ತಿಳಿಯಲು ನನಗೆ ಶಕ್ತಿಯಿಲ್ಲ. ಆತನೇ ತಿಳಿದವನು. ನಿಮಗೆ ಮಂಗಳವಾಗಲಿ ಎಂದು ಬರೆದು ಹೊರಟರು. ಶಿಷ್ಯರು ಅನಾಥರಾದ ನಮ್ಮನ್ನು ಕರುಣಾಳುಗಳಾದ ತಾವು ಬಿಡಬಾರದು ಎಂದು ಆತುರವುಳ್ಳವರಾದಾಗ್ಯೂ ಮೌನವ್ರತದ ಭಂಗಭಯದಿಂದ ಹೇಳಲು ಸಮರ್ಥರಾಗಲಿಲ್ಲ. ಪೂರ್ಣಪ್ರಜ್ಞರ ಹತ್ತಿರ ಮೂರುಸಲ ಐತರೇಯ ಉಪನಿಷತ್ತನ್ನು ಶ್ರವಣಮಾಡಿದ ಸತ್ಯತೀರ್ಥರೆಂಬ ಓರ್ವಯತಿಗಳು ಆಚಾರ್ಯರ ವಿರಹವನ್ನು ಸಹಿಸಲಶಕ್ಯರಾಗಿ ಅನುಸರಿಸಿ ಹೋಗಲು ದುರ್ಗಮವಾದ ಮಾರ್ಗವನ್ನು ಧಾವಿಸಿಕೊಂಡು ಹೋದಾಗ್ಯೂ ಸೂರ್ಯನು ಅಸ್ತಮಾನವನ್ನು ಹೊಂದಲು ಸಮೀಪವಾದಾಗ ಲೀಲೆಯಿಂದ ಅತಿವೇಗಯುಕ್ತವಾಗಿ ಪರ್ವತದಿಂದ ಪರ್ವವನ್ನು ಆಕ್ರಮಣಮಾಡುವ ಪೂರ್ಣಪ್ರಜ್ಞರಿಗೆ ಇವರು ಬಹುದೂರವರ್ತಿ ಗಳಾದಾಗ ಶ್ರೀಮದಾಚಾರ್ಯರು ಸ್ವಲ್ಪ ಹಿಂದೆ ತಿರುಗಿ ತನ್ನ ಹಸ್ತಾಭಿನಯದಿಂದ ಹಿಂದೆ ಹೋಗಿ ಎಂದು ಸೂಚಿಸಲು ಸ್ವಯಂವ್ಯಾಘ್ರಾದಿಗಳಿಂದ ಭೀತರಾದ ಸತ್ಯತೀರ್ಥರು ದಿನದ ಬಹುಭಾಗದಲ್ಲಿ ಹೊಂದಿದ ಮಾರ್ಗವನ್ನು ಒಂದೇ ಮುಹೂರ್ತದಲ್ಲಿ ಹಿಂತಿರುಗಿ ಆಶ್ರಮವನ್ನು ಹೊಂದಿ ತನ್ನ ಸತೀರ್ಥ್ಯಜನರನ್ನು ನೋಡಿ ಶ್ರೀಮದಾಚಾರ್ಯರು ಪರ್ವತದಿಂದ ಪರ್ವತವನ್ನು ಆಕ್ರಮಿಸುವಾಗ ಹನುಮಂತದೇವರ ಹಾಗೆ ಮತ್ತು ಭೀಮಸೇನದೇವರಹಾಗೆ ಪರ್ವತಶೃಂಗದಲ್ಲಿ ಭೀಕರ-ರೂಪವುಳ್ಳವರಾಗಿ ಕಾಣುವರೆಂದು ಅವರ ಮಹಿಮಾವಿಶೇಷವನ್ನು ವರ್ಣಿಸುತ್ತಾ ಶ್ರೀಮದಾಚಾರ್ಯರನ್ನು ಎಲ್ಲರೂ ಸ್ಮರಿಸಿದರು.

ಅತ್ತ ಶ್ರೀಪೂರ್ಣಪ್ರಜ್ಞರು, ಯಾವ ತರಹದ ಭಯವೂ ಇಲ್ಲದೇ ವಿಷಭರಿತಗಳಾದ ಬಹುಪ್ರಾಣಿಗಳಿಂದ ಮತ್ತು ಭಯಾನಕ ಮೃಗಗಳಿಂದ ಅಲ್ಲದೇ ಅತ್ಯಂತವಾಗಿ ವಿಕಾಸವನ್ನು ಹೊಂದಿದ ಕಮಲಗಳಿಂದ ಯುಕ್ತವಾದ ಕೆರೆಗಳಿಂದ ತುಂಬಿದ ಜನರ ಸುಖಾರ್ಥವಾಗಿಯೋ ಎಂಬಂತೆ ವಿಕಾಸವನ್ನು ಹೊಂದಿದ ಕುಸುಮಗಳಿಂದ ಭರಿತವಾದ ಅಲ್ಲಲ್ಲಿ ಮಕರತಮಯವಾದ ಪ್ರದೇಶವುಳ್ಳ ಅತ್ಯುನ್ನತವಾದ ಸಣ್ಣಸಣ್ಣ ಉಪಪರ್ವತಗಳಿಂದ ಕೂಡಿದ ಆ ಪರ್ವತಶ್ರೇಷ್ಠವನ್ನು ನೋಡಿ ಶೋಭನವಾದ ವನಮಾಲಾದಿಂದ ಪ್ರಕಾಶನಶೀಲನಾದ ಸ್ವಯಂ ರಮಣೀಯನಾದ ಸೌವರ್ಣಕಟಕಾದಿಗಳಿಂದ ಕೂಡಿದ ಸಚ್ಚಿದಾನಂದಾತ್ಮಕ- ವಿಗ್ರಹನಾದ ತನ್ನ ಆನಂದಕ್ಕೆ ಕಾರಣನಾದ ಶ್ರೀಮನ್ನಾರಾಯಣ ನನ್ನು ಸ್ಮರಿಸಿದರು.

ಹಿಮಪರ್ವತದ ಉತ್ತರಭಾಗದಲ್ಲಿ ಬದರೀವೃಕ್ಷಗಳಸಮುದಾಯದಿಂದ ಶೋಭಿತವಾದ ಶ್ರವಣಕ್ಕೆ ಮನೋಹರವಾಗಿ ಧ್ವನಿಗೈಯುವ, ಶುಕಸಾರಿಕಾದಿಪಕ್ಷಿಗಳಿಂದ ಅಲಂಕೃತವಾದ ಪುಷ್ಪಗಳಸಮುದಾಯದಿಂದ ತುಂಬಿದ, ತನಗೆ ಮನೋಭೀಷ್ಟ-ದಾಯಕವಾದ ಅಲ್ಪಜ್ಞಾನಿಗಳಿಂದ ಅಗಮ್ಯವಾದ ಪರಸ್ಪರಮಾತ್ಸರ್ಯರಹಿತಗಳಾದ ಪ್ರಾಣಿಗಳಿಂದ ಕೂಡಿದ, ವೈಕುಂಠದಂತೆ ಪರಮಾತ್ಮನಿಗೆ ಆಶ್ರಯವಾದ ಆಶ್ರಮವಿಶೇಷವನ್ನು ಪ್ರವೇಶಮಾಡುವ, ಮೂವತ್ತೆರಡು ಉತ್ತಮಲಕ್ಷಣಗಳಿಂದ ಶೋಭಿತರಾದ ಸ್ವರ್ಣಮಯತಾಲವೃಕ್ಷದಂತೆ ಇರುವ ಹಾಸಭರಿತವಾದ ಮುಖದಿಂದ ಕೂಡಿದ ಸನ್ಯಾಸಾಶ್ರಮಿಗಳ ಚಿನ್ಹೆಯನ್ನು ಧರಿಸಿರುವ ಪೂರ್ಣಪ್ರಜ್ಞರನ್ನು ನೋಡಿ ಅಲ್ಲಿರುವ ಋಷಿವರ್ಯರು ವಿಸ್ಮಯಯುಕ್ತರಾಗಿ ಶ್ರುತಿನಾಥರಾದ ವೇದವ್ಯಾಸದೇವರ ದರ್ಶನೇಚ್ಛೆಯಿಂದ ಸ್ವಯಂಬ್ರಹ್ಮದೇವರೇ ಬಂದರೋ ಅಥವಾ ಯತಿರೂಪರಾಗಿ ಮುಖ್ಯವಾಯುದೇವರೇ ಬಂದರೋ ಇತ್ಯಾದಿ ನಾನಾರೂಪದಿಂದ ಆಲೋಚನೆ ಮಾಡಿದರು. ಕುತೂಹಲ ಯುಕ್ತರಾದ ಋಷಿವರ್ಯರ ದರ್ಶನವಿಷಯರಾದ ಶ್ರೀಮದಾಚಾರ್ಯರು ಭಕ್ತ್ಯಾತಿಶಯದಿಂದ ದೇವತರುವಂತೆ ಶೋಭಿಸುವ ಬದರೀವೃಕ್ಷವನ್ನು ನೋಡಿ, ಆ ಅದರ ವೇದಿಕಾದಲ್ಲಿ ಮುನಿಗಳ ಮಧ್ಯದಲ್ಲಿರುವ ಮೂರುಲೋಕಕ್ಕೂ ಅಲಂಕಾರಪ್ರಾಯರಾದ ಸತ್ಯವತೀ ಸುತರಾದ ವ್ಯಾಸದೇವರನ್ನು, ತನ್ನ ಅತಿನಿರ್ಮಲವಾದ ಹೃದಯಕಮಲದಲ್ಲಿ ನಿರಂತರ ನೋಡುತ್ತಾ ಇದ್ದರೂ ಕ್ಷಣೇಕ್ಷಣೇ ಅಭಿನವತಯಾ ತೋರುವ ಶ್ರೀಹರಿಯನ್ನು ನೋಡಿ ವಿಸ್ಮಿತರಾಗಿ, ಪಾಂಡವರೇ ಮೊದಲಾದ ಸಜ್ಜನರಲ್ಲಿ ಪೂರ್ಣವಾದ ಅನುಗ್ರಹವನ್ನು ಮಾಡಿದ ಜ್ಞಾನಿಪುರುಷರ ರಕ್ಷಣೆಗೆ ಅಲ್ಲಲ್ಲಿ ಸಂಚರಿಸುತ್ತಾ ಉಪದೇಶಿಸಿಕೊಂಡಿದ್ದ, ಈಗ ಕಾಲದ ಪ್ರವೃತ್ತಿಗಾಗಿ ಜನರ ದೃಷ್ಟಿಗೋಚರತೆಯನ್ನು ಬಿಟ್ಟು ಈ ಆಶ್ರಮದಲ್ಲೇ ವಾಸಿಸುವ ಉತ್ತಮವಾದ ಕೃಷ್ಣಾಜಿನವನ್ನು ಅಲಂಕರಿಸುವ ವಿಕಸಿತವಾದ ನೀಲಕಮಲದಂತೆ ಸುಂದರವಾದ ಆಕೃತಿಯುಳ್ಳ ತನ್ನ ಕಣ್ಮನಗಳಿಗೆ ಆನಂದವನ್ನು ಕೊಡುವ ಆ ವೇದವ್ಯಾಸದೇವರ ಅಗಣಿತಗುಣಗಳಿಂದ ಪೂರಿತವಾದ ನಿಖಿಲದೋಷಗಳಿಗೆ ವಿದೂರವಾದ

ಸಚ್ಚಿದಾನಂದಾತ್ಮಕವಾದ ಲಕ್ಷ್ಮೀಬ್ರಹ್ಮವಾಯು- ಗರುಡಶೇಷರುದ್ರಾದಿಗಳಿಂದ ಶಿರಸಾ ವಂದಿತವಾದ ಧ್ವಜವಜ್ರಾಂಕುಶಾದಿಚಿಹ್ನೆಗಳಿಂದ ತುಂಬಿದ ಪಾದಕಮಲಗಳನ್ನು ವಂದಿಸಿದರು.

ಪರಾಶರಪುತ್ರರಾದ ವೇದವ್ಯಾಸದೇವರು ಉತ್ತಮಗುಣಗಳಿಂದ ತುಂಬಿ ಭಕ್ತ್ಯತಿಶಯದಿಂದ ನಮಸ್ಕಾರವನ್ನು ಮಾಡುವ ಶ್ರೀಮದಾಚಾರ್ಯರನ್ನು ನೋಡಿ ತನ್ನ ಕೋಮಲಗಳಾದ ಕರಗಳಿಂದ ಎಬ್ಬಿಸಿ ಸ್ನೇಹಪೂರ್ಣವಾದ ಮನಸ್ಸಿನಿಂದ ಪೂರ್ಣಪ್ರಜ್ಞರನ್ನು ಆಲಿಂಗಿಸಿದರು. ಜಗಜ್ಜನ್ಮಾದಿಕಾರಣರಾದ ಈ ವ್ಯಾಸದೇವರ ಸಮಗ್ರವಾದ ಲಾಲನೆಯನ್ನು ಪುತ್ರರಾದ ಶುಕಾಚಾರ್ಯರು ಹೊಂದಲಿಲ್ಲ, ಅಂತಹ ಲಾಲನೆಯನ್ನು ಹೊಂದಿದ ಇವರೇ ಧನ್ಯರು, ಎಂದು ಭಾವಿಸಿ ವೇದವ್ಯಾಸದೇವರ ಶಿಷ್ಯರಾದ ಅತಏವ ಚತುರರಾದ ಋಷಿಗಳು ಅನುರೂಪವಾದ ಆಸನವನ್ನು ಕೊಟ್ಟರು.

ಸತ್ಯವತೀಪುತ್ರರಾದ ವೇದವ್ಯಾಸದೇವರು ಪೂರ್ಣಪ್ರಜ್ಞರಿಗೆ 'ಕುಳಿತುಕೊಳ್ಳಿ' ಎಂದು ಹೇಳಿ ತಾನು ಆಸನದಲ್ಲಿ ಕುಳಿತುಕೊಳ್ಳೋಣ ಶ್ರೀಮದಾಚಾರ್ಯರು ಋಷಿಗಳನ್ನು ತನ್ನ ಮಂದಹಾಸಅವಲೋಕನಾದಿಗಳಿಂದ ಗೌರವಿಸಿ ಕೂತರು. ಸಮೀಪವರ್ತಿಗಳಾದ ಋಷಿಗಳು ಶ್ರೇಷ್ಠರಾದ ವ್ಯಾಸದೇವರಿಂದ ಪೂರ್ಣಪ್ರಜ್ಞರನ್ನು ಮುಖ್ಯಪ್ರಾಣದೇವರ ಅವತಾರರೆಂದು ತಿಳಿದು ವಿಧಿಯುಕ್ತವಾಗಿ ಮಾನನಾವನ್ನು ಮಾಡಿ ಸರ್ವಜ್ಞರಾದ ಈ ಗುರುಶಿಷ್ಯರ ಶ್ರುತಿಗೆ ಸುಖವನ್ನು ಕೊಡುವ ಸಂಭಾಷಣೆಯನ್ನು ಕೇಳಿ ಉತ್ತಮವಾದ ಸಂತೋಷವನ್ನು ಹೊಂದಿದರು.

ಬುದ್ಧಿಪ್ರತಿಭಾದಿಗುಣಗಳಿಂದ ಋಷಿಗಳಿಗೆ ವಿಸ್ಮಯವನ್ನು ತಂದುಕೊಟ್ಟ ಪೂರ್ಣಪ್ರಜ್ಞರು ಏಕಾಂತದಲ್ಲಿ ವೇದನಾಯಕರಾದ ವೇದವ್ಯಾಸದೇವರನ್ನು ಉಪಸತ್ತಿಮಾಡಿ ಇತಿಹಾಸ, ಮನೋಹರಗಳಾದ ಪುರಾಣಗಳು, ನಿರ್ದುಷ್ಟವಾದ ಪಂಚರಾತ್ರ ಇವುಗಳ ನಿಜವಾದ ತಾತ್ಪರ್ಯದಿಂದ ಕೂಡಿದ ವೇದಸಮುದಾಯಗಳಾದ ಪರಮಾರ್ಥವನ್ನು ಅಪರಿಮಿತಗಳಾದ ಸಾರ್ವಜ್ಞಾದಿಗುಣಗಳುಳ್ಳ ಶ್ರೀ ವೇದವ್ಯಾಸ ದೇವರಿಂದ ಕೇಳಿದರು. ಅನಂತರದಲ್ಲಿ ವೇದವ್ಯಾಸದೇವರಿಂದ ಕೂಡಿಕೊಂಡು ಇನ್ನೊಂದು ಆಶ್ರಮದಲ್ಲಿ ಪ್ರಕಾಶಮಾನರಾಗಿರುವ ಧೂಮರಹಿತವಾದ ಬೆಂಕಿಯಂತಿರುವ ವಲ್ಕಲಾ ಮೌಂಜಿ, ಮೇಖಲಾ, ಜಟಾದಿಗಳಿಂದ ಕೂಡಿದ ಸ್ವರೂಪಭೂತವಾದ ಜ್ಞಾನಾನಂದಾದಿಗಳಿರುವ ನಾರಾಯಣದೇವರನ್ನು ನೋಡಿ, ಸರ್ವರಿಗೂ ಆಶ್ರಯಭೂತನಾದ ಬ್ರಹ್ಮನ ಕೈಯಿಂದ ವೇದವನ್ನು ಹಯಗ್ರೀವಾಸುರನು ಅಪಹರಿಸಲು ಬ್ರಹ್ಮದೇವರ ಪ್ರಾರ್ಥನಾ- ನುಸಾರವಾಗಿ ಮತ್ಸ್ಯರೂಪವನ್ನು ಸ್ವೀಕರಿಸಿದ, ಆದ್ಯರಾದ ಚತುರ್ಮುಖರಿಗೆ ವೇದಬೋಧನಾರ್ಥವಾಗಿ ಹಯಗ್ರೀವರೂಪವನ್ನು ತಾಳಿದ, ದೇವದೈತ್ಯರು ಒಂದಾಗಿ ಅಮೃತಕ್ಕಾಗಿ ಕ್ಷೀರಸಮುದ್ರವನ್ನು ಮಥಿಸಲು ಉದ್ಯುಕ್ತರಾದಾಗ ಮಂದರಪರ್ವತವು ಮುಳುಗಲು ತದುದ್ಧಾರಾರ್ಥವಾಗಿ ಕೂರ್ಮರೂಪವನ್ನು ಸ್ವೀಕರಿಸಿದ, ಹಿರಣ್ಯಾಕ್ಷನಿಂದ ಬಾಧೆ ಹೊಂದಿದ ಭೂಮಿಯ ಉದ್ಧಾರಣಾರ್ಥವಾಗಿ ವರಾಹರೂಪವನ್ನು ತಾಳಿದ, ಭಕ್ತನಾದ ಕುಮಾರಪ್ರಹ್ಲಾದನನ್ನು ಪಿತನಾದ ಹಿರಣ್ಯಕಶಿಪುವು ಕೊಲ್ಲಲು ಉದ್ಯುಕ್ತನಾದಾಗ ನೃಹರಿರೂಪವನ್ನು ಸ್ವೀಕರಿಸಿ ಅವನನ್ನು ಕೊಂದು ಭಕ್ತಪ್ರಹ್ಲಾದನನ್ನು ರಕ್ಷಿಸಿದ, ಹಾಗೆಯೇ ಬಲಿಯಿಂದ ಸ್ವರ್ಗವು ಅಪಹೃತವಾದಾಗ ವಾಮನರೂಪವನ್ನು ತಾಳಿ ಇಂದ್ರನಿಗೆ ರಾಜ್ಯವನ್ನು ಕೊಟ್ಟಿರುವ, ಭೃಗುಕುಲದಲ್ಲಿ ಪರಶುರಾಮರೂಪದಿಂದ ದುಷ್ಟರಾಜವೃಂದವನ್ನು ಸದೆಬಡಿದ, ಪುತ್ರನಿಗೆ ಪಿತೃವಾಕ್ಯಪರಿಪಾಲನೆಯು ಧರ್ಮವೆಂದು ಬೋಧಿಸುವ ಬಗ್ಗೆ ಪರಂಪರಾಪ್ರಾಪ್ತರಾಜ್ಯವನ್ನು ಬಿಟ್ಟು ವನವನ್ನು ತೆರಳಿದ ಶ್ರೀರಾಮನನ್ನು ಶುಕ್ಲಕೇಶಾವೇಶದಿಂದ ಕೂಡಿ ಕೃಷ್ಣಾಗ್ರಜನಾಗಿ ಜನಿಸಿದ ಬಲರಾಮನನ್ನೂ , ದೃಪ್ತಕ್ಷತ್ರಿಯರಿಂದ ಆಕ್ರಾಂತಳಾದ ಭೂಮಿಯ ಭಾರಹರಣಾರ್ಥವಾಗಿ ದೇವಕೀಸುತನಾಗಿ ಜನಿಸಿದ ಕೃಷ್ಣನನ್ನೂ, ಇತರಾದೇವಿಯ ಪುತ್ರನಾಗಿ ಮಹಿದಾಸ ನಾಮಕನಾಗಿ ವೈಷ್ಣವತಂತ್ರವನ್ನು ರಚಿಸಿದ, ಕಲಿಯುಗದ ಅಂತ್ಯದಲ್ಲಿ ಧರ್ಮರಕ್ಷಣಕ್ಕಾಗಿ ಕಲ್ಕಿನಾಮಕನಾಗಿ ಅವತರಿಸಿದ, ಯಜ್ಞರೂಪಿಯಾಗಿ ಸಕಲಯಜ್ಞಭೋಕ್ತೃವಾಗಿರುವ, ಆಯುರ್ವೇದಪ್ರವರ್ತಕನಾಗಿ ಧನ್ವಂತರಿ ನಾಮದಿಂದ ಪ್ರಸಿದ್ಧನಾದ, ದೇವತೆಗಳಿಗೆ ಅಮೃತಪಾನಮಾಡಿಸುವ ಉದ್ದಿಶ್ಯ ಮೋಹಿನೀ ರೂಪವನ್ನು ತಾಳಿದ, ಯೋಗಶಾಸ್ತ್ರಪ್ರವರ್ತಕನಾಗಿ ದತ್ತಾತ್ರೇಯರೂಪನಾದ, ಹಾಗೆ ಕುಮಾರ, ಹಂಸ, ಇತ್ಯಾದಿ ಶತ, ಸಹಸ್ರ, ಅನಂತರೂಪಿಯಾದ ಶ್ರೀಪರಮಾತ್ಮನ ಧ್ಯಾನಮಾಡಿದರು.

ತತ್ವಜ್ಞಾನದ ಉಪದೇಶವನ್ನು ಭಕ್ತರಿಗೆ ಕೊಡುವುದಕ್ಕೋಸ್ಕರ ಚಿಕ್ಕಬದರಿಯಲ್ಲಿರುವ ಶಿಷ್ಯವೃಂದವನ್ನು ಕುರಿತು ಹೋಗೆಂದು ಸಂಭಾಷಣಾನಂತರದಲ್ಲಿ ಶ್ರೀವೇದವ್ಯಾಸದೇವರಿಂದ ಆಜ್ಞಪ್ತರಾದ ಹಾಗೆ ಅಲ್ಲಿ ಇರುವ ಋಷಿವರರಿಂದ ಆವೃತವಾದ ಪೂರ್ಣಪ್ರಜ್ಞರು ವ್ಯಾಸನಾರಾಯಣರಿಗೆ ನಮಸ್ಕಾರಮಾಡಿ ತಮ್ಮ ಶಿಷ್ಯರನ್ನು ಹೊಂದಿ ಅಲ್ಲಲ್ಲಿ ಭಕ್ತಜನರಿಂದ ಕೊಡಲ್ಪಟ್ಟ ಭಿಕ್ಷಾನ್ನವನ್ನು ಸ್ವೀಕರಿಸಿ

ಬ್ರಹ್ಮಸೂತ್ರಕ್ಕೆ ಸೂತ್ರಕರ್ತರಾದ ವೇದವ್ಯಾಸದೇವರ ಇಚ್ಛಾನುಗುಣವಾಗಿ ಭಾಷ್ಯವನ್ನು ಮಾಡಿ ಷಟ್‌ಶಾಸ್ತ್ರಪಂಡಿತರಾದ ಶೋಭನಭಟ್ಟರನ್ನು ವಾದದಲ್ಲಿ ಜಯಿಸಿ ಭಕ್ತಿನಮ್ರರಾದ ಅವರನ್ನು ಶಿಷ್ಯತ್ವೇನ ಸ್ವೀಕರಿಸಿ ಪುನಃ ರೌಪ್ಯಪೀಠವನ್ನು ಹೊಂದಿ ತಮ್ಮ ಗುರುಗಳಾದ ಅಚ್ಯುತಪ್ರೇಕ್ಷರಿಗೂ, ಅವರ ಸಖಿಗಳಾದ ಹಿಂದೆ ಹೇಳಿದ ಲಿಕುಚಕುಲಾನ್ವಯರಾದ ಯತಿಗಳಿಗೂ ಭಾಷ್ಯಾರ್ಥವನ್ನು ಬೋಧಿಸಿ ಅವರ ಹೃದ್ಗತವಾದ ಕಲಿಮಲವನ್ನು ದೂರೀಕರಿಸಿದರು.

ಪೂರ್ಣಪ್ರಜ್ಞರು ಒಂದಾನೊಂದು ದಿನ ಶಿಷ್ಯರಿಂದ ಕೂಡಿ ಕಡಲದಡಕ್ಕೆ ಹೋಗಿ ಸ್ನಾನಾಹ್ನಿಕ ಮುಗಿಸಿ ನೂತನವಾಗಿ ಶ್ರೀಹರಿಯನ್ನು ಐದು ಅಧ್ಯಾಯಗಳಿಂದ ವರ್ಣನೆ ಮಾಡಿ ವ್ಯಾಖ್ಯಾನ ಮಾಡುತ್ತಿರಲು ಕಡಲಮಧ್ಯದಲ್ಲಿ ಗಾಳಿಗೀಡಾಗಿ ಆಸನ್ನಪತನವುಳ್ಳ(ಮುಳುಗುತ್ತಿರುವ) ನಾವೆಯ ಪತಿಯು ಅಲ್ಲಿಯ ಜನರಿಂದ ಕೂಡಿ ಭಯಚಕಿತನಾಗಿ ಆಗಲೇ ಕರ್ಮ- ಪರಿಪಾಕವನ್ನು ಹೊಂದಿ ಸಮುದ್ರತಟದಲ್ಲಿ ವ್ಯಾಖ್ಯಾನವನ್ನು ನಡಿಸಿಕೊಂಡಿರುವ ಪೂರ್ಣಪ್ರಜ್ಞರನ್ನು ಮೊರೆಹೊಂದಿದಾಗ ಅವರು ತನ್ನ ಯೋಗಶಕ್ತಿಯಿಂದ ನಾವೆಯನ್ನು ಝುಂಝಾವಾತದಿಂದ ಪಾರಗಾಣಿಸಲು ನಾವಿಕರಿಂದೊಡಗೂಡಿದ ಆ ವರ್ತಕನು ತಮ್ಮ ತನುಧನಗಳ ರಕ್ಷಣೆಮಾಡಿದ ಪ್ರಯುಕ್ತ ಕೃತಜ್ಞತೆಯನ್ನು ಅರ್ಪಿಸಿ 'ಕೃತೇ ಚ ಪ್ರತಿಕರ್ತವ್ಯಂ ಏಷ ಧರ್ಮಃ ಸನಾತನಃ' ಎಂದಿದ್ದ ಕಾರಣ ನಮ್ಮಿಂದೇನಾದರೂ ಸೇವೆಯನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸೋಣ, ವಿರಕ್ತಶಿಖಾಮಣಿಗಳಾದ ಶ್ರೀಮದಾಚಾರ್ಯರು 'ನಾವು ಯತಿಗಳು ಕನಕಾದ್ಯಪೇಕ್ಷಾ ಶೂನ್ಯರು, ಇದ್ದರೆ ಯತಿಗಳಿಗೆ ಧರಿಸಲು ಯೋಗ್ಯವಾದ ಗೋಪೀಚಂದನವನ್ನು ಕೊಡು' ಎಂದೆನಲು, ಸಂತೋಷಚಿತ್ತನಾದ ಆ ವರ್ತಕನು ಸ್ವಯಂಭಾಗ್ಯಪರಿವರ್ತಿತ- ನಾಗಿ ಯಾವ ಗೋಪೀ ಚಂದನದಲ್ಲಿ ವಿಶ್ವಕರ್ಮನಿರ್ಮಿತವಾದ ರುಕ್ಮಿಣ್ಯಾದಿ ಅಷ್ಟಮಹಿಷಿಯರಿಂದ ಪೂಜಿತವಾದ ಶ್ರೀಕೃಷ್ಣನ ವಿಗ್ರಹವಿತ್ತೋ ಅದೇ ಗೋಪೀಚಂದನವನ್ನು ಅರ್ಪಿಸಲು ಆಚಾರ್ಯರು ಸ್ವೀಕರಿಸಿದರು. ಸ್ವಯಂ ಸರ್ವಜ್ಞರಾದ ಪೂರ್ಣಪ್ರಜ್ಞರು ಭಗವಂತನ ಸಂಕಲ್ಪಾನುಸಾರ ವಾಗಿಯೇ ಅಲ್ಲಿಗೆ ಹೋದದ್ದು. ಅತಏವ ವಾತಾಘಾತಕ್ಕೆ ಸಿಲುಕಿದ ನಾವೆಯನ್ನು ನೋಡಿ ತಕ್ಷಣವೇ ದ್ವಾದಶಸ್ತೋತ್ರದ ಆರನೇ ಅಧ್ಯಾಯದ ಬುಡದಲ್ಲಿ 'ದೇವಕಿನಂದನ ನಂದಕುಮಾರ' ಎಂದು ಆರಂಭಿಸಿ ದಶಾವತಾರಸ್ತುತಿಯಮಧ್ಯದಲ್ಲಿ ಕೃಷ್ಣನ ಸ್ತುತಿಯ ಪ್ರಸಂಗಬಂದಾಗ ಪುನಃ 'ದೇವಕಿ ನಂದನ ಸುಂದರರೂಪ' ಎಂದು ವಿಶೇಷತಃ ಶ್ರೀಕೃಷ್ಣನನ್ನು ವರ್ಣನೆಮಾಡಿದ್ದಾಗಿ ಐತಿಹ್ಯವು. ಯದ್ಯಪಿ ಮಾರ್ಗಶೀರ್ಷಬಹುಳ ಅಮಾವಾಸ್ಯಾದಿವಸ ತೀರ್ಥಹಳ್ಳಿಯಲ್ಲಿ ತುಂಗಭದ್ರಾಸ್ನಾನವು ಪುರಾಣಪ್ರಸಿದ್ಧ, ಆ ಅಮಾವಾಸ್ಯದಿವಸ ಈ ವಡಭಾಂಡೇಶ್ವರ ಎಂದು ಪ್ರಸಿದ್ಧವಾದ ಸಮುದ್ರತೀರದಲ್ಲಿ ಶ್ರೀಮದಾಚಾರ್ಯರು ಸ್ನಾನಮಾಡಿ ಆ ವರ್ತಕನಿಂದ ಕೊಡಲ್ಪಟ್ಟ ಗೋಪೀಚಂದನದಲ್ಲಿರುವ ಶ್ರೀಕೃಷ್ಣನನ್ನು ತಂದ ಮೊದಲುಗೊಂಡು ಉಡುಪಿಯಲ್ಲಿ ಮಾರ್ಗಶಿರದ ಅಮಾವಾಸ್ಯಾದಿನ ಸಮುದ್ರಸ್ನಾನವು ವಿಶೇಷವಾಗಿ ಆಚರಿಸಲ್ಪಟ್ಟಿದೆ.

ತಾತ್ಪರ್ಯನಿರ್ಣಯದಲ್ಲಿ ಶ್ರೀಕೃಷ್ಣದೇವರ ಪರಂಧಾಮ ಪ್ರವೇಶವನ್ನು ವರ್ಣನೆ ಮಾಡುವಾಗ ಶ್ರೀಕೃಷ್ಣನು ಆರು ರೂಪಗಳನ್ನು ಸ್ವೀಕರಿಸಿದನೆಂದೂ, ಆ ಪೈಕಿ ''ಗೋಪಾಲಮಂತ್ರಂ ಭಜತಾಂ ಫಲಪ್ರದಸ್ತ್ವೇಕೇನ ರೂಪೇಣ ಸ ಭುವ್ಯದೃಶ್ಯಃ' ಎಂದು ಕೃಷ್ಣಮಂತ್ರವನ್ನು ಜಪಿಸುವವರಿಗೆ ಫಲಕೊಡಲು ಅದೃಶ್ಯನಾಗಿ ಒಂದು ರೂಪದಿಂದ ಇದ್ದಾನೆಂದು ಅಪ್ಪಣೆ ಕೊಡಿಸಿದ್ದಾರೆ. ಹಾಗೆಯೇ ತಂತ್ರಸಾರದಲ್ಲಿ- 'ದೃಷ್ಟಾರ್ಥ ಏವ ಮಂತ್ರಾಣಾಂ ಕಲೌ ವೀರ್ಯಂ ತಿರಸ್ಕೃತಂ। ತತ್ರಾಪ್ಯುದ್ದಿಪ್ತವೀರ್ಯಾ ಹಿ ಮಂತ್ರಾ ಅತ್ರ ಪ್ರಕೀರ್ತಿತಾಃ ವಾಸಿಷ್ಠವೃಷ್ಣಿಪ್ರವರ- ಮಂತ್ರಾಸ್ತತ್ರಾಪಿ ವೀರ್ಯದಾಃ ' ಎಂದು ಅಪ್ಪಣೆ ಕೊಡಿಸಿದ್ದಾರೆ. ಐಹಿಕ ಸಂಪಾದಿದಾನದಲ್ಲಿ ಮಂತ್ರಗಳಿಗೆ ಕಲಿಯುಗದಲ್ಲಿ ಶಕ್ತಿ ಕಡಿಮೆ. ಆ ಪೈಕಿ ಶಕ್ತಿಯುಳ್ಳ ಮಂತ್ರಗಳನ್ನೆ ತಂತ್ರಸಾರದಲ್ಲಿ ಪ್ರತಿಪಾದಿಸಿರುವರು. ವ್ಯಾಸಮಂತ್ರ, ಕೃಷ್ಣಮಂತ್ರ ತತ್ರಾಪಿ ಐಹಿಕಾಮುಷ್ಮಿಕ ಉಭಯವಿಧ ಫಲಪ್ರದವೆಂದು ತಾತ್ಪರ್ಯ. ಇನ್ನು 'ಕಲೌ ಕೃಷ್ಣಪ್ರಶಸ್ಯತೇ' ಎಂದಿರುವ ಕಾರಣ ಕಲಿಯುಗದಲ್ಲಿ ಜ್ಞಾನಕರ್ಮರಹಿತರಾಗಿರುವ ಸಜ್ಜನರ ಉದ್ಧಾರಾರ್ಥವಾಗಿಯೇ ಅವತರಿಸಿದ ಪೂರ್ಣಪ್ರಜ್ಞರು ಶ್ರೀಅನಂತೇಶ್ವರ ದೇವರ ಸಮೀಪದಲ್ಲಿರುವ 'ಮಠಾಂತರೇ' ಈಗ ಶ್ರೀಕೃಷ್ಣನಿಂದ ರಾರಾಜಮಾನವಾದ ಶ್ರೀಕೃಷ್ಣಮಠದಲ್ಲಿ ಆ ವರ್ತಕನಿಂದ ಕೊಡಲ್ಪಟ್ಟ ಗೋಪೀಚಂದನವನ್ನು ಶಿಷ್ಯರಿಂದ ಕೂಡಿಕೊಂಡು ತಂದು ಮಧ್ವಸರೋವರವೆಂದು ಈಗ ಪ್ರಸಿದ್ಧವಾದ ಪ್ರಾಚೀನವಾದ ವಿರಜಾ, ಅನಂತಸರಸ್ಸು ಇತ್ಯಾದಿ ನಾಮುಗಳಿಂದ ಕೂಡಿದ ತೀರ್ಥದಲ್ಲಿ ಕೆಲವು ಶಿಷ್ಯರಿಂದ ಆ ಗೋಪೀಚಂದನವನ್ನು ಶೋಧಿಸಿ ಒಳಗಿರುವ ಶ್ರೀಕೃಷ್ಣವಿಗ್ರಹವನ್ನು ಮುಳುಗಿಸಿ ಪೂರ್ಣಪ್ರಜ್ಞರು ಅಭಿಷೇಕಮಾಡೋಣ ಅವರ ಕರಸ್ಪರ್ಶದಿಂದ ವಿಶೇಷಸನ್ನಿಧಾನಪಾತ್ರವಾದ ಶ್ರೀಕೃಷ್ಣನ ಪ್ರತಿಮಾವನ್ನು ಅಭಿಷೇಕಾತ್ಪೂರ್ವದಲ್ಲಿ ನಾಲ್ಕೈದು ಶಿಷ್ಯರಿಂದ ಎತ್ತಲ್ಪಟ್ಟ ತದನಂತರ ಮೂವತ್ತು ಜನ ಉತ್ಸಾಹಿಶಿಷ್ಯರಿಂದಲೂ

ಎತ್ತಲು ಅಶಕ್ಯವಾದದ್ದನ್ನು ಈ ಪೂರ್ಣಪ್ರಜ್ಞರು ಲೀಲಾಜಾಲವಾಗಿ ತಾವೆ ಎತ್ತಿಕೊಂಡು ಗರ್ಭಗೃಹವನ್ನು ಪ್ರವೇಶಿಸಿದರು. ಶ್ರೀರಾಮನ ಅನುಗ್ರಹದಿಂದ ಶತಯೋಜನ ವಿಸ್ತೀರ್ಣವಾದ ಗಂಧಮಾದವನ್ನು ಎತ್ತಿದಂತಹ ಹನುಮದಂಶಸಂಭೂತರಾದ ಇವರಿಗೆ ಇದು ಆಶ್ಚರ್ಯಕರವಲ್ಲ. ತದನಂತರ ವಿಧ್ಯುಕ್ತವಾಗಿ ಅನಂತೇಶ್ವರದೇವರ ಪೂರ್ಣ ಉತ್ಸವದ ದಿವಸವಾದ ಉತ್ತರಾಯಣ ಸಂಕ್ರಮಣದ ಸುಮುಹೂರ್ತದಲ್ಲಿ ಪ್ರತಿಷ್ಠಿಸಿ ಭಕ್ತರನ್ನು ಅನುಗ್ರಹಿಸಿದರು. ಅತಏವ ಅಂದಿನ ದಿವಸಕ್ಕೆ ಶ್ರೀಕೃಷ್ಣಮಠದಲ್ಲಿ ವಾರ್ಷಿಕಮಹೋತ್ಸವವು ನಡೆಯುವುದಾಗಿ ಅನೂಚಾನಸಿದ್ಧವಾಗಿಯದೆ. ಮಧ್ವವಿಜಯದ ಒಂದು ವ್ಯಾಖ್ಯಾನದೊಳಗೆ ಆರನೇ ಸರ್ಗದಲ್ಲಿ ಪೂರ್ಣಪ್ರಜ್ಞರು ದೊಡ್ಡಬದರಿ ವ್ಯಾಸಾಶ್ರಮಕ್ಕೆ ಹೋಗುವಾಗ ಶಿಷ್ಯರನ್ನು ಕುರಿತು ಬರೆದ 'ನೇದೃಶಂ ಸ್ಥಲಮಲಂ' ಇತ್ಯಾದಿ ಶ್ಲೋಕವು ಕೃಷ್ಣಪ್ರತಿಷ್ಠೆಯ ಮುಂಚೆ ಬದರಿಕಾಶ್ರಮಕ್ಷೇತ್ರ ಆ ತೀರ್ಥವನ್ನು ಕುರಿತು ಬರೆದದ್ದು. ತದನಂತರ ಉಡುಪಿಗೂ ಮಧ್ವಸರಸ್ಸಿಗೂ ಅನ್ವಯಿಸುತ್ತದೆ ಎಂದು ಬರೆದಿದೆ. 'ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ। ಅನೇನ ಪ್ರಸವಿಷ್ಯಧ್ವಮೇಷ ವೋಽಸ್ತ್ವಿಷ್ಟಕಾಮಧುಕ್'' ಎಂತ ಶ್ರೀಕೃಷ್ಣನು ಯಜ್ಞವು ಸಮಸ್ತಜನರಿಗೆ ಅಭೀಷ್ಟದಾಯಕವೆಂದು ನಿರೂಪಿಸಿರುವನು. ಶ್ರೀಮದಾಚಾರ್ಯರು ಜನರಿಗೆ ಯಾಗವನ್ನು ಮಾಡಿಸುವುದಾಗಿ ಸಂಕಲ್ಪಿಸಿ ಉದ್ಯೋಗಮಾಡಿದಾಗ ಒಬ್ಬ ಜರಾಘಟಿತಗೋತ್ರನು (ಮರಡಿತ್ತಾಯ) ಯಾಗಕ್ಕೆ ಬೇಕಾದ ಸಮಸ್ತಕರ್ಮ- ಕಲಾಪದಲ್ಲಿ ತಾನೇ ಅಭಿಜ್ಞನು ಇತರರಿಗೆ ಮಾಹಿತ್ಯವಿಲ್ಲವೆಂದು ತನಗೆ ಸಿದ್ಧವಾದ ಕ್ಷುದ್ರದೇವತಾಶಕ್ತಿಯಿಂದ ಇತರರನ್ನು ಜಯಿಸಿ ಈ ಯಾಗಕ್ಕೆ ಘಾತಕವನ್ನು ಮಾಡಿಕೊಂಡಿರುವವನನ್ನು ಮತ್ತು ಅವನಿಗೆ ಬೇಕಾದ ಪೂರ್ವಭೂಧರ, ಪಶ್ಚಿಮಭೂಧರ (ಮೂಡುಬೀಡಿನ ಬಲ್ಲಾಳರು, ಪಡುಬೀಡಿನ ಬಲ್ಲಾಳರು) ಇಬ್ಬರನ್ನು ಮಧ್ಯಸ್ಥರನ್ನಾಗಿ ಮಾಡಿ ಸರ್ವಜನರ ಸಮಕ್ಷದಲ್ಲಿ ಅವರನ್ನು ನಿರುತ್ತರರನ್ನಾಗಿ ಮಾಡಿ ಜಯಿಸಿ ಸಮಸ್ತಜನರಿಂದ ವಂದ್ಯಮಾನವಾದ ಪಾದಗಳುಳ್ಳವರಾಗಿ ಎಲ್ಲರನ್ನೂ ಸಂತೋಷಗೊಳಿಸಿ ಶ್ರೀಹರಿಗೆ ಭಕ್ತರಾದ ಪೂರ್ಣಪ್ರಜ್ಞರು, ವಾಸುದೇವ ನಾಮಕ ತನ್ನ ಗುರುಪುತ್ರನನ್ನು ತಾನೆ ಪೂರ್ವಭೀಮಾವತಾರದಲ್ಲಿ ಧರ್ಮರಾಜನನ್ನು ಮುಂದಿಟ್ಟು ಕೊಂಡು ರಾಜಸೂಯಯಾಗವನ್ನು ಮಾಡಿಸಿದಂತೆ ತನ್ನ ತಮ್ಮನನ್ನು ಹೋತೃವನ್ನಾಗಿಟ್ಟುಕೊಂಡು ಯೋಗ್ಯರಾದ ಅಧ್ವರ್ಯಾದಿಗಳನ್ನು ಕಲ್ಪಿಸಿ ಪ್ರವರ್ಗ್ಯಾದಿಗಳಿಂದ ಸಾಂಗವಾದ ಕರ್ಮದಿಂದ ದೇವತೆಗಳನ್ನು ಸಂತೋಷಗೊಳಿಸಿದರು. ಒಂದಾನೊಂದು ಕಾಲದಲ್ಲಿ ಶ್ರೀಮದಾಚಾರ್ಯರು ಸಂಚಾರಾರ್ಥವಾಗಿ ಹೋಗುತ್ತಿರುವಾಗ ಮಾರ್ಗಮಧ್ಯದಲ್ಲಿ ಪಾಂಥಜನರನ್ನು ನಿರ್ಬಂಧಿಸಿ ಖನನಾದಿ ವ್ಯಾಪಾರಗಳನ್ನು ಮಾಡಿಸುವ ಮೂರ್ಖನಾದ ಈಶ್ವರದೇವನಾಮಕಭೂಪನು ಶಿಷ್ಯರಿಂದೊಡಗೂಡಿದ ಪೂರ್ಣಪ್ರಜ್ಞರನ್ನು ಖನನಾದಿಕೆಲಸ ಮಾಡಬೇಕೆಂದು ನಿರ್ಬಂಧಿಸಲು 'ನಾವು ಸನ್ಯಾಸಿಗಳು, ಇಂತಹ ಕರ್ಮಗಳಲ್ಲಿ ಅಕುಶಲರು, ನೀನು ಮಾಡಿತೋರಿಸಲು ನಾವು ಮಾಡುವೆವು ಎಂದು ಹೇಳೋಣ, ಆತ ಕಾರ್ಯಾರ್ಥವಾಗಿ ಸ್ವಯಂ ಉದ್ಯೋಗಮಾಡಿದವ, ಆಚಾರ್ಯರ ಯೋಗಸಾಮರ್ಥ್ಯದಿಂದ ಮುಗ್ಧನಾದವ, ಆ ಕಾರ್ಯವನ್ನು ಬಿಡಲಿಲ್ಲ. ಶಿಷ್ಯರಿಂದ ಸಹಿತರಾಗಿ ಪೂರ್ಣಪ್ರಜ್ಞರು ಮುಂದೆ ಪ್ರಯಾಣಮಾಡಿದ್ದನ್ನೂ ತಿಳಿಯಲಿಲ್ಲ. ಪೂರ್ಣಪ್ರಜ್ಞರು ಪುನಃ ಬದರಿಕಾಶ್ರಮವನ್ನು ಕುರಿತು ಸಂಚಾರಕ್ರಮೇಣ ಹೋಗುತ್ತಿದ್ದಾಗ ಗಂಗಾತೀರವನ್ನು ಹೊಂದಲು, ಸಶಿಷ್ಯರಾದ ಶ್ರೀಮದಾಚಾರ್ಯರನ್ನು ಶತ್ರುಪಕ್ಷೀಯರೆಂದು ನಾವಿಕರು ತಡೆದಾಗ ವಾಯುದೇವರು ತನ್ನ ಅನುಗ್ರಹದಿಂದ ಭಕ್ತರನ್ನು ಸಂಸಾರದಿಂದ ಪಾರಗಾಣಿಸುವಂತೆ ಅದೇ ವಾಯ್ವಂಶಸಂಭೂತರಾದ ಪೂರ್ಣಬೋಧರು ತಮ್ಮ ಶಿಷ್ಯರನ್ನು ಯೋಗಶಕ್ತಿಯಿಂದ ಆಚೆದಡಕ್ಕೆ ಕರಕೊಂಡು ಹೋಗಲು ಅಲ್ಲಿರುವ ರಾಜಭಟರು ಸಶಿಷ್ಯರಾದ ಇವರಮೇಲೆ ಧಾಳಿ ಎಬ್ಬಿಸಲು 'ಹೇ ಜಡಾಃ!(ಅವಿವೇಕಿಗಳಾದ ಜನರೇ) ನಮ್ಮಿಂದ ನಿಮಗೇನೂ ಭಯವಿಲ್ಲ. ರಾಜನನ್ನು ನೋಡಲು ಹೋಗುವೆವು. ವೃಥಾಕಲಹಮಾಡಬೇಡಿರಿ' ಎಂಬ ಮಾತಿನಿಂದ ಮಾಂತ್ರಿಕನು ಸರ್ಪವನ್ನು ತಡೆಕಟ್ಟಿದಂಗೆ ಇವರನ್ನು ಸ್ತಂಭಿತರನ್ನಾಗಿಮಾಡಿ ಶಿಷ್ಯಜನರನ್ನು ನದೀಭಯ ಮತ್ತು ಮೃತ್ಯುಭಯದಿಂದ ಪಾರುಗಾಣಿಸಿದರು. ರಾಜಭಟರಿಂದ ಕೂಡಿಕೊಂಡು ರಾಜ ಮಂದಿರವನ್ನು ಕುರಿತು ಶಿಷ್ಯಜನರಿಂದೊಡಗೂಡಿ, ದೇವದೈತ್ಯರು ಒಟ್ಟಾಗಿ ಬಂದರೂ ಭಯಪಡದಿರುವ ಸಿಂಹಗಮನಕ್ಕೆ ಸದೃಶವಾದ ಗಮನವುಳ್ಳ ತನ್ನ ಮನೆಯನ್ನು ಕುರಿತು ಬರುವ ಈ ಪೂರ್ಣಪ್ರಜ್ಞರನ್ನು ಪ್ರಾಸಾದಾಗ್ರ (ಉಪ್ಪರಿಗೆ) ದಲ್ಲಿ ಕುಳಿತಿರುವ ರಾಜನು 'ಹೇ ಸುಮುಖ ಎಂದು ಸಂಬೋಧಿಸಿ ಪಾಂಥರ ಹಿಂಸಾಕರ್ಮದಲ್ಲಿ ಉದ್ಯುಕ್ತರಾದ ನನ್ನ ಭಟರಿಂದ ಹಿಂಸೆಗೊಳಗಾಗದೇ ನಾವೆಯ ಸಹಾಯವಿಲ್ಲದೇ ನದಿಯನ್ನು ಹೇಗೆ ದಾಟಿದಿರಿ, ಯಾವ ಕಾರ್ಯದ ಉದ್ದಿಶ್ಯ ಬಂದಿರಿ, ಎಂದು ಹೇಳಲು 'ಪುರುಷೋತ್ತಮನಾದ ಶ್ರೀಹರಿಗೆ ದಾಸರಾದ ಶ್ರೀಮದಾಚಾರ್ಯರು ಯಾವನು ವಿಶ್ವವನ್ನು ಪ್ರಕಾಶಿಸಿಕೊಂಡು ಆಕಾಶ ಮಧ್ಯವರ್ತಿಯಾಗಿರುವನೋ ಅವನ ಅನುಗ್ರಹದಿಂದ ಸರ್ವಕರ್ಮವನ್ನು ನಡೆಸುವ ನಾವು ಉತ್ತರದೇಶವನ್ನು ಕುರಿತು ಹೋಗುವ ಉದ್ದಿಶ್ಯ ಹೊರಟಿರುವೆವು' ಎಂದು ರಾಜಭಾಷೆಯಿಂದಲೇ

ಉತ್ತರ ಕೊಡಲು, ಆಚಾರ್ಯರ ಗಾಂಭೀರ್ಯ, ಧೈರ್ಯ, ಉತ್ತಮವಾದ ತೇಜಸ್ಸು, ವಿದ್ವತ್ತು, ಕಾಲೋಚಿತವಾದ ಮಾತು, ಎಲ್ಲವನ್ನೂ ನೋಡಿ ವಿಸ್ಮಯಗೊಂಡು ರಾಜ್ಯಾರ್ಧವನ್ನೇ ಅರ್ಪಿಸಿ, ನನ್ನ ರಾಜ್ಯದಲ್ಲಿರಬೇಕೆಂದು ಪ್ರಾರ್ಥಿಸೋಣ ಸಮೀಪವರ್ತಿಗಳಾದ ರಾಜಪುರುಷರು ರಾಜದಂಡನೆಗೆ ಅರ್ಹರಾದ ಇವರು ಏನು ಆಶ್ಚರ್ಯ, ಅರ್ಧರಾಜ್ಯಭಾಗಿಗಳಾಗಿ ರಾಜರೇ ಆದರೆಂದು ವಿಸ್ಮಯಗೊಂಡರು.

ಶ್ರೀಮಧ್ವಾಚಾರ್ಯರು ಬದರಿಕಾಶ್ರಮವನ್ನು ಹೊಂದಿ ಶ್ರೀನಾರಾಯಣದೇವರಿಂದ ಶಿಲಾತ್ಮಕವಾದ ಶ್ರೀಲಕ್ಷ್ಮೀನಾರಾಯಣರ ಸನ್ನಿಧಾನಕ್ಕೆ ಮುಖ್ಯಪಾತ್ರಗಳಾದ ಪ್ರತಿಮೆಗಳನ್ನು ಹೊಂದಿದರು. ಪರಾಶರಪುತ್ರರಾದ ವೇದವ್ಯಾಸದೇವರು ಜಗತ್ತಿನಲ್ಲಿ ಶ್ರೀಮಧ್ವಾಚಾರ್ಯರನ್ನು ಧನ್ಯರನ್ನಾಗಿ ತಿಳಿದು ಮಹಾಭಾರತಕ್ಕೆ ತನ್ನ ತಾತ್ಪರ್ಯ- ದ್ಯೋತಕವಾದ ವ್ಯಾಖ್ಯಾನವಿಶೇಷವನ್ನು ಮಾಡಲು ಅಪ್ಪಣೆಕೊಟ್ಟು ಕಳುಹಿಸಿದಾಗ ಶ್ರೀಪೂರ್ಣಪ್ರಜ್ಞರು ಅಲ್ಲಲ್ಲಿರತಕ್ಕ ತೀರ್ಥಕ್ಷೇತ್ರಗಳಲ್ಲಿ ನಿಯಾಮಕನಾದ ಪರಮಾತ್ಮನನ್ನು ವಂದಿಸಿಕೊಂಡು ಸ್ನಾನಾದಿಗಳಿಂದ ಕರ್ತವ್ಯ ಕರ್ಮವನ್ನು ಜನರಿಗೆ ತೋರಿಸುತ್ತಾ ಶಿಷ್ಯರಿಂದೊಡಗೂಡಿ ಗಂಗೆಯನ್ನು ಹೊಂದಲು ನಾವೆಗಳಿಂದ ರಹಿತವಾದ ಗಂಗೆಯನ್ನು ನೋಡಿ ಭೀತರಾದ ಶಿಷ್ಯರನ್ನು ತಮ್ಮ ಯೋಗಶಕ್ತಿಯಿಂದ ದಾಟಿಸಿದರು.

ಕ್ರಮೇಣ ಶ್ರೀಮದಾಚಾರ್ಯರು ಗೋವಿಷಯೇ ಪಶುಪೇ ಎಂಬ ಗ್ರಾಮದಲ್ಲಿ ಸಭೆಯಲ್ಲಿ ಜನರಿಂದ ಗಾನವನ್ನು ಮಾಡಬೇಕೆಂದು ಪ್ರಾರ್ಥಿತರಾದಾಗ ಜನರನ್ನು ಸಂತೋಷಪಡಿಸಿದ್ದಲ್ಲದೇ ವೃಕ್ಷದಲ್ಲಿ ಜನರಿಗೆ ಆಶ್ಚರ್ಯವಾಗುವಂತೆ ಪುಷ್ಪಫಲಗಳನ್ನು ಮಾಡಿ ತೋರಿಸಿದರು.

ಶ್ರೀಮದಾಚಾರ್ಯರು ಒಂದಾನೊಂದು ಸ್ಥಳವಿಶೇಷದಲ್ಲಿ ಶಿಷ್ಯರಿಗೆ ಪಾಠಹೇಳುತ್ತಿರಲು ಶಿಷ್ಯರಿಂದೊಡಗೂಡಿ ಶೇಷದೇವರು ಅಂತರಿಕ್ಷಸ್ಥಿತರಾಗಿ ಶ್ರೀಮದಾಚಾರ್ಯರ ವ್ಯಾಖ್ಯಾನವನ್ನು ಕೇಳಿ ತಮ್ಮ ಲೋಕವನ್ನು ಹೊಂದಿ, ಸನಕಾದಿ- ಶಿಷ್ಯರಿಗೆ ಬೋಧಪ್ರದವಾಗುವಂತೆ ವ್ಯಾಖ್ಯಾನವನ್ನು ಮಾಡಿ ನಾನರತ್ನಮಯಗಳಾದ ಕಾರ್ಯಭೂತಗಳಾದ ದ್ವೇಷಾದಿಗಳಿಲ್ಲ- ದಿರುವ, ದುಃಖಲೇಶದಿಂದಲೂ ಒಡಗೂಡದಿರುವ, ಅಜರಾಮರವಾದ ಪುನರಾವೃತ್ತಿಯಿಲ್ಲದ ನಿತ್ಯಯೌವನ ಭರಿತರಾದ ಕಾಮಿನಿಯರಿಂದೊಡಗೂಡಿದ, ಸಂಕಲ್ಪಮಾತ್ರದಿಂದ ಇಚ್ಛಿತ ಸಕಲವಸ್ತುಗಳ ಸಿದ್ಧಿಯನ್ನು ಒದಗಿಸಿ ಸಚ್ಚಿದಾನಂದಾತ್ಮಕವಾದ ಸ್ವರೂಪಭೂತವಾದ ವಿಗ್ರಹದಿಂದೊಡಗೂಡಿದ ಸಾಲೋಕ್ಯ ಸಾರೂಪ್ಯ ಸಾಮೀಪ್ಯ ಸಾಯುಜ್ಯರೂಪ ಚತುರ್ವಿಧ ಮುಕ್ತಭಾಜನರಾದ, ದೇವಾದಿತೃಣಾಂತ ಸಜ್ಜೀವರಿಂದ ಅಲಂಕೃತವಾದ ಸಾಕ್ಷಾತ್ ಲಕ್ಷ್ಮಿಗೆ ಆವಾಸಭೂತವಾದ ಪ್ರಲಯಕಾದಲ್ಲಿಯೂ ನಾಶವಿಲ್ಲದ ಇಚ್ಛಾಮಾತ್ರದಿಂದ ಭಗವದ್ದರ್ಶನವಿಶೇಷವನ್ನು ಕೊಡುವ ವೈಕುಂಠಸ್ಥಾನವನ್ನೇ ಮಧ್ವಶಾಸ್ತ್ರಶ್ರವಣ, ತದುಕ್ತರೀತ್ಯಾ ಮನನ, ತಥಾ ಧ್ಯಾನ, ತಜ್ಜನ್ಯ ಅಪರೋಕ್ಷಜ್ಞಾನ ಇವುಗಳ ಫಲವನ್ನಾಗಿ ನಿರೂಪಿಸಿದರು.

ಶಂಕರಭಟ್ಟರು ಶ್ರೀಮದಾಚಾರ್ಯರ ಪುಸ್ತಕಾದಿಗಳನ್ನು ರಕ್ಷಿಸಿಕೊಂಡು ತನ್ನ ಮನೆಯಲ್ಲಿರಲು ಪೂರ್ವಜನ್ಮದಲ್ಲಿ ಸಿಂಧುದೇಶಾಧಿಪತಿ ಸೈಂಧವನಾಮಕ ರಾಜನೇ ಪದ್ಮತೀರ್ಥನಾಮಕರಾಗಿರುವ ಯತಿಗಳು ಇತರಶಿಷ್ಯರಿಂದೊಡಗೂಡಿ ಮಧ್ಯರಾತ್ರಿಯಲ್ಲಿ ಶಂಕರಭಟ್ಟರ ಮನೆಯನ್ನು ಧಾಳಿಮಾಡಿ ಆ ಪುಸ್ತಕಸಮುದಾಯವನ್ನು ಅಪಹರಿಸಿದಾಗ ಶ್ರೀಮದಾಚಾರ್ಯರು ಬೆಳಗಾದಮೇಲೆ ಆ ವಾರ್ತೆಯನ್ನು ಕೇಳಿ ಅಲ್ಲಿಗೆ ಬಂದಿದ್ದನ್ನು ತಿಳಿದ ಆಚಾರ್ಯರ ಭಯದಿಂದ ಇತರವಾದಿಗಳನ್ನು ಮುಂದೆಮಾಡಿ ತಾನು ಹಿಂದೆ ನಿಂತಿರುವ ಪದ್ಮತೀರ್ಥರನ್ನು ಶ್ರೀಮದಾಚಾರ್ಯರು ವಾದಕ್ಕೆ ಆಹ್ವಾನಿಸಿ ಅರ್ಜುನನು ದ್ರೌಪದಿಯನ್ನು ಬಲಾತ್ಕಾರದಿಂದ ಅಪಹರಿಸಿ ಹೋಗುವ ಸಿಂಧುರಾಜನನ್ನು ಬಾಣಗಳಿಂದ ಜಯಿಸಿ ದ್ರೌಪದಿಯನ್ನು ಆಶ್ರಮಕ್ಕೆ ಕರೆದುಕೊಂಡು ಬಂದಂತೆ, ವಾದದಲ್ಲಿ ಜಯಿಸಿ ಜಯಸಿಂಹನಾಮಕರಾಜನ ಸಹಾಯದಿಂದ ಅಪಹೃತವಾದ ಪುಸ್ತಕಭಂಡಾರವನ್ನು ಸ್ವಾಧೀನೀಕರಿಸಿಕೊಂಡು ಶಂಕರಭಟ್ಟರ ವಶಕ್ಕೆ ಕೊಟ್ಟರು. ಶ್ರೀಪರಮಾತ್ಮನ ಕಥಾಪ್ರಸಂಗದಿಂದ ಶುಭತಮರಾದ ಅತ್ಯಂತಮಂಗಲಸ್ವರೂಪರಾದ ಶ್ರೀಮಧ್ವರು ಜಯಸಿಂಹನಾಮಕರಾಜನಿಂದ ವಂದಿತವಾದ ಪಾದಪದ್ಮವುಳ್ಳವರಾಗಿ ಸಮಸ್ತರಿಗೂ ದರ್ಶನೀಯವಾದ ದ್ವಾಂತ್ರಿಶಲ್ಲಕ್ಷಣಭರಿತವಾದ ದೇಹದಿಂದೊಡಗೂಡಿ ವಿಷ್ಣುಮಂಗಲದೇವಸ್ಥಾನ ದಲ್ಲಿ ಇರುತ್ತಿದ್ದರು. ಶ್ರೀಮದಾಚಾರ್ಯರನ್ನು ಜಯಿಸುವ ಉದ್ದಿಶ್ಯ ವೇದಶಾಸ್ತ್ರಾನುಸಾರಿಯಾಗಿ ಬರುವ ಲಿಕುಚಕುಲೋದ್ಭವ ಪೇಜತಾಯ ವಂಶೀಯರಾದ ತ್ರಿವಿಕ್ರಮಪಂಡಿತನಾಮಕರಾದ ವಿದ್ವದ್ವರರು ವಿದ್ವಜ್ಜನರಿಂದ ನೀವು ನಮ್ಮ ಶಾಸ್ತ್ರದಲ್ಲಿ ಪಂಡಿತರು, ಶ್ರೀಮಧ್ವರನ್ನು ಜಯಿಸಿ ಶಶಾಂಕನಂತೆ ಧವಳವಾದ ಯಶೋಭಾಗಿಗಳಾಗಬೇಕು, ಎಂದು ಬಹುಧಾ ಪ್ರೇರಿತರಾದರು. ಕಂಸನಿಂದ ಕೃಷ್ಣಾನಯನಾರ್ಥವಾಗಿ ಪ್ರೇರಿತನಾದ ಅಕ್ರೂರರು ಹೇಗೆ ಕೃಷ್ಣದರ್ಶನವು

ಬಹುಪುಣ್ಯಲಭ್ಯ, ಇದು ನನ್ನ ಭಾಗ್ಯವೆಂದು ಹೋದನೋ, ಅಂತೆಯೇ ಪಂಡಿತಾಚಾರ್ಯರು ತತ್ವಬುಭುತ್ಸಾದಿಂದ ಗುರುಗಳಾದ ಪೂರ್ಣಪ್ರಜ್ಞರನ್ನು ಹೊಂದಿದರು. ತ್ರಿವಿಕ್ರಮಪಂಡಿತಾಚಾರ್ಯರು ಜಯಸಿಂಹರಾಜನಿಂದ ಪ್ರಾರ್ಥಿತರಾದ ಪೂರ್ಣಪ್ರಜ್ಞರು ಪುಸ್ತಕಭಂಡಾರವನ್ನು ಶಂಕರಭಟ್ಟರವಶಾಪೂರ್ವದಂತೆ ಕೊಟ್ಟದ್ದನ್ನು ನೋಡಿ ಸಂತೋಷದಿಂದ ಸ್ತೋತ್ರ ಮಾಡಿದರು. ಪೂರ್ಣಪ್ರಜ್ಞರು ವಿಷ್ಣುಮಂಗಲದೇವಾಲಯದಲ್ಲಿ ದಗ್ಧವಾದ ಸಂಚಿತಪಾಪಕರ್ಮವುಳ್ಳವರಾಗಿ ಪರಮಾತ್ಮನವಿಶೇಷ ಪ್ರೀತ್ಯರ್ಥವಾಗಿಯೂ ಹಾಗೆಯೇ ಲೋಕಶಿಕ್ಷಾರ್ಥವಾಗಿಯೂ ತನ್ನ ಬುದ್ಧಿ ಇಂದ್ರಿಯವ್ಯಾಪಾರ ಇವುಗಳಿಂದ ಪ್ರವಚನನಿರತರಾಗಿ ವಿಷ್ಣುಪೂಜೆಯನ್ನು ಮಾಡಿ ಇಟ್ಟಿರತಕ್ಕ ಸಾಲಿಗ್ರಾಮಗಳಿಗೆ ದೇವತೆಗಳು ಅಮೃತವನ್ನು ವೃಷ್ಟೀಕರಿಸಿದ್ದನ್ನು ನಿರ್ಮಾಲ್ಯವಿಸರ್ಜನಕಾಲದಲ್ಲಿ ಶಿಷ್ಯರಿಗೆ ತೋರಿಸಿ ಆಶ್ಚರ್ಯಚಕಿತರನ್ನಾಗಿ ಮಾಡಿದರು. ತದನಂತರ ಶಿಷ್ಯರಿಗೆ ಪಾಠವನ್ನು ಹೇಳಿ ತಟಾಕದಲ್ಲಿ ಮಾಧ್ಯಾನ್ಹಿಕಸ್ನಾನವನ್ನು ಮುಗಿಸಿ ಚಕ್ರಶಂಖಾದಿ ಚಿಹ್ನೆ ಧಾರಣಪೂರ್ವಕ ದ್ವಾದಶನಾಮಗಳನ್ನು ಧರಿಸಿ ತಂತ್ರಸಾರೋಕ್ತರೀತ್ಯಾ ಪೂಜೆಯನ್ನು ಮಾಡಿ ಪಂಚರಾತ್ರಾನುಸಾರೇಣ ನಿರ್ಮಾಲ್ಯಶೇಷವನ್ನು ಕಿವಿಯಲ್ಲಿ ಧರಿಸಿಕೊಂಡು ದೇವಪೂಜಾನಂತರದಲ್ಲಿ ಶ್ರೀಪರಮಾತ್ಮನಿಂದ ಭುಕ್ತವಾದ ನೈವೇದ್ಯಶೇಷವನ್ನು ಶಿಷ್ಯಾದಿಗಳಿಂದೊಡಗೂಡಿ ಭುಂಜಿಸಿ ಪುನಃ ಶಾಸ್ತ್ರಪ್ರವಚನದಿಂದ ಸಜ್ಜನವೃಂದವನ್ನು ಆನಂದಗೊಳಿಸಿದರು. ಪುನಃ ಸ್ನಾನ ಸಂಧ್ಯಾ ದೇವಪೂಜಾದಿಗಳನ್ನು ಮುಗಿಸಿ ಶ್ರೀಪರಮಾತ್ಮನಿಗೆ ಅತಿಪ್ರಿಯವಾದ ಭಾಗವತಕಥೆಯನ್ನು ಬಹುಕಾಲ-ಶ್ರವಣ-ಮನಕ್ಕಾನಂದವಾಗುವಂತೆ ಹೇಳಿದರು.

ಅನಂತರದಲ್ಲಿ ಪಾಡಿಕುಡೇಲ ಎಂಬ (ಅಪಭ್ರಷ್ಟ ಭಾಷೆಯ) ಗ್ರಾಮದಲ್ಲಿ ಕುಡೇಲ ನಾಮಕ ದೇವಾಲಯದಲ್ಲಿ ಗ್ರಾಮೀಣರಾದ ಜನರ ಮಧ್ಯದಲ್ಲಿ ಸಜ್ಜನರಾದ ಬಾಲಕರಿಗೂ ಬೋಧಕವಾದ ಪಂಡಿತಮಾನ್ಯ ಜನರಿಂದ ನಿರೂಪಣೆಮಾಡಲಶಕ್ಯವಾದ ಭಾವವುಳ್ಳ ಅತಏವ ಅತ್ಯದ್ಭುತವಾದ ಭಾರತೀವಿಜಯಾದಿ ಇಪ್ಪತ್ತೊಂದು ಭಾಷ್ಯಗಳಲ್ಲಿರುವ ದೋಷಗಳನ್ನು ಜನರಿಗೆ ತೋರಿಸಿಕೊಡತಕ್ಕ ಭಾಷ್ಯವನ್ನು ವ್ಯಾಖ್ಯಾನ ಮಾಡಿದರು.

ಯೋಧಪುರುಷನು ಪ್ರತಿಯೋಧನನ್ನು ಯುದ್ಧ್ಯರ್ಥವಾಗಿ ಆಯುಧದಿಂದ ಅಲಂಕೃತವಾದ ರಥವನ್ನು ಹೇಗೆ ಅಲಂಕರಿಸಿ ಬರುವನೋ, ಅಂತೆಯೇ ತ್ರಿವಿಕ್ರಮಪಂಡಿತಾಚಾರ್ಯರೂ ಸ್ವಯೂಥ್ಯಜನರಿಂದ ಕೂಡಿ ಶ್ರೀಮದಾಚಾರ್ಯರ ಪಕ್ಷಕ್ಕೆ ಪ್ರತಿಪಕ್ಷಸ್ಥಾನೀಯವಾದ ಅದ್ವೈತತತ್ವವನ್ನು ರಥಸ್ಥಾನೀಯವನ್ನಾಗಿ ಅವಲಂಬಿಸಿಕೊಂಡು ತೀಕ್ಷ್ಣತರ್ಕಗಳೆಂಬ ಆಯುಧ- ಗಳನ್ನು ಸಿದ್ಧಗೊಳಿಸಿಕೊಂಡು ಪೂರ್ಣಪ್ರಜ್ಞರನ್ನು ಪ್ರತಿವೀರರನ್ನಾಗಿ ಬಂದು ನೋಡಿದರು.

ತ್ರಿವಿಕ್ರಮಪಂಡಿತಾಚಾರ್ಯರು ಬಂದು ಆಚಾರ್ಯರ ವ್ಯಾಖ್ಯಾನವನ್ನು ಕೇಳುತ್ತಿರುವಾಗ ಶತ್ರುಶಿಬಿರದಿಂದ ಸೇನೆ ಹೊರಡುವಂತೆ ಪೂರ್ಣಪ್ರಜ್ಞರಮುಖ ಕಮಲದಿಂದ ಉಪನ್ಯಾಸಭಾರತೀ ದಿವ್ಯವಾದವು ಹೊರಟಿತು.

**''ಶ್ರೀಮನ್ನಾರಾಯಣನು ಸಮಸ್ತಗುಣಪೂರ್ಣನು, ವೇದೈಕಪ್ರತಿಪಾದ್ಯನು, ವಿಶ್ವಕರ್ತನು, ನಿರ್ದೋಷನು, ಸರ್ವಜ್ಞನು''** ಎಂದು ಸರ್ವಜ್ಞಾಚಾರ್ಯರು ಶ್ರುತಿ ಮತ್ತು ಯುಕ್ತಿಗಳಿಂದ ಸಾಧಿಸಿದರು.

ಶ್ರೀಮದಾಚಾರ್ಯರು ನಾರಾಯಣನಿಗೆ ಅಖಿಲಕರ್ತೃತ್ವವನ್ನು ಸಾಧಿಸಿದ್ದಕ್ಕೆ ಸಾಂಖ್ಯಮತವನ್ನು ಇಟ್ಟುಕೊಂಡು ಪಂಡಿತಾಚಾರ್ಯರು ದೂಷಿಸಿರುವರು. 'ಪ್ರಧಾನ ಎಂದರೆ ಪ್ರಕೃತಿ, ಅದೇ ಜಗದಾತ್ಮನಾ ಪರಿಣಮಿಸುವುದರಿಂದ ಮುಖ್ಯಕಾರಣ. ಅದಕ್ಕೆ ಸೃಷ್ಟಿಯಲ್ಲಿ ಚೇತನಾಪೇಕ್ಷೆಯಿಲ್ಲ, ಹೇಗೆ ಹಾಲು ದ್ರವ್ಯಾತ್ಮನಾ ಪರಿಣಮಿಸುವುದೋ ಅದರಂತೆಯೇ' ಎಂದು ಉಪಪಾದಿಸಿದಾಗ ಆಚಾರ್ಯರು ''ಏತೇನ ಹ ವಾವ ಪಯೋ ಮಂಡಂ ಭವತಿ'' ಎಂಬ ಶ್ರುತಿಯನ್ನು ಮುಂದಿಟ್ಟುಕೊಂಡು, ದಧಿಗೆ ಪಯಸ್ಸೇ ಮುಖ್ಯಕಾರಣವಲ್ಲ, ಆತಂಚನ ಹೆಪ್ಪು, ಅದನ್ನೂ ಹಾಕಲಿಕ್ಕೆ ಪುರುಷನಿಲ್ಲದೇ ಪಯಸ್ಸು ದಧಿಯಾಗುವುದಿಲ್ಲ, ಅಂತೆಯೇ ಜಡವಾದ ಪ್ರಧಾನಕ್ಕೆ ಜಗತ್ತನ್ನು ಕುರಿತು ಮುಖ್ಯಕಾರಣತ್ವವು ಕೂಡದು, ಎಂದು ಅವರ ಪ್ರಮೇಯವನ್ನು ದೂಷಿಸಿ ವಿಶ್ವವಾದ ಜಗತ್ತು ಚೇತನಭೂತನಾದ ಶ್ರೀನಾರಾಯಣನ ಇಚ್ಛಾನುಸಾರವಾಗಿ ಸೃಷ್ಟಿಯನ್ನು ಹೊಂದುವುದು. ಅದು ಸೃಜ್ಯವಾದ ಕಾರಣ. ಸೃಜ್ಯವಾದ ಪಟ(ಬಟ್ಟೆ)ವಾಗಲೀ, ಘಟವಾಗಲೀ ಕುವಿಂದಕುಲಾಲರ ಇಚ್ಛೆಗೆ ಅನುಸಾರವಾಗಿ ಸೃಷ್ಟಿಯನ್ನು ಹೊಂದುವುದು, ಎಂದು ತಮ್ಮ ಈಶ್ವರಕರ್ತೃತ್ವವನ್ನು ಉಪನ್ಯಾಸ ಮಾಡಿದರು. ಇನ್ನು ಪಂಡಿತಾಚಾರ್ಯರು ನಿರೀಶ್ವರಸಾಂಖ್ಯರ ಕೇವಲ ಪ್ರಧಾನಕರ್ತೃತ್ವವಾದವನ್ನು ದೂಷಿಸಲು ಸೇಶ್ವರಸಾಂಖ್ಯರ ಮತವನ್ನು ಇಟ್ಟುಕೊಂಡು ಚೇತನಾಚೇತನರಿಗೆ ಪರಸ್ಪರ ಅಂಗಾಗಿಭಾವವನ್ನು ಸ್ವೀಕರಿಸಿ ಜಗತ್ಸ್ರಷ್ಟತ್ವವಾದವನ್ನು ಚೇತನನಾದ ಜೀವನು ಆತಂಚನ ರೂಪವಾದ ಜಡವನ್ನು ಮುಖ್ಯವಾಗಿ ಇಟ್ಟುಕೊಂಡು ತದ್ವಶಾತ್ ಪಯಸ್ಸಿಗೆ

ದಧಿಭಾವವನ್ನು ತರುವನು- ಅದೇ ರೀತ್ಯಾ ಚೇತನ ಮತ್ತು ಪ್ರಧಾನ ಅಂಗಾಂಗಿಭಾವವನ್ನು ಹೊಂದಿ ಜಗತ್‌ಸೃಷ್ಟಿಯನ್ನು ಮಾಡುವುದು, ಎಂದು ಸಾಧಿಸಲು ಪೂರ್ಣಪ್ರಜ್ಞರು ಈಶ್ವರನನ್ನು ಒಪ್ಪದಿದ್ದಲ್ಲಿ ಜಡದಲ್ಲಿ ಸ್ವತಂತ್ರಕಾರ್ಯೋತ್ಪಾದನಶಕ್ತಿಯಿಲ್ಲದ ಕಾರಣ ಜೀವನಿಂದ ಮೇಲನವೇ ಕೂಡದಿರುವುದರಿಂದ ಈಶ್ವರನನ್ನು ಒಪ್ಪದಿದ್ದರೆ ಈ ವಾದವೂ ಕೂಡುವುದಿಲ್ಲವೆಂದು ಸಮರ್ಥಿಸಿದರು.

ಆಚಾರ್ಯರು 'ಬ್ರಹ್ಮಾಖ್ಯನಾರಾಯಣನು ವಿಶ್ವಕರ್ತ'ನೆಂದು ಪ್ರತಿಪಾದಿಸಲು, ಪಶುಪತ್ಯಾದಿಗಳಿಗೆ ಜಗತ್ಕರ್ತೃತ್ವಪ್ರತಿಪಾದಕ ''ಏಕೋ ರುದ್ರೋ ನ ದ್ವಿತೀಯಾಯ ತಸ್ಥ'' ಇತ್ಯಾದಿ ಶ್ರುತಿ, ಪಾಶುಪತಾದ್ಯಾಗಮಗಳಿಂದ ವಿರೋಧಬರುವಕಾರಣ ಚೇತನನಿಗೆ ಸ್ವತಂತ್ರ ಕರ್ತೃತ್ವವನ್ನು ಹೇಳಿದರೂ ನಾರಾಯಣನಿಗೆ ಯಾಕೆ ಹೇಳಬೇಕು, ರುದ್ರಾದಿಗಳಿಗೆ ಯಾಕೆ ಹೇಳಬಾರದು, ಎಂದು ಪಂಡಿತಾಚಾರ್ಯರು ಆಕ್ಷೇಪಿಸಲು, ''ರುದ್ರಾದಿಗಳಿಗೆ ಕರ್ತೃತ್ವವನ್ನು ಹೇಳಲು ಬರುವುದಿಲ್ಲ. ರುದ್ರಾದಿಗಳು ವೇದದಲ್ಲಿ ದೋಷಯುಕ್ತರಾಗಿ ಪ್ರತಿಪಾದಿತರಾಗಿದ್ದಾರೆ. ಜಗತ್ಕರ್ತನು ದೋಷವಿದೂರನೇ ಆಗಬೇಕು. ಯಾಕೆಂದರೆ ತನ್ನ ದೋಷವನ್ನ ಪರಿಹರಿಸಿಕೊಳ್ಳಲು ಅಶಕ್ತನಾದವ ಸಕಲಜಗತ್ತನ್ನು ಸೃಷ್ಟಿಮಾಡಿ ಅವುಗಳ ದೋಷಪರಿಹಾರ ಮಾಡಿ ಸುಖವನ್ನು ಹ್ಯಾಗೆ ಕೊಡುವನು. ''ಸೋಽರೋದೀತ್ ಯದರೋದೀತ್ ತದ್ರುದ್ರಸ್ಯ ರುದ್ರತ್ವಂ'' ಈ ಶ್ರುತಿಯು ರುದ್ರನಿಗೆ ರೋದನಾದಿ ದೋಷಕಥನದ್ವಾರಾ ಭಯಾದಿಗಳನ್ನು ಸೂಚಿಸುತ್ತದೆ. 'ಯಂ ಕಾಮಯೇ ತಂ ತಮುಗ್ರಂ ಕರೋಮಿ' ಎಂಬ ಶ್ರುತಿಯು ಪರಾಧೀನತ್ವವನ್ನು ಪ್ರತಿಪಾದನೆ ಮಾಡುತ್ತದೆ. ಈ ಪ್ರಕಾರ ಶ್ರುತಿಯಿಂದ ರುದ್ರಾದಿಗಳಿಗೆ ದೋಷವು ಸಿದ್ಧವಾದ ಕಾರಣ ವಿಶ್ವಕರ್ತೃತ್ವವು ಅವರಿಗೆ ಕೂಡುವುದಿಲ್ಲಾ. ಶ್ರೀಮನ್ನಾರಾಯಣನಿಗೆ ವಿಶ್ವಕರ್ತೃತ್ವಹೇಳುವುದರಲ್ಲಿ ಬಾಧಕವಿಲ್ಲವೆಂದು ಶ್ರೀಮದಾಚಾರ್ಯರು ಸಮರ್ಥಿಸಿದರು. ಇದೇರೀತ್ಯಾ ಹದಿನೈದು ದಿನಗಳಲ್ಲಿ ಪಂಡಿತಾಚಾರ್ಯರು ಶ್ರೀಮದಾಚಾರ್ಯರಲ್ಲಿ ವಾದವನ್ನು ಬೆಳೆಯಿಸಿ ಆಚಾರ್ಯರಿಂದ ನಿರುತ್ತರರೂ ನಿಸ್ಸಂಶಯರೂ ಆದರು. ಮಾತ್ರವಲ್ಲದೇ ಶ್ರೀಮದಾಚಾರ್ಯರನ್ನು ವಂದಿಸಿ 'ಗುರೋ, ನನ್ನ ಚಾಪಲ್ಯವನ್ನು ಕ್ಷಮಿಸಿರಿ. ನಿಮ್ಮ ಪಾದಪದ್ಮದ ದಾಸ್ಯತ್ವವನ್ನು ಕೊಡಿರಿ, ಎಂದು ಪ್ರಾರ್ಥಿಸಿದರು. ಆಗ ಸಜ್ಜನವೃಂದವು ಸಂತೋಷವನ್ನೂ ಅಸಜ್ಜನರು ಅಪ್ರೀತಿಯನ್ನೂ ಹೊಂದಿದರು.

ತ್ರಿವಿಕ್ರಮಪಂಡಿತಾಚಾರ್ಯರು ಆಚಾರ್ಯರ ಅಪ್ಪಣೆಯಿಲ್ಲದೇ ಮಾಡಲಶಕ್ಯವಾದ ವ್ಯಾಖ್ಯಾನವನ್ನು ಆಚಾರ್ಯರ ಅನುಜ್ಞೆಯಿಂದ ಮಾಡಿ ಸಮುದ್ರದಿಂದ ರತ್ನಗಳು ಹೇಗೆ ಸಂಪೂರ್ಣತೆಗೆಯಲಿಕ್ಕೆ ಅಶಕ್ಯವೋ ಹಾಗೆಯೇ ಈ ಭಾಷ್ಯದ ಶ್ರುತ್ಯರ್ಥವಿಚಾರಕ್ಕೆ ಅಂಗಭೂತಗಳಾದ ನ್ಯಾಯಗಳು ಎಷ್ಟು ವಿಚಾರಮಾಡಿದರೂ ಮುಗಿಸಲಶಕ್ಯವೆಂದು ಹೇಳಿದರು.

ಆಚಾರ್ಯರ ದಶೋಪನಿಷದ್ಭಾಷ್ಯಗಳನ್ನು ನೋಡಿ ದೇವಮಂದಿರದಲ್ಲಿ ದೇವದೇವಿಯರು ಕೂಡಿದಂತೆ ಅರ್ಥಗಳು ಸಂಗತಗಳಾಗಿದ್ದಾವೆಂದು ಹೇಳಿದರು. ಜಗತ್ತಿನಲ್ಲಿದ್ದ ಪದಾರ್ಥಸಮೂಹವು ಹೇಗೆ ಸೂರ್ಯಚಂದ್ರರಿಂದ ಪ್ರಕಾಶಿತವಾಗುವುದೋ, ಹಾಗೆಯೇ ಗೀತಾತಾತ್ಪರ್ಯಭಾಷ್ಯಾದಿಗಳಿಂದ ಪ್ರಮೇಯಸಮುದಾಯವು ಪ್ರಕಾಶಿತವಾಯಿತು. ಇತಿಹಾಸ ಪುರಾಣರೂಪ ಸಮುದ್ರದಿಂದ ತಮ್ಮ ಮನಸ್ಸೆಂಬ ಮಂದರಪರ್ವತದಿಂದ ವಿಚಾರರೂಪಮಥನದಿಂದ ಉತ್ಪನ್ನವಾದ ಮಹಾಭಾರತತಾತ್ಪರ್ಯನಿರ್ಣಯವೆಂಬ ಸುಧಾವನ್ನು ಯಾವ ಮೋಕ್ಷಕಾಮುಕನು ಸೇವಿಸದೇ ಇದ್ದಾನು. ಈ ರೀತಿಯಾಗಿ ಆನಂದೋದ್ರೇಕದಿಂದ ಆಚಾರ್ಯರ ಗ್ರಂಥಗಳನ್ನು ನೋಡಿ ಬಹುಧಾ ಸ್ತುತಿಸಿದರು.

ಆಚಾರ್ಯರ ತಮ್ಮಂದಿರು( ಮುಂದಿನ ವಿಷ್ಣುತೀರ್ಥರು) ಸರ್ವದಾ ಮಧ್ವಾಚಾರ್ಯರಲ್ಲಿಯೇ ಮನಸ್ಸಿಟ್ಟಕಾರಣ ಯಾವ ತರಹದ ತಾಪಕ್ಕೂ ಒಳಗಾಗದ ಮಾತಾಪಿತರು ಸ್ವರ್ಗವನ್ನು ಹೊಂದೋಣ ದೈವವಿಲಾಸದಿಂದ ನಷ್ಟವಾದ ಧನಗೋವುಧಾನ್ಯವುಳ್ಳವರಾಗಿ ವಿರಕ್ತಿಯಿಂದ ಆಚಾರ್ಯರ ಪಾದದಲ್ಲಿ ನಮ್ರರಾಗಿ ಸನ್ಯಾಸವನ್ನು ಪ್ರಾರ್ಥಿಸುತ್ತಿರಲು ಯೋಗ್ಯವಾದ ಕಾಲನಿರೀಕ್ಷಣೆಯಿಂದ ಮನೆಯನ್ನು ಕುರಿತು ಶ್ರೀಮದಾಚಾರ್ಯರು ಕಳುಹಿದಾಗ ಭರತನು ರಾಮದೇವರ ಆಗಮನವನ್ನು ಮಾಡಿಕೊಂಡಿದ್ದಂತೆ ಇವರೂ ವಿರಕ್ತಿಯಿಂದ ದೇಹಧಾರಣೆಗೆ ಉಪಯುಕ್ತವಾಗಿ ಭೋಜನಾದಿಗಳನ್ನು ಸ್ವೀಕರಿಸುತ್ತಾ ವಿರಕ್ತಿಯಿಂದ ಆಚಾರ್ಯರ ಸಮಯನಿರೀಕ್ಷಣೆಯನ್ನು ಮಾಡುತ್ತಿರಲು ಶ್ರೀಮದಾಚಾರ್ಯರು ತನ್ನ ಮುಂದೆ ಬರಲಿರುವ ವಿರಹದಿಂದ ಖಿನ್ನನಾದ ಜಯಸಿಂಹ ರಾಜನನ್ನು ಅವನ ರಾಜ್ಯದಲ್ಲಿ ಕೂಡ್ರಿಸಿ ಶರದೃತುವಿನ ಅಂತ್ಯಸಮಯದಲ್ಲಿ ಪಾಜಕಕ್ಷೇತ್ರವನ್ನು ಹೊಂದಿದರು. ವಿಶುದ್ಧವಾದ ಮಾತಾಪಿತೃವಂಶದಲ್ಲಿ ಜನಿಸಿದ ಶ್ರುತಿಪಾಠ ತದರ್ಥಾವಧಾರಣದಿಂದ ಕೂಡಿದ ಮನೋವಾಕ್ಕಾಯಗಳಿಂದ ಶುದ್ಧಿಯನ್ನು ಹೊಂದಿದ ವಿರಕ್ತರಾದ ಮಾತಾಪಿತೃಗಳ ಔರ್ಧ್ವದೇಹಿಕ ಕ್ರಿಯೆಗಳನ್ನು ಮಾಡಿದ ತಮ್ಮನನ್ನು ಯತಿಯನ್ನಾಗಿ ಮಾಡಿ ಚತುರ್ಮುಖಬ್ರಹ್ಮದೇವರಿಗೆ

ಸಮರಾದ ಪೂರ್ಣಪ್ರಜ್ಞರು ಅತಿರಹಸ್ಯವಾದ ಪರಬ್ರಹ್ಮಪ್ರತಿಪಾದಕವಾದ ಪ್ರಣವ ಮಂತ್ರವನ್ನು ಉಪದೇಶಿಸಿ ಸಂತುಷ್ಟವಾದಹೃದಯದಿಂದ ವಿಷ್ಣುತೀರ್ಥರೆಂಬ ಸನ್ನಾಮಯುಕ್ತರನ್ನಾಗಿ ಮಾಡಿದರು.

ಆ ವಿಷ್ಣುತೀರ್ಥರು ಶ್ರವಣ ಮನನ ಗ್ರಂಥದ ಅನುವಾದ ಇವುಗಳಿಂದ ಕಾಲವನ್ನು ವ್ಯರ್ಥವನ್ನಾಗಿ ಮಾಡದೇ, ಇಂದ್ರಿಯನಿಗ್ರಹ ಭಕ್ತಿ, ಮನಸ್ಸಿನಲ್ಲಿಯೂ ವಾಕ್ಕಿನಲ್ಲಿಯೂ ಕೌರ್ಯವಿಲ್ಲದೇ ಇರೋಣ ರೂಪಮಾಧುರ್ಯ, ಪರಿಚರ್ಯಾ ಮೊದಲಾದ ಗುಣಗಳಿಂದ ತನ್ನಲ್ಲಿರುವ ಶ್ರೀಮದಾಚಾರ್ಯರ ಕೃಪಾಂಕುರವನ್ನು ವೃಕ್ಷದಂತೆ ಅಭಿವೃದ್ಧವನ್ನಾಗಿ ಮಾಡಿದರು. ವಿಷ್ಣುತೀರ್ಥರು ಕಾಮಕ್ರೋಧಾದಿಶೂನ್ಯ ರಾದ ತಪಸ್ವಿಗಳ ತಪಸ್ಸಿದ್ಧಿಗೆ ಆಶ್ರಮಸ್ಥಾನವಾದ ಹರಿಶ್ಚಂದ್ರನಾಮಕಪರ್ವತವನ್ನು ಅದೃಶ್ಯರಾಗಿ ಹೊಂದಿದರು. ಅಲ್ಲಿದ್ವಂದ್ವಸಹಿಷ್ಣುಗಳಾಗಿ ವಿಮತ್ಸರರಾಗಿ ತಪಸ್ಸಿಗೆ ಅಶನಾದಿಗಳು ವಿರೋಧಿಗಳೆಂದು ತಿಳಿದು ಅವುಗಳನ್ನು ಬಿಟ್ಟು ಭಕ್ತರು ತಂದ ಪಂಚಗವ್ಯವನ್ನು ಮಾತ್ರ ಅವರ ಪ್ರಾರ್ಥನಾಪ್ರಕಾರ ಐದು ದಿವಸಗಳಿಗೊಮ್ಮೆ ಸ್ವಲ್ಪಸ್ವಲ್ಪ ಸ್ವೀಕರಿಸುತ್ತಾ ಕೆಲವು ಕಾಲ ಕಳೆದು ತದನಂತರ ಭೂಮಿಯಲ್ಲಿ ಬಿದ್ದ ಬಿಲ್ವಪತ್ರವನ್ನು ಭುಂಜಿಸಿ, ಕೇವಲ ಜಲದಿಂದ ತೃಪ್ತಿಯನ್ನು ಹೊಂದಿ, ಮನೋನಿಗ್ರಹವುಳ್ಳವರಾಗಿ ಯಾವ ಹರಿಶ್ಚಂದ್ರಪರ್ವತದ ಶಿಲಾದಲ್ಲಿ ದೈವವಿಮುಖರಿಗೆ ಒಂದು ದಿವಸವೂ ಇರಲಿಕ್ಕೆ ಅಸಾಧ್ಯವೋ ಅಂತಹ ಪರ್ವತದಲ್ಲಿ ಪವನಾಂಶರಾದ ಮಧ್ವರ ಅನುಜರಾದ ವಿಷ್ಣುತೀರ್ಥರು ಪ್ರಾಣಾಯಾಮದಿಂದ ವಾಯುನಿರೋಧಮಾಡಿ ಇಂದ್ರಿಯಗಳೆಂಬ ಅಶ್ವಗಳನ್ನು ಮನೋರೂಪಸಾರಥಿಯಿಂದ ವಿಷಯದ ಕಡೆ ಹೋಗದಿದ್ದಂತೆ ಮಾಡಿ ಪರಮಾತ್ಮನ ರೂಪವನ್ನು ಸ್ಮರಣೆಮಾಡಿಕೊಂಡು ಧ್ಯಾನಮಾಡಿ ಯೋಗಿಗಳಿಂದ ಪ್ರಾಪ್ಯವಾದ ದುಃಖನಾಶಕವಾದ ಸಮಾಧಿಯನ್ನು ಹೊಂದಿದರು. ಶ್ರೀಮದಾಚಾರ್ಯರು ತನ್ನ ತಮ್ಮಂದಿರಾದ ವಿಷ್ಣುತೀರ್ಥರಲ್ಲಿ ಮಾಡಿದ ಅನುಗ್ರಹವು ಸಮಗ್ರವಾಗಿ ತಿಳಿಯದಕಾರಣ ಅಥವಾ ಗೋಪ್ಯವಾದ ಕಾರಣ ಸಮಗ್ರವರ್ಣಿಸಲು ಅಶಕ್ಯವೆಂದು ಪಂಡಿತಾಚಾರ್ಯರು ನಿರೂಪಿಸಿರುವರು.

ಗೋದಾವರೀನದೀತೀರವಾಸಿಗಳಾದ ಪಂಡಿತಪ್ರಕಾಂಡರಾದ ಶೋಭನಭಟ್ಟನಾಮಕ ವಿದ್ವದ್ವರರು ಶ್ರೀಮದಾಚಾರ್ಯರ ಪ್ರಸಿದ್ಧಗಳಾದ ಗುಣಗಳಿಂದ ಸೆಳೆಯಲ್ಪಟ್ಟವರಾಗಿ ಶ್ರೀಮದಾಚಾರ್ಯರಿಂದ ಸನ್ಯಾಸದೀಕ್ಷೆಯನ್ನು ಹೊಂದಿ ಪದ್ಮನಾಭತೀರ್ಥರೆಂದು ಸುಗೃಹೀತನಾಮಧೇಯರಾದರು. ಅವರು ವೇದಾಂತಶ್ರವಣ, ಬುದ್ಧಿಶಕ್ತಿ ಭಕ್ತಿ ವಿರಕ್ತಿ ಮತ್ತು ಗುರುಶುಶ್ರೂಷಾ ಇವುಗಳಿಂದ ಪ್ರಸನ್ನರಾದ ಪೂರ್ಣಪ್ರಜ್ಞರಿಂದ ಉತ್ತಮವಾದ ವೇದಾಂತವಿದ್ಯೆಯನ್ನು ಹೊಂದಿ ವೈಶೇಷಿಕಾದಿಗಳ ಮತಗಳಲ್ಲಿರುವ ಯುಕ್ತಿಗಳಲ್ಲಿ ಕೋಪದಿಂದ ತದ್ಯುಕ್ತಿಗಳ ನಿರಾಕರಣೆಯಲ್ಲಿ ಪ್ರವೃತ್ತರಾಗಿ ವೇದಾಂತಶಾಸ್ತ್ರವನ್ನು ಪ್ರಧಾನವಾಗಿಟ್ಟುಕೊಂಡು ಪಾಠಪ್ರವಚನಗಳಿಂದ ಸ್ವಯೂಥ್ಯದಲ್ಲಿ ಪಂಡಿತ ಮಾನ್ಯರಾದ ಮಾಯಾವಾದಿಗಳನ್ನು ವನಸ್ಥವಾದ ಸಿಂಹವು ಗ್ರಾಮಸಿಂಹಗಳನ್ನು ನಾಶಗೊಳಿಸುವಂತೆ ನಿರಾಕರಿಸಿದರು.

ಜ್ಞಾನದಿಂದ ಸಮುದ್ರದಂತಿರುವ ಈ ಪದ್ಮನಾಭತೀರ್ಥರು ಶ್ರೀಮದಾಚಾರ್ಯರಿಂದ ಮಾಡಲ್ಪಟ್ಟ ಉತ್ತಮವಾದ ಅನುವ್ಯಾಖ್ಯಾನಕ್ಕೆ ಸನ್ನ್ಯಾಯರತ್ನಾವಲೀರೂಪವಾದ ವ್ಯಾಖ್ಯಾವನ್ನು ಮಾಡಿ ಅಲ್ಲಲ್ಲಿ ಸಭೆಗಳಲ್ಲಿ ವೇದಪ್ರವಚನಾಚಾರ್ಯರ ಶಿಷ್ಯರೆಂದು ಪೂಜಿತರಾಗಿ ವೇದಾಂತಶಾಸ್ತ್ರವನ್ನು ಶಿಷ್ಯರಿಗೆ ಉಪದೇಶವನ್ನು ಕೊಡುತ್ತಿದ್ದರು. ಶ್ರೀಮದಾಚಾರ್ಯರಿಗೆ ವಿಷ್ಣುತೀರ್ಥರು, ಪದ್ಮನಾಭತೀರ್ಥರು ಇವರಿಂದ ಮುಂಚೆಯೂ ನಾನಾದೇಶಗಳಲ್ಲಿ ಉತ್ಪನ್ನರಾದ ಜನರು ಶಿಷ್ಯರಾಗಿ ಅವರಿಂದ ಯತ್ಯಾಶ್ರಮವನ್ನು ಸ್ವೀಕಾರ ಮಾಡಿದ್ದಾರೆ. ಆ ಪೈಕಿ ಹೃಷಿಕೇಶತೀರ್ಥರು, ಜನಾರ್ದನತೀರ್ಥರು, ನರಸಿಂಹತೀರ್ಥರು, ಉಪೇಂದ್ರತೀರ್ಥರು, ವಾಮನತೀರ್ಥರು, ರಾಮತೀರ್ಥರು, ಅಧೋಕ್ಷಜತೀರ್ಥರು ಎಂದು ಪ್ರಸಿದ್ಧರಾದವರು. ಭಕ್ತಿವೈರಾಗ್ಯಾದಿಗುಣಗಳಲ್ಲಿ ಸಮುದ್ರದಂತಿರುವವರು, ಲೋಕಸಂಚಾರದಿಂದ ಅಲ್ಲಲ್ಲಿ ದುಶ್ಶಾಸ್ತ್ರವನ್ನು ಖಂಡಿಸಿಕೊಂಡು ಸಚ್ಛಾಸ್ತ್ರವನ್ನು ಉಪದೇಶಿಸಿಕೊಂಡು ಶ್ರೀಕೃಷ್ಣನ ಚರಣಾರ್ಚಕರಾಗಿ ಭೂಮಿಯನ್ನು ಅಲಂಕರಿಸಿಕೊಂಡಿದ್ದರು. ಹೀಗೆ ಗೃಹಸ್ಥಾಶ್ರಮಿಗಳಿಗೂ ಆಚಾರ್ಯರ ಸಮಗ್ರಾನುಗ್ರಹಕ್ಕೆ ಪಾತ್ರರಾಗಿದ್ದರು. ಮೂರು ಅಗ್ನಿಗಳಂತೆ ತ್ರಿವಿಕ್ರಮಪಂಡಿತಾಚಾರ್ಯರು ಮತ್ತು ಇಬ್ಬರು ಶಂಕರಪಂಡಿತಾಚಾರ್ಯರು ಹೀಗೆ ಮೂರುಜನರೂ ಪ್ರಸಿದ್ಧರಾಗಿದ್ದರು. ರಾಮಭಕ್ತರಾದ ಪೂರ್ಣಪ್ರಜ್ಞರು ಕೆಲವರಿಗೆ ಶುಶ್ರೂಷಾದಿ ಸೇವಾದಿಂದಲೇ ಪ್ರಸನ್ನರಾಗಿ ಯೋಗಿಗಳಿಂದ ಹೊಂದಲಶಕ್ಯವಾದ ಉತ್ತಮವಾದ ಗತಿಯನ್ನು ಕೊಟ್ಟರು. ಇದೇ ರೀತಿಯಲ್ಲಿ ಸಜ್ಜನರಿಂದ ಅರ್ಚಿತರಾದ ಪೂರ್ಣಪ್ರಜ್ಞರು ಪವಿತ್ರವಾದ ಗಾಳಿಯಿಂದ ಸೇವನೀಯವಾದ ಕಣ್ವತೀರ್ಥಗ್ರಾಮದ ಮಠದಲ್ಲಿ ಅಲ್ಲಿರುವ ಜನರಿಂದ ಪ್ರಾರ್ಥಿತರಾಗಿ ಶಯನೀಏಕಾದಶಿಯಲ್ಲಿ (ಆಷಾಢಶುದ್ಧ ಏಕಾದಶಿಯಲ್ಲಿ) ತಪ್ತಮುದ್ರಾಧಾರಣವನ್ನು ಮಾಡಿ ಆವಾಸ ಮಾಡಿದರು. ಅಲ್ಲಿಯೇ ಆಚಾರ್ಯರ ಪೂರ್ವಪ್ರಸಕ್ತ ಎಂಟು ಶಿಷ್ಯರಲ್ಲಿ ವಿಷ್ಣುತೀರ್ಥರು (ಸೋದಾ ಮಠದವರು) ವಾಮನತೀರ್ಥರು

(ಶೀರೂರುಮಠದವರು) ರಾಮತೀರ್ಥರು(ಕಾಣೂರುಮಠದವರು) ಅಧೋಕ್ಷಜತೀರ್ಥರು (ಪೇಜಾವರಮಠದವರು) ಉಪೇಂದ್ರತೀರ್ಥರು(ಪುತ್ತಿಗೆ ಮಠದವರು) ಜನಾರ್ದನತೀರ್ಥರು(ಕೃಷ್ಣಾಪುರ ಮಠದವರು) ಹೃಷಿಕೇಶತೀರ್ಥರು(ಫಲಿಮಾರು ಮಠದವರು) ನರಹರಿತೀರ್ಥರು(ಅದಮಾರು ಮಠದವರು) ಹೀಗೆ ಎಂಟು ಜನ ಶಿಷ್ಯರಾದ ಯತಿಗಳು ಒಂದಾನೊಂದು ದಿನ ಪಾಠಮುಗಿಸಿದ ಸಮಯ ಶ್ರೀಮದಾಚಾರ್ಯರಲ್ಲಿ ತಾವು ಕೊಟ್ಟ ಪ್ರಣವೋಪದೇಶವು ಅವಿಚ್ಛಿನ್ನವಾಗಿ ನಡೆಯುವುದಕ್ಕೆ ಉಪಾಯವನ್ನು ಆಜ್ಞಾಪಿಸಬೇಕೆಂದು ಪ್ರಾರ್ಥಿಸಲು ಪೂರ್ಣಪ್ರಜ್ಞರು ನೀವು ಇಬ್ಬಿಬ್ಬರು ಒಂದಾಗಿ ಈ ಅಶ್ವತ್ಥಕಟ್ಟೆಯಿಂದ ಹೊರಹೋಗಿರೆಂದು ಆಜ್ಞಾಪಿಸಿದರು. ಆಗ ಇಬ್ಬರಿಬ್ಬರು ಒಂದೊಂದು ಮಾರ್ಗವಾಗಿ ಬರಲು ಆಯಾಯ ಎರಡು ಮಠಗಳು ದ್ವಂದ್ವಮಠಗಳೆಂದು ಅನ್ನಿಸಿಕೊಂಡವು. ಆ ಎರಡು ಎರಡು ಮಠಗಳಲ್ಲಿ ಶ್ರೀಗಳವರು ಶಿಷ್ಯರನ್ನು ಪಟ್ಟದಲ್ಲಿ ಕೂಡಿಸದೇ ದೇಹವನ್ನು ಬಿಟ್ಟು ವಿಷ್ಣುಪದವನ್ನು ಹೊಂದಿದಾಗ ಇನ್ನೊಂದು ದ್ವಂದ್ವ ಮಠದ ಶ್ರೀಗಳವರು ಈ ಮಠಕ್ಕೆ ಸನ್ಯಾಸಕೊಟ್ಟು ಆ ಯತಿಗಳನ್ನು ಅಧಿಪತಿಗಳನ್ನಾಗಿ ಮಾಡಿ ಪ್ರಣವವನ್ನು ಉಪದೇಶಿಸುವರು. ಅತಏವ ಅಂದಿನಿಂದ ಇಂದಿನವರೆಗೂ ಅವಿಚ್ಛಿನ್ನವಾಗಿ ಪ್ರಣವಮಂತ್ರೋಪದೇಶವು ಬಂದಿರುವುದೇ ಉಡುಪಿಯಲ್ಲಿರುವ ಎಂಟುಮಠಗಳಲ್ಲಿರುವ ವೈಶಿಷ್ಟ್ಯವು. ದ್ವಂದ್ವ ಮಠಗಳು ಸೋದಾಮಠ-ಶೀರೂರುಮಠ, ಕಾಣೂರುಮಠ-ಪೇಜಾವರಮಠ, ಕೃಷ್ಣಾಪುರಮಠ-ಪುತ್ತಿಗೆಮಠ, ಅದಮಾರುಮಠ-ಫಲಿಮಾರುಮಠ, ಈ ದ್ವಂದ್ವಮಠ- ಗಳನ್ನು ಮಾಡಿದ ಚಿನ್ಹೆಯು ಕಣ್ವತೀರ್ಥದಲ್ಲಿರುವ ಅಶ್ವತ್ಥಕಟ್ಟೆಯಲ್ಲಿ ಈಗಲೂ ತೋರುತ್ತಲಿದೆ.

ಒಂದಾನೊಂದು ದಿನ ಗೋಮತೀನದೀತೀರದಲ್ಲಿ ಸರ್ವಜ್ಞರಾದ ಸ್ವಚ್ಛಕೀರ್ತಿಯುಳ್ಳ ಪೂರ್ಣಪ್ರಜ್ಞರನ್ನು ಶ್ರುತಿವಿದ್ವೇಷಿಯಾದ ಬಹುಭಾಷಿಯಾದ ಶೂದ್ರಜಾತಿಯರಾಜನು ವೇದವು ಅಲ್ಲಲ್ಲಿ ತದುಕ್ತಕರ್ಮವನ್ನು ಮಾಡಿದರೂ ಫಲವಾಗದೇ ಇರುವ ಕಾರಣ ಅಪ್ರಮಾಣವೆಂದೆನಲು ಪೂರ್ಣಪ್ರಜ್ಞರು ಸತ್ಸಂತಾನಜತ್ವಾದಿಅಧಿಕಾರವುಳ್ಳ ಯೋಗ್ಯನಿಗೆ ವೇದೋಕ್ತವಾದ ಫಲವು ಲಭಿಸುವುದು. ಅನ್ಯಥಾ ದುಷ್ಟವಾಗುವುದಿಲ್ಲವೆಂದೆನಲು ಧೂರ್ತನಾದ ಕ್ಷಿತಿಪನು ನೀವು ಹೇಳುವ ಅಧಿಕಾರಿಯು ಶಶವಿಷಾಣತುಲ್ಯನು, ಎಲ್ಲಿಯೂ ಉಪಲಬ್ಧವಾಗು ವುದಿಲ್ಲವೆಂದೆನಲು, ಆ ರಾಜೋಕ್ತವಾದ ಆಕ್ಷೇಪವನ್ನು ಸಹಿಸದೇ ಉತ್ತಮವಾದ ಜ್ಞಾನವುಳ್ಳ ಆನಂದತೀರ್ಥರು ತತ್‌ಕ್ಷಣವೇ ತನ್ನ ಹಸ್ತಕಮಲಗಳಿಂದ ಹೆಸರಿನ ಬೀಜವನ್ನು ಹಿಡಕೊಂಡು (ಯಾಃ ಓಷಧೀಃ ಇತ್ಯಾದಿ) ಸೂಕ್ತವನ್ನು ಜಪಿಸಿ ಅಂಕುರದಲಪುಷ್ಪಬೀಜ ಇವುಗಳ ಸೃಷ್ಟಿಯನ್ನು ಮಾಡಿತೋರಿಸಿದರು.

ಒಂದಾನೊಂದು ದಿನ ರಾತ್ರಿಯಕಾಲದಲ್ಲಿ ಶ್ರೀಮದಾಚಾರ್ಯರು ಪಾಠಹೇಳುತ್ತಿರುವಾಗ ದೀಪವು ನಂದಿಹೋಗಲು ಕರುಣದಿಂದ ತನ್ನ ಶಿಷ್ಯರನ್ನು ಕುರಿತು ತನ್ನ ಅಂಗುಷ್ಠದ ಉಗುರಿನ ಕಾಂತಿಯಿಂದ ವ್ಯಾಖ್ಯಾನವನ್ನು ಪೂರ್ಣಗೊಳಿಸಿದರು.

ಒಂದು ನದೀತೀರದಲ್ಲಿ ನೀರಿನವೇಗವನ್ನು ಸಹಿಸಲು ಶಕ್ತವಾದ ದೊಡ್ಡ ಶಿಲೆಯನ್ನು ಬಹುಜನರು ಸ್ವಲ್ಪ ದೂರತಂದು ಅಶಕ್ತಿಯಿಂದ ಮಧ್ಯೆಬಿಟ್ಟಿದ್ದನ್ನು ನೋಡಿ ಜನರ ಉಪಕಾರಾರ್ಥವಾಗಿ ಈ ಶಿಲೆಯನ್ನು ಆ ತೀರ್ಥದ ಸಮೀಪಕ್ಕೆ ಏಕೆ ತೆಗೆದುಕೊಂಡು ಹೋಗಲಿಲ್ಲ ಎಂದು ಹೇಳಲು ಅಲ್ಲಿಯ ಜನರು ಈ ಶಿಲೆಯನ್ನು ತರಲು ಭೀಮಸೇನದೇವರು ಕೂಡ ಶಕ್ತರಾಗುವರೋ ಇಲ್ಲವೋ, ಎಂದೆನಲು ಹನುಮಭೀಮಸ್ವರೂಪರಾದ ಪೂರ್ಣಪ್ರಜ್ಞರು ಹನುಮದವತಾರದಲ್ಲಿ ಗಂಧಮಾದನವನ್ನು ತಂದಂತೆ ಅನಾಯಾಸದಿಂದ ಆ ಶಿಲೆಯನ್ನು ವಿವಕ್ಷಿತಪ್ರದೇಶದಲ್ಲಿ ತಂದು ಇಡುವವರಾದರು. ಆ ಶಿಲೆಯು ಖಂಡಕಲಶಾಖ್ಯತುಂಗಭದ್ರಾತೀರದಲ್ಲಿ ಈಗಲೂ ಇತಿಹಾಸ ಪ್ರಸಿದ್ಧವಾಗಿದೆ.

ಒಂದಾನೊಂದು ಕಾಲದಲ್ಲಿ ಅಮಾವಾಸ್ಯಾದಿನ ಸೂರ್ಯೋಪರಾಗವು ಬರುತ್ತಿರಲು ಶ್ರೀಮದಾಚಾರ್ಯರು ಸಮುದ್ರಸ್ನಾನಾರ್ಥವಾಗಿ ಸಕಲಶಿಷ್ಯರಿಂದೊಡಗೂಡಿ ದ್ವಿಜಶ್ರೇಷ್ಠರಾದ ಕಣ್ವಋಷಿಗಳಿಗೆ ಸಮ್ಮತವಾದ ಮಠವನ್ನು ಹೊಂದಿದಾಗ ಅಲ್ಲಿರುವ ಗ್ರಾಮೀನಜನರು ಸಬಾಲವೃದ್ಧರು ಅಲ್ಲಿಯ ತೀರ್ಥದಲ್ಲಿ ಸ್ನಾನಮಾಡಿ ವದ್ದೆಯಾದ ಅಂಗವುಳ್ಳವರು ಶಿಷ್ಯರಿಂದೊಡಗೂಡಿದ ಪೂರ್ಣಪ್ರಜ್ಞರನ್ನು ನೋಡಿ ಸಂತೋಷಭರಿತರಾಗಿ ಪೂರ್ಣಪ್ರಜ್ಞರಿಗೆ ಭಕ್ತ್ಯಾವಂದನೆಯನ್ನು ಮಾಡಿ ಅವರಿಂದ ಕೂಡಿಕೊಂಡು ಆ ಪುಣ್ಯಕಾಲದಲ್ಲಿ ಸಮುದ್ರದಲ್ಲಿ ಸ್ನಾನವನ್ನು ಮಾಡಿದರು. ಆಗ ಮಹಾತರಂಗಗಳಿಂದ ಈಷಚ್ಚಲಿತವಾದ ದೇಹವುಳ್ಳ ಆಚಾರ್ಯರನ್ನು ನೋಡಿ 'ಇವರು ತ್ರಿಲೋಕಗುರುಗಳಂತೆ ಸಮುದ್ರಪ್ರವಾಹದಲ್ಲಿ ಸ್ಖಲಿತರಾದರೆಂ'ದನಲು ಸರ್ವಜನರಿಗೂ ತನ್ನ ಈಶಿತ್ವವನ್ನು ತೋರಿಸುವ ಬಗ್ಗೆ ತೀಕ್ಷ್ಣಕಟಾಕ್ಷದಿಂದ ಸಮುದ್ರ ವನ್ನು ನೋಡಲು ಆ ಭಾಗದಲ್ಲಿ ಸಮುದ್ರವು ತೆರೆಗಳಿಲ್ಲದ ಸರೋವರಕ್ಕೆ

ಸದೃಶವಾಯಿತು. ಅದ್ಯಾಪಿ ನೋಡುವವರಿಗೆ ಸ್ಪಷ್ಟವಾಗಿ ಕಾಣುವುದು.

ಒಂದಾನೊಂದು ದಿನ ಶ್ರೀಮದಾಚಾರ್ಯರು ಪಾಠವನ್ನು ಹೇಳುತ್ತಿರುವಾಗ ಕಾಂತೇಶ್ವರನಾಮಕದೇವಾಲಯದಲ್ಲಿ ಮೂವತ್ತು ಜನಬಲಿಷ್ಠರು ಎತ್ತಿಕೊಂಡುತಂದ ಧ್ವಜಸ್ತಂಭವನ್ನು ಯಾವಗಂಡವಾಟಕನಾಮಕ ಒಬ್ಬ ಮಲ್ಲನು ಎತ್ತಿದ್ದನೋ ಅಂತಹ ಗಂಡವಾಟನು ಅಗ್ರಜಸಹಿತನಾಗಿ ದುರ್ಭಾವನೆಯಿಂದ ಪೂರ್ಣಪ್ರಜ್ಞರದರ್ಶನಕ್ಕೆ ಬರಲು ಗ್ರಾಮೀಣಜನರು ಪೂರ್ಣಪ್ರಜ್ಞರ ಪರೀಕ್ಷಾಬುದ್ಧಿಯಿಂದ ಇವರು ತಮ್ಮ ಸೇವಾರ್ಥವಾಗಿ ಬಂದವರೆಂದೆನಲು ಪೂರ್ಣಪ್ರಜ್ಞರು ಅವರ ಶಕ್ತಿಯನ್ನು ತೋರಿಸಲೆಂದು ಅಪ್ಪಣೆಕೊಟ್ಟಾಗ ಅವರು ಆಚಾರ್ಯರ ಅಂಗವನ್ನು ಮರ್ದನೆ ಮಾಡಲುಪಕ್ರಮಿಸಿ ಕ್ರಮೇಣ ಕಂಠವನ್ನು ತೀಕ್ಷ್ಣವಾಗಿ ಹಿಚುಕಲು ಯತ್ನಮಾಡಿ ತಾವೇ ಬೆವರಿದ ಮೈಯುಳ್ಳವರಾಗಿ ದುಃಖಿತರಾಗೋಣ ಆಚಾರ್ಯರ ಅಪ್ಪಣೆಯಿಂದ ಗಾಳಿಹಾಕಿ ಆಶ್ವಾಸಿತರಾದರು ಅಲಸರಾಗಿ ಭೂಮಿಯಲ್ಲಿ ಬಿದ್ದರು. ಪೂರ್ಣಪ್ರಜ್ಞರು ಗತಶ್ರಮರಾದ ಗಂಡವಾಟರನ್ನು ನೆಲದಲ್ಲಿಟ್ಟು ತನ್ನ ಅಂಗುಲಿಯನ್ನು ಎತ್ತಲು ಅಪ್ಪಣೆಕೊಡಲು ಆಗ ಅವರು ಅತಿಯಾದ ಯತ್ನವನ್ನು ಮಾಡಿದರೂ ಆಚಾರ್ಯರ ಅಂಗುಲಿಯನ್ನು ಹಂದಾಡಿಸಲು ಶಕ್ತರಾಗಲಿಲ್ಲ. ಆಗ ಪೂರ್ಣಪ್ರಜ್ಞರು ತನ್ನ ಮಹಿಮಾತಿಶಯವನ್ನು ಭಕ್ತಜನರಿಗೆ ವ್ಯಕ್ತಪಡಿಸುವ ಉದ್ದಿಶ್ಯ ಏನೊಂದೂ ಯತ್ನವಿಲ್ಲದ ಬ್ರಹ್ಮಚಾರಿಯ ಹೆಗಲನ್ನು ಹತ್ತಿ ಸಮೀಪದಲ್ಲಿರುವ ನರಸಿಂಹದೇವಾಲಯ ವನ್ನು ಹೋಗಿ ತನಗಿರುವ ಅಣಿಮಾದಿ ಅಷ್ಟೈಶ್ವರ್ಯವನ್ನು ವ್ಯಕ್ತಗೊಳಿಸಿ ಎಲ್ಲರಿಗೂ ಆಶ್ಚರ್ಯವನ್ನುಂಟುಮಾಡಿದರು.

ಶ್ರೀಮದಾಚಾರ್ಯರು ಬಹುಕಾಲದಿಂದ ಪೂಜಾನೈವೇದ್ಯಾದಿಗಳಿಂದ ವಿರಹಿತರಾದ ಪಾರಂತೀನಾಮಕ ದೇವತಾಯತನವನ್ನು ಹೊಂದಿ ಅಲ್ಲಿಯೇ ಸಮೀಪವಿರುವ ರಾಜನನ್ನೂ, ಇತರ ಗ್ರಾಮೀನರನ್ನೂ ಕರಿಸಿ ದಿನಾರ್ಧದೊಳಗೆ ಆ ದೇವತಾಲಯಕ್ಕೆ ಬೇಕಾದ ಸಂಪತ್ತು ಬರುವಂತೆ ಮಾಡಿ, ಬಲಿಪೂಜಾದಿಗಳು ನಡೆಯುವಂತೆ ಮಾಡಿ, ತಮ್ಮ ಪ್ರಾಕ್ತನವಾದ ಭೀಮರೂಪದಲ್ಲಿ ಅನುಜರಿಂದ ಕೂಡಿಕೊಂಡು ಪ್ರತಿಷ್ಠಿತವಾದ ದೇವನನ್ನೂ ಬಲ್ಯರ್ಥವಾಗಿ ದ್ರೌಪದಿಯು ನೀರುಕೊಟ್ಟದ್ದನ್ನೂ ಸರ್ವವನ್ನೂ ಸ್ಮರಿಸಿದರು.

ಒಂದಾನೊಂದು ಗ್ರೀಷ್ಮಕಾಲದಲ್ಲಿ ಸರಿದಂತರಾಖ್ಯದೇಶವನ್ನು (ಅಪಭ್ರಷ್ಟ ಭಾಷೆಯಲ್ಲಿ ಇಡೆತುದೆ) ಎಂಬ ಗ್ರಾಮವನ್ನು ಕುರಿತು ಬರುವಾಗ ಅಲ್ಲಿಯ ಜನರಿಗೆ ಉಪಯುಕ್ತವಾಗಿರುವ ತಟಾಕವು ನಿರ್ಜಲವಾದುದ್ದನ್ನು ಕೇಳಿ ಆ ತಟಾಕದ ಪೂರ್ತ್ಯರ್ಥವಾಗಿ ವೃಷ್ಟೀಕರಿಸಿ ತಟಾಕವನ್ನು ಜಲದಿಂದ ತುಂಬಿಸಿ ಅಲ್ಲಿಯ ಜನರಿಗೆ ಆಶ್ಚರ್ಯವನ್ನುಂಟುಮಾಡಿದರು.

ಒಂದಾನೊಂದು ಗ್ರಾಮದಲ್ಲಿ ದುಷ್ಟಜನರ ಪ್ರೇರಣೆಗೊಳಗಾದ ಶೂದ್ರನಾದ ಗ್ರಾಮಪತಿಯು ಆಚಾರ್ಯರನ್ನು ನಿಗ್ರಹಿಸಲಿಕ್ಕಾಗಿ ಬಂದು ಆಚಾರ್ಯರ ದಿವ್ಯತೇಜಸ್ಸನ್ನು ನೋಡಿ ವಿಸ್ಮಿತನಾಗಿ ತತ್ ಕ್ಷಣವೇ ಪ್ರಹ್ವನಾಗಿ ನಮಸ್ಕರಿಸಿದನು.

ಪೂರ್ಣಪ್ರಭಾವಶಾಲಿಗಳಾದ ಆನಂದತೀರ್ಥರು ಕೊಕ್ಕಡವೆಂಬ ಗ್ರಾಮವನ್ನು ಹೊಂದಿ ಮೂರಲೋಕದ ವೈದ್ಯರಿಗೆ ಅಧಿಪತಿಯಾದ ಧನ್ವಂತರೀರೂಪಿ ಶ್ರೀಪರಮಾತ್ಮನನ್ನು ನಮಸ್ಕರಿಸಿ ಆ ಗ್ರಾಮವಾಸಿಯಾದ ತನ್ನ ಭಕ್ತನಾದ (ಅಪಭ್ರಷ್ಟ ಭಾಷೆಯಲ್ಲಿ ಇಂಡೆಪ್ಪಾಡಿತ್ತಾಯ) ಎಂಬ ಬ್ರಾಹ್ಮಣನಿಗೆ ಜ್ಞಾನಪ್ರಾಪ್ತಿಗಾಗಿ ''ಕೃಷ್ಣಾಮೃತಮಹಾರ್ಣವ'' ಎಂಬ ಗ್ರಂಥವನ್ನು ಮಾಡಿಕೊಟ್ಟರು.

ದಯಾಳುಗಳಾದ ಪೂರ್ಣಪ್ರಜ್ಞರು ಒಬ್ಬಾನೊಬ್ಬ ಭಕ್ತನಾದ ದರಿದ್ರನ ಮನೆಯಲ್ಲಿ ಭಿಕ್ಷಾರ್ಥವಾಗಿ ಪ್ರಾರ್ಥಿತರಾದವರು ದಾರಿದ್ರ್ಯದಿಂದ ಅಲ್ಪವಾಗಿ ಮಾಡಿಸಲ್ಪಟ್ಟ ಅನ್ನವನ್ನು ಬಂದ ಬಹುಮಂದಿಗೆ ತೃಪ್ತಿಯಾಗುವಂತೆ ವೃದ್ಧೀಕರಿಸಿ ತನ್ನ ಮಹಿಮೆಯನ್ನು ವ್ಯಕ್ತಪಡಿಸಿದರು. ಅದೇ ಗ್ರಾಮದಲ್ಲಿ ಶ್ರೀಮಂತನಾದ ಒಬ್ಬ ಭಕ್ತನು ಭಿಕ್ಷಾರ್ಥವಾಗಿ ತಯಾರಿಸಿದ್ದ ಬಹು ಭಕ್ಷ್ಯಭೋಜ್ಯವನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸೋಣ ಅವನ ಸಂತೋಷಕ್ಕಾಗಿ ಮೂವತ್ತುಜನರಿಗೆ ಅರ್ಹವಾದ ಅನ್ನವನ್ನು ಭುಂಜಿಸಿ ಆತನನ್ನು ಸಂತೋಷಗೊಳಿಸಿದರು.

ಆಚಾರ್ಯರು ತೋರಿಸಿದ ವೃಷ್ಟಿಯ ನಿಯಮನ, ಅಣಿಮಾಮಹಿಮಾದಿ ಶಕ್ತಿ, ಅಲ್ಪವಾದ ಅನ್ನವನ್ನು ಅಭಿವೃದ್ಧಿಪಡಿಸಿದ್ದು, ಹಾಗೆಯೇ ಬಹ್ವನ್ನಭೋಜನ, ಇವೆಲ್ಲ ಮಹಿಮೆಯು ಲೋಕನಿಯಾಮಕರಾದ ವಾಯ್ವಂಶಸಂಭೂತರಾದ ಅಮೃತಮಥನದಲ್ಲಿ ಉತ್ಪನ್ನವಾದ ಕಾಲಕೂಟ ವಿಷವನ್ನು ಭುಂಜಿಸಿ ಜೀರ್ಣೀಕರಿಸಿದ ಈ ಪೂರ್ಣಪ್ರಜ್ಞರಿಗೆ ಆಶ್ಚರ್ಯವಲ್ಲ. ಆದರೂ ಸರ್ವಜನರ ಉದ್ಧಾರರಾರ್ಥವಾಗಿ ಮನಶ್ಶುದ್ಧಿ ದ್ವಾರಾ ಮೋಕ್ಷಾದಿ ಪುರುಷಾರ್ಥಪ್ರಾಪ್ತಿಗಾಗಿ ವರ್ಣಿಸುವೆನೆಂದು ಪಂಡಿತಾಚಾರ್ಯರು ಅಪ್ಪಣೆಕೊಡಿಸಿರುವರು. ಪೂರ್ಣಪ್ರಜ್ಞರ ಗುಣಗಾಣದಲ್ಲಿ ಅವರ ಸಮಕಾಲೀನರಾದ ಪಂಡಿತಪ್ರಕಾಂಡ ರುದ್ರಾಂಶಸಂಭೂತರೆಂದು

ಪ್ರಸಿದ್ಧರಾದ ತ್ರಿವಿಕ್ರಮಪಂಡಿತಾಚಾರ್ಯರೇ **''ಸಂಸ್ತುವೇ ನಾಸ್ಮಿ ಶಕ್ತಃ''** ಎಂದು ಅಪ್ಪಣೆ ಕೊಡಿಸಿರುವಾಗ ನಮಗೆ ಶಕ್ತಿಯಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ. ಮಧ್ವವಿಜಯದಲ್ಲಿರುವ ಇನ್ನು ನಾವು ಗುರುಮುಖೇನ ಕೇಳಿದ ಪ್ರಮೇಯಗಳನ್ನು ಸ್ಥಾಲೀಪುಲಾಕನ್ಯಾಯೇನ ಬರೆದಿರುವೆವು. ಅಲ್ಲದೇ ಗ್ರಂಥವು ದೊಡ್ಡದಾದರೆ ಈಗಿನ ಜನರಿಗೆ ಔದಾಸೀನ್ಯದಾಯಕವು ಆಗುವುದು. ಸಂಕ್ಷೇಪಮಾಡಲು ಇದೂ ಕಾರಣವು. ಈ ಶ್ರೀಮದಾಚಾರ್ಯರ ಕಥೆಯು ಭೂಲೋಕದಲ್ಲಿ ಮಾತ್ರ ಮಾನ್ಯವಾದುದಲ್ಲ. ಕಿಂತು ದೇವಸಭೆಯಲ್ಲಿಯೂ ಗಂಧರ್ವರಿಂದ ಗಾನಮಾಡಲ್ಪಡುತ್ತದೆ.

ದೇವತೆಗಳು, ಭೂಮಿಯಲ್ಲಿ ಮೂರ್ತಿಮಂತರಾಗಿ ಆವಾಸಮಾಡುವ ಶೋಭನ ಯಶಸ್ಸುಳ್ಳ ಶಿಷ್ಯರ ಮಧ್ಯದಲ್ಲಿ ಐತರೇಯ ಉಪನಿಷತ್ತನ್ನು ಪಾಠಹೇಳುವ, ಭಾಗ್ಯವಂತರಾದ, ದಿವ್ಯಲಕ್ಷಣಭರಿತರಾದ, ಶ್ರೀಪೂರ್ಣಪ್ರಜ್ಞರನ್ನು ನೋಡಿ ಕೃತಾರ್ಥರಾಗಿ ''ನೀವು ನಿಮ್ಮ ವಾಕ್‌ಸಮುದಾಯದಿಂದ ದುಶ್ಶಾಸ್ತ್ರವೆಂಬ ತಮಸ್ಸನ್ನು ನಾಶಪಡಿಸಿ ಮುಕುಂದನ ಗುಣಗಳಿಗೆ ಪ್ರಕಾಶಕವಾದ ಶಾಸ್ತ್ರವನ್ನು ರಚಿಸಿ ನಿಮ್ಮ ನಿರ್ದುಷ್ಟಗಳಾದ ಗುಣಗಳಿಂದ ಹದಿನಾಲ್ಕು ಲೋಕಗಳಲ್ಲಿರುವ ಜನರನ್ನು ಜಯಿಸಿದಿರಿ. ಹೇ ಗುರೋ! ಉತ್ತಮವಾದ ಕರುಣೆಯಿಂದ ನಮ್ಮನ್ನು ರಕ್ಷಿಸಿರೆಂದು' ಪ್ರಾರ್ಥಿಸಲು ಅವರ ಭಾವವನ್ನರಿತ ಪೂರ್ಣಪ್ರಜ್ಞರು ಯತಿಗಳಾದ ಶಿಷ್ಯರಿಗೆ **''ವಿಷ್ಣುಸರ್ವೋತ್ತಮತ್ವಂ ಚ ಸರ್ವದಾ ಪ್ರತಿಪಾದಯ''** ಎಂದು ಚರಮೋಪದೇಶವನ್ನು ಕೊಟ್ಟು ಇತರ ಗೃಹಸ್ಥಶಿಷ್ಯರಿಗೂ ಯೋಗ್ಯವಾದ ಚರಮೋಪದೇಶವನ್ನು ಮಾಡಿದರು. ದೇವತೆಗಳು ''ಹೇ ಪ್ರಾಣೇಶ, ಭಕ್ತರ ರಕ್ಷಣೆಗಾಗಿ ರಾಮಪ್ರಿಯನಾಗಿ ಹನುಮನ್ನಾಮಕರಾದ ಹಾಗೆಯೇ ದ್ವಾಪರದಲ್ಲಿ ಕೃಷ್ಣಸೇವಾರ್ಥವಾಗಿ ಭೀಮನಾಮದಿಂದ ಅವತರಿಸಿದ, ಈಗ ಮಧ್ವನಾಮಕರಾಗಿ ಸಮಸ್ತ ಭಕ್ತವೃಂದಕ್ಕೆ ಮೋಕ್ಷಾದಿಪುರುಷಾರ್ಥಪ್ರದವಾದ ಜ್ಞಾನವನ್ನುಪದೇಶಿಸಿದ ನೀವು ಸದಾ ಜಯಶೀಲರು! ನಮ್ಮ ಮನಸ್ಸಿನಲ್ಲಿ ನೆಲೆಗೊಂಡಿರಬೇಕು'' ಎಂದು ದೇವತೆಗಳು ಪ್ರಾರ್ಥಿಸುತ್ತಾ ಭಗವದ್ಭಕ್ತರಲ್ಲಿ ಶ್ರೇಷ್ಠರಾದ ಶ್ರೀಮದಾನಂದತೀರ್ಥರಲ್ಲಿ ಸರ್ವಜನರಿಗೂ ದೃಗ್ಗೋಚರವಾಗುವಂತೆ ಸುಗಂಧವಾದ ಪುಷ್ಪಸಮೂಹವನ್ನು ವೃಷ್ಟೀಕರಿಸಿದರು. ಆಗ ಪೂರ್ಣಪ್ರಜ್ಞರು ಅನಂತೇಶ್ವರದೇವರ ಸನ್ನಿಧಾನದಲ್ಲಿ ಪಾಠಹೇಳಿಕೊಂಡಿರುವವರು **''ಅದೃಶ್ಯೋ ರೌಪ್ಯಪೀಠೇ ಽಸ್ತಿ ದೃಶ್ಯಸ್ತು ಬದರೀತಟೇ'** ಎಂದಿರುವ ವಚನದಂತೆ ತನ್ನ ಸರ್ವಜನದೃಗ್ಗೋಚರವಾದ ಶರೀರವನ್ನು ಅದೃಶ್ಯವನ್ನಾಗಿ ಮಾಡಿ ಬದರೀವ್ಯಾಸದೇವರ ಸನ್ನಿಧಿಯನ್ನು ಹೊಂದಿದರು.

ಇವತ್ತಿಗೆ ಉಡುಪಿಯಲ್ಲಿ ಶ್ರೀಮದನಂತೇಶ್ವರ ಸನ್ನಿಧಿಯಲ್ಲಿ ಆ ಸ್ಥಳವು ರಾರಾಜಮಾನವಾಗಿರುವುದು. ಅದ್ಯಾಪಿ ಆ ಸ್ಥಳದಲ್ಲಿಯೇ ಆಚಾರ್ಯರ ಪೂಜಾನಡಿಯುವುದು. ಉಡುಪಿಯ ಪ್ರಾಚೀನರಾದ ಪುತ್ತಿಮಠದ ಮಹನೀಯರಾದ ಮಹಾಪಂಡಿತರೂ ಆದ ಶ್ರೀಭುವನೇಂದ್ರತೀರ್ಥ ಶ್ರೀಪಾದಂಗಳವರು ಜನರಿಗೆ ಭಕ್ತಿಬರುವ ಉದ್ದಿಶ್ಯ ಆಚಾರ್ಯರ ಪ್ರತಿಮಾ ಇದ್ದರೆ ಉತ್ತಮವಾಗುವುದೆಂದು ಭಾವಿಸಿ ಪ್ರತಿಮೆ ಮಾಡಿಸಿ ಇಡೋಣ ಅಲ್ಪ ದಿವಿಸಗಳಲ್ಲಿಯೇ ಆ ಯತೀಶ್ವರರಿಗೆ ಸ್ವಪ್ನದಲ್ಲಿ ನನ್ನ ತಲೆಯಮೇಲೆ ಏಕೆ ಕಲ್ಲನ್ನು ಇಟ್ಟಿದ್ದಿ ಎಂದು ಅಪ್ಪಣೆಕೊಡಿಸೋಣ ಆ ಪ್ರತಿಮೆಯನ್ನು ತೆಗೆದು ಹಾಕಿದ್ದಾಗಿ ಐತಿಹ್ಯವು ಇರುವುದು. ಆದ್ದರಿಂದ ಹರಿಗುರು ಇಬ್ಬರು ಮಹಾಸನ್ನಿಧಾನದಿಂದ ಯುಕ್ತವಾದ ಈ ಕ್ಷೇತ್ರವನ್ನು ಸಂದರ್ಶಿಸಿ ತೀರ್ಥೋತ್ತಮವಾದ ಈ ಮಧ್ವಸರಸ್ಸಿನಲ್ಲಿ ಸ್ನಾನಮಾಡಿ ಶ್ರೀಕೃಷ್ಣಮಠದಲ್ಲಿ ಭೈಷ್ಮೀಭಾಮಾದಿ ಪೂಜಿತ ಶ್ರೀಮಧ್ವಪ್ರತಿಷ್ಠಿತ ಶ್ರೀಕೃಷ್ಣನ ದರ್ಶನಾದಿ ಸೇವಾಗಳನ್ನು ಮಾಡಿ ಅನಂತೇಶ್ವರದಲ್ಲಿ ದೇವದರ್ಶನವಮಾಡಿ ಆಚಾರ್ಯರನ್ನು ಸಂದರ್ಶಿಸಿ ಶ್ರೀಗುರುಗಳಾದ ಪೂರ್ಣಪ್ರಜ್ಞರ ಮಹಿಮಾ ತಿಳಿದು ಅವರ ಸಿದ್ಧಾಂತೋಪದೇಶವನ್ನು ಕೇಳಿ ತತ್ವಜ್ಞಾನವನ್ನು ಹೊಂದಿ ಕೃತಾರ್ಥರಾಗಬೇಕು.

ಶ್ರೀಪೂರ್ಣಪ್ರಜ್ಞರು ಯತಿಗಳ ಕರ್ತವ್ಯವನ್ನು ಬೋಧಿಸುವ ಬಗ್ಗೆ ಯತಿಪ್ರಣವಕಲ್ಪವೆಂಬ ಗ್ರಂಥವನ್ನು ಮಾಡಿ ಅದರಲ್ಲಿ ''ವಿಷ್ಣೋಃ ಸರ್ವೋತ್ತಮತ್ವಂ ಚ ಸರ್ವದಾ ಪ್ರತಿಪಾದಯ'' ಎಂದು ಉಪದೇಶಿಸಿರುವರು. ಇದರ ತಾತ್ಪರ್ಯವೇನು? ವಿಷ್ಣುಸರ್ವೋತ್ತಮತ್ವ ಒಂದೇ ಪ್ರತಿಪಾದ್ಯವೆಂದೋ, ಆ ಜ್ಞಾನಮಾತ್ರ ಮೋಕ್ಷಜನಕವೆಂದೋ, ಎಂತ ಯಾರಿಗಾದರೂ ಸಂದೇಹ ಬರಬಹುದು. ಆದರೆ ವಿಷ್ಣುಸರ್ವೋತ್ತಮತ್ವವನ್ನು ಪ್ರತಿಪಾದನೆ ಮಾಡುವಾಗ ಸಮಸ್ತ ಮಧ್ವಸಿದ್ಧಾಂತವೇ ಪ್ರತಿಪಾದಿತವಾಗುವುದು. ಅದು ಹೇಗೆಂದರೆ, ವಿಷ್ಣುವು ಸರ್ವೋತ್ತಮನೆಂದು ತಿಳಿಯಬೇಕಾದರೆ ಸರ್ವದ ಪರಿಜ್ಞಾನವಾಗಬೇಕು. ಸರ್ವವೆಂದಾಗಬೇಕಾದರೆ ವಸ್ತುಗಳಲ್ಲಿ ಪರಸ್ಪರ ಭೇದಬೇಕು. ಸರ್ವವೂ ಸಮವಾಗಿ ಇರಲು ಶಕ್ಯವಿಲ್ಲ. ಹಾಗಿದ್ದರೆ ನಿಯಮ್ಯನಿಯಾಮಕಭಾವವೇ ಕೂಡದೇ ಹೋಗುವುದು. ಅದಾದರೂ ಪ್ರಮಿತವು. ಆದಕಾರಣ ಅವುಗಳು ತರತಮಭಾವಾಪನ್ನಗಳಾಗಿಯೇ ಇರಬೇಕು. ಸಮಸ್ತತತ್ವದ

ಯಥಾರ್ಥಜ್ಞಾನವೇ ಮೋಕ್ಷಸಾಧನವಾದ ಕಾರಣ ಇದ್ದ ತಾರತಮ್ಯವು ಯಥಾರ್ಥವಾಗಿಯೇ ತಿಳಿದಿರಬೇಕು. ಜಗತ್ತಿನಲ್ಲಿ ಸರ್ವಾಂತಃಪಾತಿಯಾದ ಮುಕ್ತಾಮುಕ್ತ ವಿಭಾಗದಿಂದ ಜೀವರು ಇರುವ ಕಾರಣ ಮೋಕ್ಷದ ಸ್ವರೂಪವು ಮೋಕ್ಷಕೊಡುವವರು ಯಾರೆಂಬುವದೂ ತಿಳಿದಿರಬೇಕು. ಲೋಕದಲ್ಲಿ'ಮಾನಾಧೀನಾ ಮೇಯಸಿದ್ಧಿಃ'' ಎಂದಿರುವ ಕಾರಣ ಇಷ್ಟು ಪ್ರಮೇಯವನ್ನು ತಿಳಿಸುವ ಪ್ರಮಾಣವಾದ ವೇದದ ಜ್ಞಾನವು ಅವಶ್ಯಕ. ಪ್ರತಿಯೊಬ್ಬ ಜೀವನು ಮೋಕ್ಷವನ್ನು ಹೊಂದಬೇಕಾದರೆ ತಮ್ಮ ಸ್ವಾಮಿಯಾರು, ನಾವು ಅವನ ಭೃತ್ಯರು ಯಾರುಯಾರು ಇದ್ದೇವೆ, ಎಂದು ತಿಳಿಯಬೇಕು. ಆದ್ದರಿಂದ ಈತನ ಪರಿಚರರ ಜ್ಞಾನವು ಆವಶ್ಯಕವಾಯಿತು. ಮೋಕ್ಷಕ್ಕೆ ಅಸಾಧಾರಣಕಾರಣ ಯಾವುದೆಂದು ತಿಳಿಯದೇ ಅದರ ಸಂಪಾದನೆಯಲ್ಲಿ ಇಚ್ಛಾಪ್ರವೃತ್ತಿ ಕೂಡದೇ ಇರುವ ಕಾರಣ ಆ ಅಸಾಧಾರಣಕಾರಣವಾದ ಭಕ್ತಿಯ ಮಹಿಮೆಯನ್ನು ತಿಳಿಯಬೇಕಾಯಿತು. ಹೀಗೆ ನಮ್ಮ ಶಾಸ್ತ್ರೀಯ ಪ್ರಮೇಯಗಳು ವಿಷ್ಣುಸರ್ವೋತ್ತಮದಲ್ಲಿ ಅಡಕವಾಗಿರುವ ಕಾರಣ ಅದರ ಉಪದೇಶ ಮತ್ತು ಜ್ಞಾನ ಆವಶ್ಯಕವಾಗಿರುವ ಕಾರಣ ಶಬ್ದತಃ ಅದನ್ನೇ ಹೇಳಿದ್ದು. ಉಪದೇಶಕರಾದ ಶ್ರೀಮದಾಚಾರ್ಯರ ವೈಶಿಷ್ಟ್ಯವು ಇದೇ ಒಂದು ವಿಷ್ಣುಸರ್ವೋತ್ತಮತ್ವವನ್ನು ಪ್ರತಿಪಾದಿಸಿರಿ ಎಂಬ ಶಬ್ದದಿಂದ ಸಮಸ್ತ ಶಾಸ್ತ್ರಾರ್ಥಕ್ಕೆ ಪ್ರತಿಪಾದ್ಯತ್ವವನ್ನು ಹೇಳಿದ್ದು. ಉಪದೇಶಕರಲ್ಲಿರುವ ವೈಶಿಷ್ಟ್ಯವು ಇದೇ ಶಬ್ದ ಅಲ್ಪವಾಗಿ ಅರ್ಥ ಬಹುವಾಗಿ ಇರುವುದು.

## ವಿಷ್ಣುಸರ್ವೋತ್ತಮತ್ವ

''ಭಾರತಂ ಸರ್ವಶಾಸ್ತ್ರೇಷು ಭಾರತೇ ಗೀತಿಕಾ ವರಾ'' ಎಂಬ ಪ್ರಮಾಣದಲ್ಲಿ ಭಾರತಕ್ಕೆ ಸರ್ವಶ್ರೇಷ್ಠ್ಯವು ಉಪಪಾದಿತವಾಗಿದೆ. ಅಂತಹ ಭಾರತದಲ್ಲಿ 'ನಾಸ್ತಿ ನಾರಾಯಣ ಸಮಂ ನ ಭೂತೋ ನ ಭವಿಷ್ಯತಿ' ಎಂದು ವಿಷ್ಣುವಿನ ಸರ್ವೋತ್ತಮತ್ವವೇ ಉಪಪಾದಿತವಾಗಿದೆ. ಮತ್ತು ಸರ್ವರಿಗೂ ಗ್ರಂಥಾದಿಯಲ್ಲಿ ಮಂಗಳಾಚರಣೆಗೆ ಆವಶ್ಯಕತ್ವ ತೋರಿಸುವ ಉದ್ದಿಶ್ಯ ತಾನು ವಿಘ್ನರಹಿತರಾದರೂ ಭಾರತಕರ್ತರಾದ ವ್ಯಾಸರು ''ನಾರಾಯಣಂ ಸುರಗುರುಂ ಜಗದೇಕನಾಥಂ'' ಎಂದು ಆದಿಯಲ್ಲಿ ನಾರಾಯಣನಿಗೆ ನಮಸ್ಕಾರಮಾಡಿದ್ದರಿಂದ ಹರಿಯ ಸರ್ವೋತ್ತಮತ್ವವನ್ನೇ ತೋರಿಸಿದ ಹಾಗಾಯಿತು.

''ಸರ್ವೇಷ್ವಪಿ ಪುರಾಣೇಷು ಭಾಗವತಂ ಸ್ಮೃತಂ। ವೇದತುಲ್ಯಂ ಸಮಂ ಪಾಠೇ'' ಎಂದಿರುವ ಕಾರಣ ಹದಿನೆಂಟು ಪುರಾಣಗಳಲ್ಲಿ ಸೇರಿದ ಭಾಗವತವು ಸಾತ್ವಿಕವಾಗಿ ಜ್ಞಾನತಃ ಮೋಕ್ಷದಾಯಕವೆಂದು ಪ್ರಸಿದ್ಧವಾದುದು. ಅಂತಹ ಭಾಗವತದ ಆದಿಮಂಗಳಪದ್ಯದಲ್ಲಿ ''ಜನ್ಮಾದ್ಯಸ್ಯ ಯತೋಽನ್ವಯಾತ್'' ಎಂದು ಜಗಜ್ಜನ್ಮಾದಿಕಾರಣತ್ವವು ವಿಷ್ಣುಲಕ್ಷಣವಾಗಿ ಹೇಳಿ ಅಂತಹ ವಿಷ್ಣುವಿಗೆ ನಮನ ಮಾಡಿದ್ದಾರೆ.

ಜನ್ಮಾದಿ ಎಂಬಲ್ಲಿ ಆದಿ ಶಬ್ದದಿಂದ ಸ್ಥಿತಿ ಸಂಹಾರ ನಿಯತಿ ಜ್ಞಾನ ಆವೃತಿ ಬಂಧ ಮೋಕ್ಷ ಹೀಗೆ ಏಳನ್ನು ಇಟ್ಟುಕೊಳ್ಳಬೇಕು. ಈ ಎಂಟು ಧರ್ಮಗಳಲ್ಲಿ ಯಾವಾಗ ನಾರಾಯಣನಿಂದಾಗುವದೆಂದಾಯಿತೋ ಅಂತಹ ನಾರಾಯಣನಿಗೆ ನಿರುಪಚರಿತವಾದ ಸಾರ್ವಜ್ಞ , ಅನವಧಿಕವಾದ ಆನಂದ, ನಿರುಪಚರಿತ ಸ್ವಾತಂತ್ರ್ಯ ಹೀಗೆ ಪ್ರಮುಖಗಳಾದ ಸರ್ವಗುಣಗಳಿಲ್ಲದೇ ಜಗಜ್ಜನ್ಮಾದಿಕರ್ತೃತ್ವವು ಕೂಡದು. ತಾನು ಅಸ್ವತಂತ್ರನಾದರೆ ಮತ್ತೊಬ್ಬನಿಗೆ ಜನಿಮರಣವಿಲ್ಲದ ಆವೃತ್ತಿಶೂನ್ಯವಾದ ಮೋಕ್ಷವನ್ನು ಕೊಡುವುದು ಹೇಗೆ. ಆತನಿಗೆ ಮಹಾನಂದ ಇಲ್ಲದಲ್ಲಿ ಇಡೀ ಜಗತ್ತಿಗೆ ಸರ್ವಚೇಷ್ಟೆಯನ್ನು ಹೇಗೆ ಕೊಟ್ಟಾನು? ತಾನು ಸರ್ವಜ್ಞನಲ್ಲದಿದ್ದರೆ ಅಸಂಖ್ಯಾಕಜೀವರ ಸ್ವಭಾವ ಕರ್ಮಗಳನ್ನನು ಸರಿಸಿ ಹೇಗೆ ಪಾಲನೆ ನಡಿಸಬಹುದು. ಇಷ್ಟೆಲ್ಲ ಗುಣಗಳಿದ್ದ ಮೇಲೆ ಆತನಿಗೆ ಸಮಸ್ತ ಗುಣಪೂರ್ತಿಯು ಅನಾಯಾಸದಿಂದ ಸಿದ್ಧಿಸುವುದು. ಸಾರ್ವಜ್ಞ್ಯವು ಸ್ವಾತಂತ್ರ್ಯವೂ ಇದ್ದಮೇಲೆ ದೋಷವಿದೂರತ್ವವು ಸ್ವತಃ ಸಿದ್ಧಿಸುವುದು. ಸರ್ವಜ್ಞನಾದ ಕಾರಣ ಹೇಯತ್ವೇನ ತಿಳಿದ ದೋಷಗಳನ್ನು ಬಿಡಲು ಸ್ವಾತಂತ್ರ್ಯವಿದ್ದಮೇಲೆ ಯಾಕೆ ಬಿಡದೇ ಇದ್ದಾನು. ವಿಷ್ಣುವೇ ಜಗತ್ಸೃಷ್ಟಿಕರ್ತನೆಂಬುದಕ್ಕೆ ''ಯತೋ ವಾ ಇಮಾನಿ ಭೂತಾನಿ ಜಾಯಂತೇ'' ಪಾಲನೆಗೆ ''ಯೇನ ಜಾನಾನಿ ಜೀವಂತಿ'' ಸಂಹಾರಕರ್ತನೆಂಬುವುದಕ್ಕೆ '' ಯತ್ಪ್ರಯಂತ್ಯಭಿಸಂವಿಶಂತಿ'' ನಿಯಮನಕ್ಕೆ '' ಯ ಉ ತ್ರಿಧಾತು ಪೃಥಿವೀ'' ಜ್ಞಾನಾಜ್ಞಾನಬಂಧಮೋಕ್ಷಕ್ಕೆ ''ತ್ವಂ ಮುಕ್ತಿದೋ ಬಂಧದೋಽತೋ ಮತೋ ನಃ ತ್ವಂ ಜ್ಞಾನದೋಽಜ್ಞಾನದಶ್ಚಾಸಿ ವಿಷ್ಣೋಃ'' ಇತ್ಯಾದಿ ಶ್ರುತಿಗಳು ಪ್ರಮಾಣ. ವಿಷ್ಣುಸಹಸ್ರನಾಮವು ಒಂದೊಂದು ನಾಮಕ್ಕೆ ನೂರು ಅರ್ಥವನ್ನು ಪ್ರತಿಪಾದಿಸುವುದೆಂದು ಶ್ರೀಮದಾಚಾರ್ಯರು ಸ್ಪಷ್ಟಪಡಿಸಿದ್ದಾರೆ. ಅಂತಹ ಸಹಸ್ರನಾಮದಲ್ಲಿ ''ಮುಕ್ತಾನಾಂ ಪರಮಾಗತಿಃ'' ಎಂದು ಸ್ಪಷ್ಟವಾಗಿ ಮುಕ್ತಪ್ರಾಪ್ಯತ್ವವು ಹೇಳುತ್ತದೆ. ಇನ್ನು ''ಕೃಷ್ಣೋಃ ಮುಕ್ತೈರಿಜ್ಯತೇ ವೀತಮೋಹೈಃ'' ಎಂಬ ವಾಕ್ಯದಿಂದ ಅಜ್ಞಾನಶೂನ್ಯರಾದ ಮುಕ್ತರಿಂದಲೂ ಪೂಜ್ಯನೆಂದು ಪ್ರತಿಪಾದಿತವಾಗಿದೆ.

ಲೋಕದಲ್ಲಿ ಜ್ಞಾನಿಯಾದ ತಂದೆಯು ತತ್ವಬುಭುತ್ಸುವಾದ ಪುತ್ರನಿಗೆ ತತ್ವವನ್ನು ಉಪದೇಶಿಸುವಂತೆ ದೇವಸೇನಾಧಿಪತಿಯಾದ ಸ್ಕಂದನಿಗೆ ಪಿತರಾದ ರುದ್ರದೇವರು ''ಅಹಂ ಭೋಗಪ್ರದೋ ವತ್ಸ ಮೋಕ್ಷದಸ್ತು ಜನಾರ್ದನಃ'' ಎಂದು ಹೇಳಿರುವರು. ಇದರಿಂದಲೂ ಮೋಕ್ಷಪ್ರದತ್ವವು ವಿಷ್ಣುವಿಗೇನೇ ಸಿದ್ಧವಾಗುವುದು. ಇನ್ನು ವಿಷ್ಣುವಿಗೆ ಗುಣಪೂರ್ಣತ್ವದಲ್ಲಿ ''ನತೇ ವಿಷ್ಣೋ ಜಾಯಮಾನೋ ನ ಜಾತಃ'' ಎಂಬ ಶ್ರುತಿಯು ಸ್ಪಷ್ಟವಾಗಿ ಪ್ರಮಾಣವಾಗಿರುವುದು. ''ಇತಿಹಾಸ ಪುರಾಣಾಭ್ಯಾಂ ವೇದಂ ಸಮುಪಬೃಂಹಯೇತ್'' ಎಂದಿರುವ ಕಾರಣ ''ಗುಣೋತ್ಕರ್ಷೇ ದೇವದೇವಸ್ಯ ವಿಷ್ಣೋಃ'' ಎಂಬ ಶ್ರುತ್ಯುಕ್ತವಾದ ಗುಣಪೂರ್ತಿಯನ್ನೂ ಇತಿಹಾಸಗಳು ಸ್ಪಷ್ಟಪಡಿಸುತ್ತವೆ. ಭಾಗವತದಲ್ಲಿ ಋಷಿಗಳ ಸತ್ರಯಾಗ ಪ್ರಕರಣದಲ್ಲಿ ''ತ್ರಿಷ್ವಧೀಶೇಷು ಕೋ ಮಹಾನ್'' ತ್ರಿಮೂರ್ತಿಗಳಾದ ಬ್ರಹ್ಮವಿಷ್ಣುಮಹೇಶ್ವರರಲ್ಲಿ ಯಾರು ಶ್ರೇಷ್ಠರೆಂದು ವಿತರ್ಕಹುಟ್ಟಿ ನಿಶ್ಚಯಾರ್ಥವಾಗಿ ಭೃಗುಋಷಿಗಳನ್ನು ಕಳುಹಿಸಿದಾಗ ಆ ಭೃಗುಋಷಿಗಳು ಬ್ರಹ್ಮರುದ್ರರಲ್ಲಿ ಕಾಮಕ್ರೋಧರೂಪದೋಷಗಳನ್ನು ನೋಡಿ ಶ್ರೀವಿಷ್ಣುವಿನಲ್ಲಿ ದೋಷಗಳನ್ನು ಕಾಣದೇ ''ಭೂಯಾಂಸಂ ಶ್ರದ್ಧಧುರ್ವಿಷ್ಣುಮ್'' ಎಂದು ಮಹಾ ಶಾಂತಿಗುಣ ಉಪಲಕ್ಷಿತಸರ್ವಗುಣಸಂಪನ್ನನೆಂದು ಹೇಳಿ ಸರ್ವೋತ್ತಮತ್ವವನ್ನು ವಿಷ್ಣುವಿಗೆ ವ್ಯವಸ್ಥಾಪಿಸಿದ್ದಾರೆ.

ಇನ್ನು ದಕ್ಷಪ್ರಜಾಪತಿಯ ಯಾಗದಲ್ಲಿ ವಿಷ್ಣುಬಂದಾಗ ಬ್ರಹ್ಮರುದ್ರೇಂದ್ರಾದಿ ದೇವತೆಗಳು ಭಯಚಕಿತರಾಗಿ ಕುಂಠಿತಸರ್ವೇಂದ್ರಿಯ ವ್ಯಾಪಾರಗಳುಳ್ಳವರಾಗಿ ನಮಸ್ಕರಿಸಿ ಪೂಜಿಸಿದರೆಂದು ''ತಮುಪಾಗತಮಾಲಕ್ಷ್ಯ ಸನ್ನಜಿಹ್ವಾಃ ಸಸಾಧ್ವಸಃ'' ಇತ್ಯಾದಿ ಭಾಗವತವಾಕ್ಯದಿಂದೂ ತಿಳಿಯುತ್ತದೆ. ನಮ್ಮಿಂದ ದೊಡ್ಡವರು ಬಂದಾಗತಾನೆ ಸಕಂಪವಾದ ಪ್ರವೃತ್ತಿಯು ಬರುವುದು ಸಹಜವಷ್ಟೆ. ಇನ್ನು ದೇವತೆಗಳಲ್ಲಿ ಶ್ರೇಷ್ಠರಾದ ವರೆಂದರೆ ಲಕ್ಷ್ಮೀ, ಬ್ರಹ್ಮ, ರುದ್ರ, ಇಂದ್ರ ಇವರೇ ಮೊದಲಾದವರು. ಲಕ್ಷ್ಮೀಯಾದರೋ ಬ್ರಹ್ಮನನ್ನೂ, ರುದ್ರನನ್ನೂ, ಮಹಾಜ್ಞಾನಿಯನ್ನೂ ಋಷಿಗಳನ್ನೂ ಸೃಷ್ಟಿಮಾಡುವ ಶಕ್ತಿ ತನಗೆ ಉಂಟೆಂದು ಹೇಳಿ ತನಗೆ ಅವರಿಂದ ಉತ್ತಮತ್ವವನ್ನು ಸಮರ್ಥಿಸಿ ತನ್ನ ಕಾರಣನನ್ನಾಗಿ ಜಲಮಧ್ಯವರ್ತಿಯಾದ ನಾರಾಯಣನನ್ನು ''ಯಂ ಕಾಮಯೇ ತಂತಮುಗ್ರ ಕೃಣೋಮಿ ತಂ ಬ್ರಹ್ಮಾಣಂ ತಮೃಷಿಂ ತಂ ಸುಮೇಧಾಂ- ಮಮಯೋನಿರಪ್ಸ್ವ ಅಂತಃ ಸಮುದ್ರೇ'' ಈ ಶ್ರುತಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾಳೆಂದು ಹೇಳಿದೆ.

ಬ್ರಹ್ಮದೇವರು ''ನಾಹಂ ನ ಚ ಶಿವೋಽನ್ಯೇ ಚ ತಚ್ಛಕ್ತ್ಯೇಕಾಂಶಭಾಗಿನಃ'' ಎಂದು ಸ್ತೋತ್ರಮಾಡಿದ್ದಲ್ಲದೇ ತ್ರಿವಿಕ್ರಮರೂಪದಲ್ಲಿ ಪಾದಾಂಗುಷ್ಠನಖದಿಂದ ಬ್ರಹ್ಮಾಂಡಕಟಾಹ ಒಡೆದು ಹೊರಗಿನ ಜಲವು ಒಳಗೆ ಬಂದಾಗ ಆ ಜಲವನ್ನು ಕಮಂಡಲುವಿನಲ್ಲಿ ಹಿಡಿದು ವಿಷ್ಣುವಿನ ಪಾದಪ್ರಕ್ಷಾಲನೆ ಮಾಡಿ ಪೂಜೆಯನ್ನು ಮಾಡಿದ್ದರಿಂದ ಉತ್ತಮತ್ವವು ಸಿದ್ಧವಾಯಿತು. ಅಲ್ಲದೇ ಬ್ರಹ್ಮದೇವರಿಂದ ಸೃಷ್ಟರಾದ ವೇದಾಭಿಮಾನಿ ದೇವತೆಗಳನ್ನು ಮಧುನಾಮಕ ದೈತ್ಯನು ತೆಗೆದುಕೊಂಡು ಹೋಗಲು ಅವರಿಂದ ಸ್ತುತನಾಗಿ ವಿಷ್ಣುವಷ್ಟೆ ವೇದಾಭಿಮಾನಿ ದೇವತೆಗಳನ್ನು ತಂದುಕೊಟ್ಟದ್ದು. ಇನ್ನು ರುದ್ರ ವಿಷ್ಣುವಿನ ಪಾದೋದಕವಾದ ಗಂಗೆಯನ್ನು ಶಿರಸ್ಸಿನಲ್ಲಿ ಧರಿಸಿಕೊಂಡಿದ್ದರಿಂದ, ಹಾಗೆಯೇ ವೃಕಾಸುರನು(ಭಸ್ಮಾಸುರನು) ರುದ್ರದೇವರನ್ನು ಓಡಿಸಿಕೊಂಡು ಬಂದಾಗ ಅಗತಿಕರಾದ ರುದ್ರದೇವರನ್ನು ಬ್ರಹ್ಮಚಾರಿರೂಪದಿಂದ ವಿಷ್ಣುಬಂದು ವೃಕಾಸುರನನ್ನು ಸಾಯುವಂತೆ ಮಾಡಿ ರಕ್ಷಿಸಿದ್ದರಿಂದ, ಇನ್ನು ರಾಮಾವತಾರದಲ್ಲಿ ರಾವಣನನ್ನು ರಾಮದೇವರು ಕೊಂದಾಗ ರುದ್ರದೇವರು ಅಜ್ಞಾನದಿಂದ ಯುದ್ಧಕ್ಕೆ ಬಂದಾಗ ಸ್ತಬ್ಧರಾಗಿ ಸ್ತೋತ್ರಮಾಡಿದ್ದರಿಂದಲೂ ರುದ್ರನಿಂದ ಉತ್ತಮತ್ವವು ಸಿದ್ಧಿಸುವುದಿಲ್ಲವೋ. ''ಮಾಯಾಂ ತವೇಶ ಭಗವನ್ನವಿದಾಮ ಭೂಮನ್ ಭಕ್ತಿರ್ಮಮಾಸ್ತು ತವ ಪಾದಸರೋಜಮೂಲೇ'' ಈ ರುದ್ರಸ್ತುತಿಯಿಂದ ರುದ್ರಾದುತ್ತಮತ್ವವು ಸಿದ್ಧವಾಯಿತು.

ಇನ್ನು ಇಂದ್ರ ಬಲಿಯಿಂದ ತನ್ನ ಸ್ವರ್ಗವು ಅಪಹೃತವಾದಾಗ ವಿಷ್ಣುವನ್ನು ಪ್ರಾರ್ಥಿಸಿ ಕಾಶ್ಯಪರಪುತ್ರ ವಾಮನನಾಗಿ ಅವತರಿಸಿ ವಿಷ್ಣುವೇ ಬಲಿಯಿಂದ ರಾಜ್ಯವನ್ನು ಕಿತ್ತುಕೊಂಡು ಇಂದ್ರನಿಗೆ ಕೊಟ್ಟು, ಇಂದ್ರನಿಂದ ಸ್ತುತನಾಗಿ, ಇಂದ್ರನಿಂದ ಕೂಡಿಕೊಂಡು ಸ್ವರ್ಗಕ್ಕೆ ತೆರಳಿದ್ದು ಸುಪ್ರಸಿದ್ಧ.

ಇನ್ನು ಕೃಷ್ಣಾವತಾರದಲ್ಲಿ ಶ್ರೀಕೃಷ್ಣನು ಸ್ವರ್ಗದಿಂದ ಪಾರಿಜಾತವೃಕ್ಷವನ್ನು ಅಪಹರಿಸಲು ರುದ್ರಾದಿದಿಕ್ಪಾಲಕರಾದ ಸಹಿತನಾದ ಇಂದ್ರನು ಯುದ್ಧಮಾಡಿ ಪರಾಜಿತನಾಗಿ ಶ್ರೀಕೃಷ್ಣನನ್ನು ನಮಸ್ಕರಿಸಿ '**ನಮಸ್ತೇ ದೇವ ದೇವೇಶ...... ನ ಪರಿತ್ಯಕ್ತುಂ ತ್ವಮರ್ಹಸಿ**'' ಈ ವಾಕ್ಯದಿಂದ ಪ್ರಾರ್ಥಿಸಿದ್ದರಿಂದಲೂ ಇಂದ್ರಾದ್ಯುತ್ತಮತ್ವವು ಸಿದ್ಧಿಸುವುದು.

ಇನ್ನು ಶ್ರೀರಾಮನು ಕಾಕಾಸುರನಿಗೆ ಹುಲ್ಲುಕಡ್ಡಿಯನ್ನು ಪ್ರಯೋಗಿಸಿದಾಗ ಅದು ಬ್ರಹ್ಮಾಸ್ತ್ರರೂಪವಾಗಿ ದಗ್ಧನಾದ ಕಾಕಾಸುರನು

ಇಂದ್ರ, ರುದ್ರ, ಬ್ರಹ್ಮಾದಿಗಳನ್ನು ಮೊರೆಹೊಕ್ಕಲು 'ನಾವು ಅಶಕ್ತರು ಶ್ರೀರಾಮನನ್ನೇ ಮೊರೆಹೋಗೆಂದು ಹೇಳಿದಾಗ ಶ್ರೀರಾಮನನ್ನೇ ಮೊರೆಹೋಗಿ ಜೀವಿತನಾದುದರಿಂದ ಬ್ರಹ್ಮಾದ್ಯುತ್ತಮತ್ವವು ಶ್ರೀವಿಷ್ಣುವಿನ ಅವತಾರನಾದ ರಾಮನಿಗೆ ಸಿದ್ಧಿಸುವುದಿಲ್ಲವೇ? ಲೋಕದಲ್ಲಿ ಪಿತನಾಗಲೀ ಸಂಹಾರಕನಾಗಲೀ ಪ್ರಭುವೆಂದು ಅನಿಸಿಕೊಳ್ಳುವುದಿಲ್ಲ. ಮತ್ತೆ ರಕ್ಷಕನಿಗೇನೇ ಪ್ರಭು ವ್ಯವಹಾರ. ಅಂತಹ ಜಗತ್ಪ್ರಭುತ್ವವು ವಿಷ್ಣ್ವೇಕ ನಿಷ್ಠವೆಂದು ಸಹಸ್ರನಾಮವು ಉದ್ಘೋಷಿಸುವುದು. ''ಭೂತಭವ್ಯಭವತ್ಪ್ರಭುಃ । ಯೋಗೀಶಃ ಸರ್ವಕಾಮದಃ'' ಎಂದು.

ಇನ್ನು ಎಲ್ಲಿಯಾದರೂ ಮಹಾಸಭೆಯಲ್ಲಿ ಹಿಂದಿನಕಾಲದಲ್ಲಿ ಗುಣತಃ ಉತ್ತಮನಿಗೆ ಅಗ್ರ್ಯಪೂಜೆಯು ಪ್ರಮಿತ. ಸುಪ್ರಸಿದ್ಧರಾದ ಪಾಂಡವರ ರಾಜಸೂಯಯಾಗದಲ್ಲಿ ಹದಿನಾಲ್ಕು ಲೋಕದ ಮುಖ್ಯಜನರು ಸೇರಿದ ಸಭೆಯಲ್ಲಿ ವಸ್ವಂಶಸಂಭೂತರಾದ ಬ್ರಹ್ಮದೇವರ ಆವೇಶದಿಂದ ಕೂಡಿದ ಭೀಷ್ಮರ ಹೇಳಿಕೆಯಂತೆ ಶ್ರೀವಿಷ್ಣ್ವವತಾರಭೂತನಾದ ಶ್ರೀಕೃಷ್ಣನಿಗೆ ತಾನೆ ಅಗ್ರ್ಯಪೂಜೆಯು ನಡೆದದ್ದು. ಅದೂ, ವಿಷ್ಣುವಿಗೇ ಸರ್ವೋತ್ತಮತ್ವ ಸಾಧಕವಲ್ಲವೇ! ಹಾಗೆಯೇ ದೇವಾಂಶಸಂಭೂತರಾದ ಧರ್ಮಾದಿಗಳೆಲ್ಲರೂ ಶ್ರಿಕೃಷ್ಣನ ಭೃತ್ಯರು. ಅದು ವಿಷ್ಣುವಿನ ಸರ್ವೋತ್ತಮತ್ವ ಸೂಚಕವಲ್ಲವೇ.

ಇನ್ನು ರುದ್ರದೇವರೇ ವಾಸುದೇವಸಹಸ್ರನಾಮದಲ್ಲಿ ''ಬ್ರಹ್ಮರುದ್ರಾದ್ಯುತ್ಕೃಷ್ಟಚೇತನಃ'' ಎಂದು ಸ್ತುತಿಸಿರುವರು. ಅಲ್ಲದೇ ''ಅಸ್ಯ ದೇವಸ್ಯ ಮೀಳ್ಹುಷೋ'' ಇತ್ಯಾದಿ ವೇದದಲ್ಲಿ ವಿಷ್ಣುವಿನ ಅಧೀನನಾಗಿ ರುದ್ರನ ಸ್ಥಿತಿಯು ಹೇಳಿದೆ. ಹಾಗೆ ಎಲ್ಲಿಯಾದರೂ ಮೂಲರೂಪದಲ್ಲಿ ವಿಷ್ಣುವಿನ ಸ್ಥಿತಿಯು ರುದ್ರಾದ್ಯಧೀನವಾಗಿ ಹೇಳಿದ್ದುಂಟೇ. ಕೃಷ್ಣನು ಪುತ್ರಾರ್ಥಿಯಾಗಿ ಕೈಲಾಸಕ್ಕೆ ಹೋಗಿ ತಪಸ್ಸುಮಾಡಿದ ಎಂದು ರುದ್ರನ ಉತ್ತಮವತ್ವವನ್ನು ಶಂಕಿಸಬಹುದು. ''ಪ್ರಾಪ್ತೇ ನರೇಷು ಜನನೇ ನರವತ್ಪ್ರವೃತ್ತಿಃ'' ಎಂದಿರುವ ಕಾರಣ ಅಯೋಗ್ಯಜನರಿಗೆ ಮೋಹನಕ್ಕಾಗಿಯೇ ಹಾಗೆ ಮಾಡಿದ್ದಂತ ಪುತ್ರಾರ್ಥಿಯಾಗಿ ಕೈಲಾಸಕ್ಕೆ ಹೋದದ್ದಂತ ಶ್ರೀ ಆಚಾರ್ಯರು ತಮ್ಮ ಗ್ರಂಥಗಳಲ್ಲಿ ಸಪ್ರಮಾಣವಾಗಿ ಸಮರ್ಥಿಸಿದ್ದಾರೆ. ಶ್ರೀರಾಮನು ರಾವಣವಧಜನ್ಯ ಬ್ರಹ್ಮಹತ್ಯಾದೋಷನಿವೃತ್ತಿಗಾಗಿ ರುದ್ರಲಿಂಗವನ್ನು ಪ್ರತಿಷ್ಠಿಸಿ ಪೂಜಿಸಿದುದರಿಂದ ರುದ್ರನಿಗೆ ಉತ್ತಮತ್ವವನ್ನು ಶಂಕಿಸಬಹುದು. ಅದು ಅತಿ ಹಾಸ್ಯಾಸ್ಪದ. 'ಸೇತುಂ ದೃಷ್ಟ್ವಾ ಸಮುದ್ರಸ್ಯ ಬ್ರಹ್ಮಹತ್ಯಾಂ ವ್ಯಪೋಹತಿ' ಎಂದು ಪ್ರಮಾಣವಿರುವುದರಿಂದ ಯಾವ ರಾಮದೇವರಿಂದ ರಚಿತವಾದ ಸೇತುವಿನ ದರ್ಶನಮಾತ್ರದಿಂದ ಬ್ರಹ್ಮಹತ್ಯಾನಿರಸನವಾಗುತ್ತದೋ, ಅಂತಹ ಸಮರ್ಥರಾಮದೇವರಿಗೆ ವಿಶ್ರವಸಋಷಿಯ ಅವಹೇಳನರೂಪನಾದ ರಾವಣನ ಹತ್ಯೆಯಿಂದ ಬ್ರಹ್ಮಹತ್ಯಾದೋಷಶಂಕೆಯೂ ರುದ್ರಪ್ರತಿಷ್ಠೆಯಿಂದ ಅದರ ಪರಿಹಾರವೂ ಹಾಸ್ಯಾಸ್ಪದವಲ್ಲದೇ ಮತ್ತೇನು? ಪ್ರಳಯಕಾಲದಲ್ಲಿ ಸಾಕ್ಷಾತ್ ಬ್ರಹ್ಮನನ್ನೇ ಸಂಹಾರಮಾಡಿದರೂ ಬ್ರಹ್ಮಹತ್ಯಾದೋಷವು ಇಲ್ಲದಿರುವ ದೇವರಿಗೆ ಬ್ರಾಹ್ಮಣಾಭಾಸರಾವಣನ ಸಂಹಾರವು ಬ್ರಹ್ಮಹತ್ಯಾದೋಷಾಧಾಯಕವೋ? ಹಾಗೆಯೇ ಬ್ರಹ್ಮಹತ್ಯಾ ಮಾಡದಿದ್ದರೂ ಬ್ರಹ್ಮದೇವರ ಅಂಗಭೂತವಾದ ಒಂದು ಶಿರಚ್ಛೇದಮಾತ್ರದಿಂದ ತಾನು ದೋಷಿಯಾಗಿ ಕಪಾಲಿ ಎಂದು ಜಗತ್ಪ್ರಸಿದ್ಧನಾದ ರುದ್ರನು ಇನ್ನೊಬ್ಬರ ಬ್ರಹ್ಮಹತ್ಯಾದೋಷಪರಿಹಾರಕನೋ? ''ಸ್ವಯಮನವತೀರ್ಣಃ ಕಃ ಪರಾನ್ ತಾರಯೇತ್' ಎಂದು ಲೋಕನೀತಿಯಷ್ಟೆ. ಯಾವ ರುದ್ರನು ತನ್ನ ಬ್ರಹ್ಮಹತ್ಯಾದೋಷಪರಿಹಾರಕ್ಕಾಗಿ ರಾಮಮಂತ್ರವನ್ನು ಜಪಿಸಿಕೊಂಡಿದ್ದಾನೋ ಅಂತಹ ರಾಮನು ತನ್ನ ಬ್ರಹ್ಮಹತ್ಯಾನಿವೃತ್ತಿಗೆ ರುದ್ರನನ್ನು ಪೂಜಿಸುತ್ತಾನೆಂದು ಯಾವ ವಿಚಾರವಂತನು ಹೇಳಿಯಾನು. ಮಾತ್ರವಲ್ಲ ಅಜ್ಞರು ಹೇಳುವುದು ಸತ್ಯವಾದರೆ, ಪದ್ಮಪುರಾಣದಲ್ಲಿ ''ನಾನು ಸರ್ವದಾ ರಾಮಮಂತ್ರವನ್ನು ಜಪಿಸಿಕೊಂಡು ಇದ್ದೇನೆ. ನೀನೂ ಆ ರಾಮ- ಮಂತ್ರವನ್ನೇ ಜಪಿಸು' ಎಂದು ಅತಿಪ್ರಿಯಳಾದ ಪಾರ್ವತಿಗೆ ಉಪದೇಶಿಸಿದ್ದು ಹ್ಯಾಗೆ ಕೂಡುತ್ತದೆ.

ಇನ್ನು ಶ್ರೀಕೃಷ್ಣನು ಗೀತೆಯಲ್ಲಿ ಸ್ಪಷ್ಟವಾಗಿ ''ಮತ್ತಃ ಪರತರಂ ನಾನ್ಯತ್ ಕಿಂಚಿದಸ್ತಿ ಧನಂಜಯ। ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ। ಯೋ ಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಂ।'' ಇತ್ಯಾದಿ ಪ್ರಮಾಣಗಳಿಂದ ವಿಷ್ಣುವಿಗೆ ಸರ್ವೋತ್ತಮವು ಸಿದ್ಧವಾಗುತ್ತದೆ. ಇನ್ನು ಪ್ರಳಯಜಲದಲ್ಲಿ ಸೃಷ್ಟಿಯ ಪೂರ್ವದಲ್ಲಿ ವಟಪತ್ರದಲ್ಲಿ ನಾರಾಯಣನು ಮಲಗಿಕೊಂಡು ಇದ್ದದ್ದು, ಆವಾಗ ಇತರರು ಇರಲಿಲ್ಲವೆಂಬುದು 'ನ ಬ್ರಹ್ಮಾ ನ ಚ ಶಂಕರಃ' ಇತ್ಯಾದಿ ವಾಕ್ಯಗಳಿಂದ ಪ್ರಸಿದ್ಧ. ಇನ್ನೊಬ್ಬ ಸರ್ವಗುಣಪರಿಪೂರ್ಣನಿದ್ದರೆ ನಾರಾಯಣನನ್ನು ವೇದವು ಹೇಳಿದಂತೆ ಆತನನ್ನು (ಇನ್ನೊಬ್ಬನನ್ನು) ಯಾಕೆ ಹೇಳಲಿಲ್ಲ.

''ಸರ್ವೋತ್ಕರ್ಷೇ ದೇವದೇವಸ್ಯ ವಿಷ್ಣೋಃ ಮಹಾತಾತ್ಪರ್ಯಂ ನೈವ ಚಾನ್ಯತ್ರ ಸತ್ಯಂ'' ಇತ್ಯಾದಿ ವಾಕ್ಯಗಳಿಂದ ಶ್ರೀವಿಷ್ಣುವು ಒಬ್ಬನಿಗೇನೇ ನಿರುಪಚರಿತವಾದ ಸರ್ವೋತ್ತಮತ್ವವು ಸಿದ್ಧಿಸುವುದು.

<u>ಸ್ಥಿರಚರಾತ್ಮಕವಾದ ಜಗತ್ತು ಸತ್ಯವು.</u>

ಲೋಕದಲ್ಲಿ ಮಿಥ್ಯಾಭೂತವಾದ ವಸ್ತುವು ಯಾವದೊಂದು ಕಾರ್ಯಕಾರಿಯಾಗುವುದಿಲ್ಲ. ಸಿಂಪಿನಲ್ಲಿ(ಕಪ್ಪೆಚಿಪ್ಪಲ್ಲಿ) ಆರೋಪಿತ ರಜತವು ಕಟಕಮುಕುಟಾದಿಕರ್ಯಾವನ್ನು ಮಾಡಲಿಕ್ಕೆ ಬರುವುದಿಲ್ಲ. ಜಗತ್ತಾದರೂ ತದುಚಿತಕಾರ್ಯಕಾರಿಯಾಗಿ ಅನಾದಿಕಾಲದಿಂದ ಸರ್ವಾನುಭವಸಿದ್ಧವಾಗಿದೆ. ಸೃಷ್ಟಿಕಾಲವನ್ನು ಆರಂಭಿಸಿಕೊಂಡು ಈ ಭೂಮಿಯ ಉದ್ದಿಶ್ಯವಾಗಿ ರಾಜರುಗಳು ಯುದ್ಧಮಾಡಿಕೊಂಡು ಒಬ್ಬ ಜಯಿಸಿ ಭೂಪತಿಯಾಗುವುದೂ ಮತ್ತೊಬ್ಬ ಸ್ವರ್ಗವಾಸಿಯಾಗುವುದೂ ಇತಿಹಾಸ ಪುರಾಣದಲ್ಲಿಯೂ ನಮ್ಮ ಅನುಭವದಲ್ಲಿಯೂ ಇರುವುದಷ್ಟೆ.

ಸೃಷ್ಟಿಯನ್ನಾರಂಭಿಸಿ ಇಂದಿನವರೆಗೂ ಅಬಾಧಿತವಾದ ಜಗತ್ತಿಗೆ ನಿಷ್ಕಾರಣವಾಗಿ ಮುಂದೆ ಎಂದೋ ಒಂದು ಕಾಲಕ್ಕೆ ಬಾಧಕವುಂಟು. ಮಿಥ್ಯಾ ಎಂದು ಹೇಳುವುದು ಈಗ ಗೋವಿಗೆ ಶೃಂಗವಿದ್ದು ಅದು ಘಾತಕವಾಗುವಂತೆ ಮುಂದೆ ಅಶ್ವಕ್ಕೂ ಶೃಂಗವುಂಟಾಗುತ್ತದೆ, ಅದೂ ಘಾತಕವಾಗುತ್ತದೆ ಎಂಬ ಮಾತಿನಂತೆಯೇ ಸರಿ.

ಲೋಕದಲ್ಲಿ ಯಾರಾದರೂ ದೊಡ್ಡವರು ಇಂದ್ರಜಾಲಿಕವಾಗಿ ಪದಾರ್ಥವನ್ನು ತೋರಿಸುವವನಿಗೆ ಮಹಿಮಾಸ್ಪದವಾಗಿ ಹೊಗಳುವವರುಂಟೇ? ಈ ಜಗತ್ತನ್ನು ಸೃಷ್ಟಿಮಾಡಿದ ಶ್ರೀನಾರಾಯಣನನ್ನು ಪ್ರಮಾಣಗಳಲ್ಲಿ ಅತ್ಯುತ್ತಮ- ವೆಂದು ಪ್ರಸಿದ್ಧವಾದ ವೇದವು ''ಸತ್ಯಸ್ಸೋ ಅಸ್ಯ ಮಹಿಮಾ ಗೃಣೇ ಶವೋ ಯಜ್ಞೇಷು ವಿಪ್ರರಾಜ್ಯೇ'' ಎಂದು ಮಹಾಮಹಿಮೆಯನ್ನು ಕೊಂಡಾಡುತ್ತದೆ. ಅರ್ಥ-(ಜಗತ್ಸರ್ಜನ ರೂಪವಾದ ಪರಮಾತ್ಮನ ಮಹಿಮೆಯನ್ನು ಬ್ರಾಹ್ಮಣರಿಗೆ ರಾಜ್ಯಸ್ಥಾನವಾದ ಯಜ್ಞದಲ್ಲಿ ಸುಖದ ಉದ್ದಿಶ್ಯ ಸ್ತುತಿಸುವೆವು)

''ವಿಶ್ವಂ ಸತ್ಯಂ ಮಘವಾನಾ ಯುವೋರಿದಾಪಶ್ಚನ ಪ್ರಮಿನಂತಿ ವ್ರತಂ ವಾಂ'' ಭಗವದ್ರೂಪವಾದ ಇಂದ್ರ ಬೃಹಸ್ಪತಿನಾಮಕರೇ, ನಿಮ್ಮ ಜಗತ್ಸರ್ಜನರೂಪವಾದ ವ್ರತವನ್ನು ಅಬಭಿಮಾನಿದೇವತೆಗಳು ಸಹ ಸತ್ಯವಾಗಿ ತಿಳಿದಿದ್ದಾರೆ. ಹೀಗೆ ಸ್ವಾಭಾವಿಕವಾದ ಅಪರೋಕ್ಷ ಜ್ಞಾನದಿಂದ ಕೂಡಿದ ತತ್ವಾಭಿಮಾನಿದೇವತೆಗಳಿಂದ ಸ್ತುತಿಸಲ್ಪಟ್ಟ ಜಗತ್ಸರ್ಜನರೂಪವಾದ ವ್ರತವು ಜಗತ್ತು ಸುಳ್ಳಾದರೆ ಹೇಗೆ ತಾನೆ ಕೂಡೀತು. ಇನ್ನು ಆದಿಹಿರಣ್ಯಾಕ್ಷದೈತ್ಯನು ಚಾಪೆಯಂತೆ ಭೂಮಿಯನ್ನು ಮಡಿಚಿಕೊಂಡು ಹೋದನೆಂದು ಆ ಉದ್ದಿಶ್ಯವಾಗಿ ವಿಷ್ಣುವು ವರಾಹ ರೂಪಿಯಾಗಿ ಬಂದು ಆತನನ್ನು ಕೊಂದು ಭೂಮಿಯನ್ನು ತಂದು ಯಥಾಪ್ರಕಾರವಾಗಿ ನಿಲ್ಲಿಸಿದನೆಂದೂ ಸರ್ವಪ್ರಮಿತವಾದ ಪ್ರಮೇಯ. ಭೂಮಿಯು ಮಿಥ್ಯಾಭೂತವಾದರೆ, ಆ ಹಿರಣ್ಯಾಕ್ಷ ಯಾಕೆ ತಾನೆ ತೆಗೆದುಕೊಂಡು ಹೋಗುತ್ತಾನೆ. ವಿಷ್ಣುವಾದರೂ ಬಂದು ಹ್ಯಾಗೆ ತಾನೆ ತಂದಾನು. ಇನ್ನು 'ಅಂಡಸೃಷ್ಟಾವಪಾಂಡಿತ್ಯಾತ್ ಶಾರ್ಙ್ಗಿಣಾಂ ಶರಣಂ ಯಯುಃ''. ಸಮಸ್ತತತ್ವಾಭಿಮಾನಿಗಳಾದ ಬ್ರಹ್ಮಾದಿದೇವತೆಗಳು ಬ್ರಹ್ಮಾಂಡಾದಿ ಜಗತ್ತಿನ ಸೃಷ್ಟಿಯಲ್ಲಿ ಅಸಮರ್ಥರಾಗಿ ಶ್ರೀನಾರಾಯಣನನ್ನು ಮೊರೆಹೊಂದಿದರೆಂದೂ, ಆತನು ಜಗತ್ತನ್ನು ಸೃಷ್ಟಿಮಾಡಿದ- ನೆಂದೂ ತೋರುತ್ತದೆ. ಜಗತ್ತು ಸುಳ್ಳಾಗಿದ್ದರೆ ಪ್ರಲಯ, ಪುನಃ ಸೃಷ್ಟಿ ಹ್ಯಾಗೆ ಕೂಡುತ್ತದೆ. ಮಿಥ್ಯಾಭೂತವಾದ ಶಶವಿಷಾಣಕ್ಕೆ ಕರ್ತನಾಗಲೀ ಸಂಹರ್ತನಾಗಲೀ ಉಂಟೇ. ಇನ್ನು ಜಗತ್ತು ಮಿಥ್ಯಾಭೂತವಾಗಿದ್ದರೆ- ''ಅಸತ್ಯಮಪ್ರತಿಷ್ಠಂ ತೇ ಜಗದಾಹುರನೀಶ್ವರಂ....... ಕ್ಷಯಾಯ ಜಗತೋಽಹಿತಾಃ'' ಎಂದು ಜಗತ್ತಿಗೆ ಮಿಥ್ಯಾವಾದಿಗಳನ್ನು ದೂಷಿಸಿದ್ದು ಹ್ಯಾಗೆ ಕೂಡುತ್ತದೆ. ಅಸತ್ಯವಾದ ವಸ್ತುವನ್ನು ಅಸತ್ಯವೆಂದು ಹೇಳಿದರೆ ಏನು ತಪ್ಪು. ಇನ್ನು ಲೋಕದಲ್ಲಿ ಯಾರಾದರೂ ಒಂದು ವಿಷಯವನ್ನು ಹೀಗೆಂದು ಹೇಳಿದರೆ ನೀನು ಕೇಳಿಹೇಳಿದೆಯೋ, ನೋಡಿ ಹೇಳಿದೆಯೋ ಎಂದು ಪ್ರಶ್ನೆಮಾಡಿ ನೋಡಿ ಹೇಳಿದ್ದೆಂದರೆ ಸತ್ಯವಾಗಿ ನಂಬುವುದುಂಟು. ಜಗತ್ತಾದರೂ ಸರ್ವರ ಚಾಕ್ಷುಷಪ್ರತ್ಯಕ್ಷಸಿದ್ಧವಾಗಿದೆ. ಅಂತಹ ಜಗತ್ತನ್ನು ಸತ್ಯವಲ್ಲವೆಂದು ಹೇಳುವುದು ಅತಿಸಾಹಸದ ಕೆಲಸವಲ್ಲವೇ. ಇಂತಹ ಸತ್ಯವಾದ ಜಗತ್ತನ್ನು ಅಸತ್ಯವೆಂದು ಹೇಳಬೇಕಾದರೆ ಕೇವಲ ದುಃಸ್ವಭಾವವೇ ಕಾರಣ. ತತ್ವೇಚ್ಛುಗಳು ಜಗತ್ತನ್ನು ಸತ್ಯವಾಗಿಯೂ ನಾರಾಯಣನನ್ನು ಸತ್ಯವಾದ ಜಗತ್ಸೃಷ್ಟಿಕರ್ತ ನಾದ ಮಹಾಮಹಿಮನೆಂದೂ ತಿಳಿದು ಪುರುಷಾರ್ಥಭಾಗಿಗಳಾಗಬೇಕು.

## <u>ಭೇದವು ಸತ್ಯವು.</u>

''ಜೀವೇಶಯೋರ್ಜಡಾನಾಂ ಚ ಜೀವಾನಾಂ ಚ ಪರಸ್ಪರಮ್ । ಪಂಚಭೇದಾ ಇಮೇ ನಿತ್ಯಾಃ ಸರ್ವಾವಸ್ಥಾಸು ಸರ್ವದಾ'' ಎಂದು ಪಂಚಭೇದಗಳು ನಿತ್ಯಾವಾದ್ದೆಂದು ''ಪಂಚಭೇದಾಂಶ್ಚ ವಿಜ್ಞಾಯ ........... ಭವೇನ್ಮುಕ್ತಿರ್ನಚಾನ್ಯಥಾ'' ಎಂದು ಆ ಪಂಚಭೇದಗಳ ಜ್ಞಾನವು ಮೋಕ್ಷಸಾಧಕವಾಗಿ ಹೇಳಿದೆ. ಮೋಕ್ಷಸಾಧಕವಾಗಿ ಉಕ್ತವಾದ ಕಾರಣ ಎಷ್ಟಕ್ಕೂ ಆ ಭೇದವು

ಮಿಥ್ಯಾಭೂತವಾಗಲು ಶಕ್ಯವಿಲ್ಲ. ಏಕೆಂದರೆ, ಮಹತ್ತರಗಳಾದ ಕೃಚ್ಛ್ರಚಾಂದ್ರಾಯಣಾದಿ ಕರ್ಮಗಳಿಂದ ಲಭ್ಯವಾಗದ ಮೋಕ್ಷವು ಈ ಮಿಥ್ಯಾಭೂತವಾದ ತುಚ್ಛವಾದ ಭೇದದ ಜ್ಞಾನದಿಂದಾಗಲು ಶಕ್ಯವಿಲ್ಲ. ಪಂಚಭೇದಗಳೆಂದರೆ ಈಶನಿಗೂ ಜೀವನಿಗೂ, ಈಶನಿಗೂ ಜಡಕ್ಕೂ, ಜಡಕ್ಕೂ ಜೀವನಿಗೂ, ಜಡಗಳಿಗೆ ಪರಸ್ಪರ, ಜೀವರಿಗೆ ಪರಸ್ಪರ ಹೀಗೆ ಐದು ವರ್ಗಾತ್ಮಕವಾದುದು. ಜೀವನೂ ಈಶನೂ ಇಬ್ಬರೂ ಚೇತನರು. ಯಾಕೆ ಅವರಲ್ಲಿ ಭೇದ ಒಪ್ಪಬೇಕು ಎಂದರೆ, ಲೋಕದಲ್ಲಿ ವಿರುದ್ಧವಾದ ಸ್ವಭಾವವುಳ್ಳ ವಸ್ತುಗಳಿಗೆ ಭೇದವು ಸರ್ವಸಮ್ಮತ. ದಹನತುಹಿನಗಳಂತೆ ಜೀವೇಶರು ವಿರುದ್ಧಸ್ವಭಾವದವರು. ಹೇಗೆ ಒಂದೇ ಮರವನ್ನು ಹೊಂದಿಕೊಂಡಿರುವ ನಿರ್ವಿಷ, ವತ್ಸನಾಭಿ ರೂಪ ಔಷಧಿಗಳು ವತ್ಸನಾಭಿ ಮೃತಿದಾಯಕ, ನಿರ್ವಿಷವು ಆರೋಗ್ಯದಾಯಕ, ಪರಸ್ಪರ ವಿರುದ್ಧಸ್ವಭಾವಗಳಿಂದ ಭಿನ್ನಗಳೋ; ಹಾಗೆಯೇ ಜೀವೇಶರು ಒಂದೇ ದೇಹವನ್ನು ಹೊಂದಿಕೊಂಡು ಇದ್ದು ಜೀವನು ಕರ್ಮಫಲವನ್ನು ಅನುಭವಿಸಿಕೊಂಡು ವೃದ್ಧಿಯನ್ನು ಹೊಂದದೇ, ಈಶನು ಕರ್ಮಫಲವನ್ನು ಅನುಭವಿಸದೇ ಪ್ರಕಾಶಮಾನನಾಗಿ ಇರುವನೆಂದು ಅವರಿಬ್ಬರೂ ಭಿನ್ನರೆಂದು ''**ದ್ವಾಸುಪರ್ಣಾಸಯುಜಾ ಸಖಾಯಾ**'' ಎಂಬ ಶ್ರುತಿಯು ಘಂಟಾಘೋಷವಾಗಿ ಹೇಳುತ್ತದೆ. ಇನ್ನು ನಾವೇ ವಿಚಾರಮಾಡಿದರೆ ಈಶನಿಗೂ ಜೀವರಾದ ನಮಗೂ ವಿರುದ್ಧಧರ್ಮಗಳು ಸ್ಪಷ್ಟವಾಗಿ ಕಾಣುತ್ತವೆ. ಅವು ಯಾವುವು ಎಂದರೆ ಈಶನು ಸ್ವತಂತ್ರನು. ಆದಕಾರಣ ಎಲ್ಲಿಯೂ ವಿಷ್ಣುವಿಗೆ ದುಃಖಚ್ಛೇದಭೇದಾದಿಗಳು ಜನಿ, ಮರಣಾದಿಗಳು ಅಜ್ಞಾನಾದಿಗಳೂ ಕಂಡಿಲ್ಲ. ಈ ವಿಷಯದಲ್ಲಿ ''ನಿರನಿಷ್ಟೋ ನಿರವದ್ಯಃ' ಎಂಬ ಶ್ರುತಿಯು ಪ್ರಮಾಣ. ಜೀವರಾದ ನಾವು ಅಸ್ವತಂತ್ರರು. ಯಾರಾದರೊಬ್ಬ ನಮಗೆ ಅಸ್ವಾತಂತ್ರ್ಯ ಯಾಕೆ ಒಪ್ಪಬೇಕು ಎಂದು ಕೇಳಬಹುದು. ನೋಡಿರಿ. ಜೀವರಲ್ಲಿ ಕುಂಟರೂ, ಕುರುಡರೂ, ಕಿವುಡರೂ ಹೀಗೆ ಯಾವುದಾದರೊಂದು ದುಃಖವಿಲ್ಲದೇ ಇಲ್ಲ. ತನಗೆ ಸ್ವಾತಂತ್ರ್ಯವಿದ್ದರೆ ಆ ದುಃಖವನ್ನು ಯಾಕೆ ಪರಿಹರಿಸಿ ಕೊಳ್ಳಲಿಕ್ಕಿಲ್ಲ? ಈಶನು ನಿತ್ಯಮುಕ್ತನು ಜೀವನಾದರೋ ನಿತ್ಯಬದ್ಧನು. ಜೀವನು ಅಲ್ಪಜ್ಞನು ಈಶನು ಸರ್ವಜ್ಞನು. ಯಾವತರಹದ ಭಯವೂ ಇಲ್ಲದವನು. ಜೀವನು ಭಯಕಂಪಿತನು. ಈಶನು ಮಹಾಲಕ್ಷ್ಮೀಪತಿಯು ಜೀವನಾದರೋ ದರಿದ್ರನು. ಈಶನು ಸಮಸ್ತಜಗದ್ಧಾರಕನು ಜೀವನಾದರೋ ಅವನಿಂದ ಧಾರ್ಯನು. ಈಶನಾದರೋ ಮಹಾಶೇಷಶಾಯಿಯು ಜೀವನು ಮುದಿಹಾವನ್ನು ನೋಡಿಯೇ ಓಡುವವನು. ಈಶನಾದರೋ ಗರುಡಾರೂಢನು ಜೀವನು ಗಾರುಡಜೀವನ ಮೋಸದಿಂದ ಜೀವಿಸುವನು. ಈಶನಿಗೆ ದಿಕ್ಪಾಲಕರು ಪೂಜಕರು ಜೀವನು ಫಲಾಪೇಕ್ಷೆಯಿಂದ ದಿಕ್ಪಾಲಕರನ್ನು ಪೂಜಿಸುವನು. ಈಶನಾದರೂ ಯಾಗವನ್ನು ಭುಂಜಿಸುವವನು ಜೀವನು ಫಲಾಪೇಕ್ಷೆಯಿಂದ ಯಾಗವನ್ನು ಮಾಡುವವನು. ಈಶನು ದೇವತೆಗಳೂ ಋಷಿಮೊದಲಾದವರನ್ನು ರಕ್ಷಿಸುವನು. ಜೀವನು ದೇವಾದಿಗಳ ಸೇವಕನು. ಈಶ್ವರನು ಅಪ್ರಾಕೃತವಾದ ಅವ್ಯಯವಾದ ಶರೀರವುಳ್ಳವನು ನಾವಾದರೂ ಮರಣಶೀಲವಾದ ಸರ್ವದಾ ದುರ್ಗಂಧಾದಿಗಳಿಂದ ಕೂಡಿದ ಪ್ರಾಕೃತ ಶರೀರವುಳ್ಳವರು. ಈಶನಾದರೂ ಗಂಗಾಜನಕನು. ನಾವಾದರೂ ಪಾಪಪರಿಹಾರಕ್ಕಾಗಿ ಗಂಗಾಸ್ನಾನಪರಾಯಣರು. ಹೀಗೆ ಸ್ವಭಾವತಃ ವಿರುದ್ಧವಾದ ಜೀವೇಶರಲ್ಲಿ ಅಭೇದವು ಹೇಗೆ ತಾನೆ ಕೂಡೀತು. ಇದೇ ಅರ್ಥವನ್ನು ಶಂಕರಾಚಾರ್ಯರೂ ಸಹಾ ''ಕಥಮೇಕತ್ವ- ಮನಯೋಃ ಘಟತೇ ವಿಪರೀತಯೋಃ'' ಎಂದು ಹೇಳಿದ್ದಾರೆ. ಇನ್ನು ಜೀವರಲ್ಲಿ ಪರಸ್ಪರವಾಗಿ ವಿರುದ್ಧಸ್ವಭಾವವಿರುದ್ಧವಾದ ಬುದ್ಧಿಸುಖದುಃಖ ಹೀಗೆ ಪ್ರತಿಯೊಂದರಲ್ಲಿಯೂ ವೈಚಿತ್ರ್ಯವಿದ್ದಕಾರಣ ಭೇದವು ಅವರ್ಜನೀಯವು. ಜಡಕ್ಕೂ ಈಶನಿಗೂ ಭೇದವನ್ನು ನಾವು ಉಪಪಾದಿಸಬೇಕಾಗಿಲ್ಲ. ಜಡವೆಂಬ ಶಬ್ದವೇ ವಿರುದ್ಧಧರ್ಮವನ್ನು ಹೇಳುವುದು. ಪರಸ್ಪರ ಜಡಗಳಲ್ಲಿ ಭಿನ್ನ ಭಿನ್ನವಾದ ಗುಣ ಆಕೃತಿ ವಸ್ತುಸ್ವಭಾವ ಇರುವಕಾರಣ ಅವುಗಳಲ್ಲಿ ಭೇದವನ್ನು ಒಪ್ಪಲೇಬೇಕು. ಇನ್ನು ಜೀವರಿಗೂ ಜಡಕ್ಕೂ ಚೇತನತ್ವ ಅಚೇತನತ್ವರೂಪ ಪ್ರಧಾನಧರ್ಮ- ವಿರುದ್ಧವಾದದ್ದು ಇರುವ ಕಾರಣ ಭೇದವು ಸಿದ್ಧ.

ಇನ್ನು ಜಗತ್ತಿನಲ್ಲಿ ಭೇದವಿಲ್ಲದೆಂದಾದರೆ ಮಹಾಅನರ್ಥ ಬರುವುದು. ಗುರುವಿಗೂ ಚಂಡಾಲನಿಗೂ, ಮಾತೆಗೂ ಸತಿಗೂ, ಘೃತಕ್ಕೂ ಮದಿರಾಕ್ಕೂ, ಭೇದವಿಲ್ಲದಕಾರಣ ಪೂಜಾಪೂಜ್ಯ, ಭೋಗ್ಯಾಭೋಗ್ಯ, ಪೇಯಾಪೇಯ ವಿಭಾಗವಿಲ್ಲದೇ ಅನರ್ಥ ಒದಗ- ಬೇಕಾದೀತು. ಆದುದರಿಂದ ಸರ್ವಪದಾರ್ಥಗಳಲ್ಲಿಯೂ ಭೇದವನ್ನು ಸರ್ವಥಾ ಒಪ್ಪಲೇಬೇಕು.

## ಜೀವರು ಪರಮಾತ್ಮನ ದಾಸರು.

ಹಿಂದೆ ಹೇಳಿದ ಯುಕ್ತಿಗಳಿಂದ ವಿಷ್ಣುವು ಯಾವಾಗ ಸರ್ವೋತ್ತಮನಾದನೋ, ದೇವತೆಗಳಿಗೆ ತದ್‌ಭೃತ್ಯತ್ವವು ಸಿದ್ಧ. ಭೇದವನ್ನು ಒಪ್ಪಿದ ಬಳಿಕ ಜಗದ್ವ್ಯಾಪಾರವನ್ನು ವ್ಯವಸ್ಥೆಯಿಂದ ನಡೆಸುವ ಬಗ್ಗೆ ಒಬ್ಬ ನಿಯಾಮಕನು ಬೇಕು. ಅದು ಮಹಾವಿಷ್ಣುವೆಂದೇ ಎಲ್ಲರೂ ಒಪ್ಪತಕ್ಕದ್ದು. ನಿಯಾಮಕನಾದ ಶ್ರೀವಿಷ್ಣುವಿಗೆ ಅಂಗಭೂತರಾಗಿ ದೇವತೆಗಳನ್ನು ಒಪ್ಪಲೇಬೇಕು. 'ಏತಸ್ಯ ವಾ ಅಕ್ಷರಸ್ಯ ಪ್ರಶಾಸನೇ

ಗಾರ್ಗಿ'' ಎಂಬ ಶ್ರುತಿಯು ಶ್ರೀನಾರಾಯಣನಿಗೆ ನಿಯಾಮಕತ್ವವನ್ನು ಹೇಳುತ್ತದೆ. ಇನ್ನು ''ಭೀಷಾऽಸ್ಮಾದ್ವಾತಃ ಪವತೇ। ಭೀಷೋದೇತಿ ಸೂರ್ಯಃ'' ಇತ್ಯಾದಿ ಶ್ರುತಿಯು ಶ್ರೀಪರಮಾತ್ಮನ ಭೀತಿಯಿಂದ ಸೂರ್ಯವಾಯ್ವಾದಿಗಳಿಗೆ ಕಾರ್ಯಕಾರಿತ್ವವನ್ನು ಹೇಳುತ್ತದೆ. ಅದರಿಂದ ಸೂರ್ಯಾದಿ ಗಳಿಗೆ ತದನುಚರತ್ವವು ಸಿದ್ಧಿಸುವುದು. ಇನ್ನು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ''ಅಹಮಾದಿರ್ಹಿ ದೇವಾನಾಂ ಮಹರ್ಷೀಣಾಂ ಚ ಸರ್ವಶಃ...... ಮತ್ತಃ ಸರ್ವಂ ಪ್ರವರ್ತತೇ'' ಎಂದು ಅಪ್ಪಣೆ ಕೊಟ್ಟಕಾರಣ ಜಗತ್ತಿನಲ್ಲಿ ಸೇರಿದ ಸಮಸ್ತಜೀವರಿಗೂ ವಿಷ್ಣ್ವಧೀನತ್ವವು ಸಿದ್ಧಿಸುವುದು. ಇನ್ನೊಂದೆಡೆ ''ಮಮ ಸ್ವಾಮೀ ಹರಿರ್ನಿತ್ಯಂ ಸರ್ವಸ್ಯ ಪತಿರೇವಚ। ಇತಿ ಧ್ಯೇಯಃ ಸರ್ವದೈವ'' ಎಂಬ ಪ್ರಮಾಣದಲ್ಲಿ ಪ್ರತಿಯೊಬ್ಬನೂ ವಿಷ್ಣುವಿನಲ್ಲಿ ಸ್ವಾಮಿತ್ವ ಚಿಂತನೆಯನ್ನು ಮಾಡಬೇಕೆಂದು ಹೇಳಿದ ಕಾರಣ ಸರ್ವರಿಗೂ ತದನುಚರತ್ವವು ಸಿದ್ಧಿಸುವುದಿಲ್ಲವೇ? ಇನ್ನು ದೇವತೆಗಳಲ್ಲಿ ಶ್ರೇಷ್ಠತಮರೆಂದನಿಸಿಕೊಂಡ ಲಕ್ಷ್ಮೀ, ಬ್ರಹ್ಮ, ವಾಯುಗಳು ಪರಮಾತ್ಮನ ಭೃತ್ಯತ್ವವನ್ನು ಅವನಿಂದ ತಮಗೆ ಪಾಲ್ಯತ್ವವನ್ನೂ ಒಪ್ಪಿಕೊಂಡಿದ್ದಾರೆ. ''ಸಮ್ಯಕ್ ಸೃಷ್ವಾ ಹ್ಯಾಯತನಂ ಸುರಾಣಾಂ ದತ್ವಾಚ ಗೋವಿಂದ ರಮಾಂ ಚ ಪಾಹಿ। ಶುಶ್ರೂಷಣಂ ಮದುಚಿತಂ ಸ್ತವನಂ ರಮೇಶ'' ಎಂದು ಸ್ಪಷ್ಟವಾಗಿ ತನಗೆ ಸೇವಕಿತ್ವವನ್ನು ಒಪ್ಪಿಕೊಂಡು ರಮಾದೇವಿಯು ಸ್ತುತಿಸಿದ್ದಾಳೆ. ಇನ್ನು ಬ್ರಹ್ಮದೇವರೇ, ''ಅಹಂ ಭವೋ ದಕ್ಷಭೃಗುಪ್ರಧಾನಾಃ ಪ್ರಜೇಶ ಭೂತೇಶ ಸುರೇಶ ಮುಖ್ಯಾಃ। ಸರ್ವೇ ವಯಂ ಯನ್ನಿಯಮಂ ಪ್ರಪನ್ನಾಃ'' ಎಂದು ಪರಮಾತ್ಮನ ಆಜ್ಞಾಧಾರಕತ್ವವನ್ನು ಒಪ್ಪಿಕೊಂಡಿದ್ದಾರೆ. ಇನ್ನು ವಾಯುದೇವರು ''ಏತೇ ಹಿ ದೇವಾಃ ತವಭೃತ್ಯಭೂತಾಃ ಪಾದಾರವಿಂದಂ ಪರಮಂ ಸುದುರ್ಲಭಮ್'' ಎಂದು ತನಗೂ ಸಮಸ್ತದೇವತೆಗಳಿಗೂ ಶ್ರೀವಿಷ್ಣುವಿನ ಭೃತ್ಯತ್ವವನ್ನು ಒಪ್ಪಿಕೊಂಡು ಸ್ತುತಿಸಿದ್ದಾರೆ. ಇನ್ನು ಹಾಗೆಯೇ ರುದ್ರದೇವರು ''ವಯಂ ನ ತಾತ ಪ್ರಭವಾಮ ಭೂಮ್ನೋ ....... ತಮೇವ ಶರಣಂ ಯಾಹಿ ಹರಿಸ್ತೇ ಶಂ ವಿಧಾಸ್ಯತಿ'' ಎಂದು ವಿಷ್ಣುವಿಗೆ ರಕ್ಷಕತ್ವವನ್ನು ತಮಗೆ ತದಪೇಕ್ಷಯಾ ಅಸಾಮರ್ಥ್ಯವನ್ನೂ ಸೂಚಿಸಿದ್ದಾರೆ. ಹಾಗೆಯೇ ದೈತ್ಯಕೋಟಿಪ್ರಮುಖನಾದ ಪ್ರಹ್ಲಾದನು ''ಮಜ್ಜನ್ಮನಃ ಫಲಮಿದಂ ಮಧುಕೈಟಭಾರೇ ಮತ್ಪ್ರಾರ್ಥನೀಯಮದನುಗ್ರಹ ಏಷ ಏವ। ತದ್‌ಭೃತ್ಯಭೃತ್ಯಪರಿಚಾರಕಭೃತ್ಯಭೃತ್ಯಭೃತ್ಯಸ್ಯ ಭೃತ್ಯ ಇತಿ ಮಾಂ ಸ್ಮರ ಲೋಕನಾಥ'' ಎಂದು ಶ್ರೀಪರಮಾತ್ಮನ ಭೃತ್ಯಕೋಟಿಯಲ್ಲಿಯಾದರೂ ಇಟ್ಟುಕೊಳ್ಳು ಎಂದು ಪ್ರಾರ್ಥಿಸಿದ್ದಾನೆ. ಇನ್ನು ರಾಕ್ಷಸಪತಿಯಾದ ನಿರ್ಋತಿಯು '' ಆ ಸೇವಯಾ ಸರ್ವ ಗುಣಾಧಿಕಾನಾಂ ಜ್ಞಾನೇನ ವೈರಾಗ್ಯಯುತೇನ ದೇವ। ಯೋಗೇನ ತ್ವಯ್ಯರ್ಪಿತಯಾ ಚ ಭಕ್ತ್ಯಾಸಂಯಾಂತಿ ಲೋಕಂ ಪರಮಾಂ ಗತಿಂ ಚ '' ಎಂದು ಸ್ಪಷ್ಟವಾಗಿ ಶ್ರೀವಿಷ್ಣುವಿನ ಪೋಷ್ಯತ್ವವನ್ನು ಒಪ್ಪಿದ್ದಾನೆ. ಹೀಗೆ ಎಲ್ಲರೂ ಒಂದೊಂದು ವರ್ಗದ ಉತ್ತಮರಾದ ದೇವಾದಿಗಳೇ ವಿಷ್ಣುವಿನ ಭೃತ್ಯತ್ವವನ್ನು ಒಪ್ಪಿಕೊಂಡಿರುವಾಗ ಇತರನಾದ ಯಾವ ಸಜ್ಜೀವನು ನಿರಾಕರಿಸಿಯಾನು. ಶ್ರೀಪರಮಾತ್ಮನ ಪರಿಚಾರಕತ್ವ ತದ್‌ಜ್ಞಾನ ಎರಡೂ ಪರಮಪುರುಷಾರ್ಥಸಾಧನ.

## ತಾರತಮ್ಯ

'ಯಸ್ಯದೇವೇ ಪರಾಭಕ್ತಿಃ ಯಥಾದೇವೇ ತಥಾಗುರೌ'' ಎಂದಿರುವ ಕಾರಣ ಹರಿಭಕ್ತಿಹ್ಯಾಗೆ ಮೋಕ್ಷದಾಯಕವೋ ಗುರುಭಕ್ತಿಯೂ ಮೋಕ್ಷಕಾರಣವು. ಗುರುಗಳೆಂದರೆ ''ಬ್ರಹ್ಮಾಂತಾ ಗುರವಃ ಸಾಕ್ಷಾತ್'' ಎಂದಿರುವ ಕಾರಣ ಗುರುಗಳ ಜ್ಞಾನಪೂರ್ವಕವಾದದ್ದು ಅವರ ಭಕ್ತಿಯು ಆವಶ್ಯಕ. ''ತಥಾ ಸ್ವಗುರುಮಾರಭ್ಯ ಬ್ರಹ್ಮಾಂತೇಷು ಚ ಸಾಧುಷು। ತತ್ತದ್ಯೋಗ್ಯಾನುಸಾರೇಣ ಭಕ್ತಿಃ ಕಾರ್ಯಾ ಸದೈವ ಹಿ॥'' ಎಂದು ಇದ್ದ ಕಾರಣವೂ ತತ್ತ್ವತಾರತಮ್ಯಜ್ಞಾನಪೂರ್ವಕವಾಗಿ ಮಾಡುವ ಭಕ್ತಿಯೇ ಮೋಕ್ಷಸಾಧನವು. ಯದ್ಯಪಿ ಅಲ್ಪರಲ್ಲಿ ಹೆಚ್ಚಿನ ಸ್ನೇಹ (ಭಕ್ತಿ) ಮಾಡಿದರೆ ಲೋಕದಲ್ಲಿ ಪ್ರೀತ್ಯಾಶಯವು ದೃಷ್ಟವಾದರೂ ಈ ಮಹಾಭಗವದ್ಭಕ್ತರಾದ ಸ್ವಭಾವತಃ ಅಪರೋಕ್ಷಿಗಳಾದ ದೇವತೆಗಳಲ್ಲಿ ಅಧಮರಲ್ಲಿ ಸರ್ವೋತ್ತಮತ್ವಬುದ್ಧಿಯಿಟ್ಟು ಅಥವಾ ತದ್ಯೋಗ್ಯತಾ ಅತಿಕ್ರಮೇಣ ಭಕ್ತಿಮಾಡಿ ಪೂಜಿಸಿದರೆ ಆ ದೇವತೆಗಳು ಕುಪಿತರಾಗಿ ನಮ್ಮನ್ನು ನರಕಾದ್ಯನರ್ಥಭಾಗಿಗಳನ್ನಾಗಿ ಮಾಡಿ ಆ ಪೂಜೆಯನ್ನು ದೇವರಿಗೆ ಅರ್ಪಿಸುವರು. ಆ ಪೂಜೆಯ ಫಲವನ್ನು ಅವರೇ ಹೊಂದುವರು. ಲೋಕದಲ್ಲಿ ಯೋಗ್ಯರಾದ ಉತ್ತಮಾಧಿಕಾರಿಗಳಲ್ಲಿಯಾರಾದರೊಬ್ಬ ಕಾರ್ಯಾರ್ಥಿಯಾಗಿ ಲಂಚ ವಗೈರೆ ಏನಾದರೂ ಅರ್ಪಿಸಿದರೆ ಅದನ್ನು ಅವರು ರಾಜಸ್ಥಾನಕ್ಕೆ ಕೊಟ್ಟು ತನ್ನ ಸಂಭಾವಿತತನವನ್ನು ತೋರಿಸಿ ಶ್ರೇಷ್ಠ್ಯವನ್ನು ಹೊಂದಿ ಈ ಲಂಚ ಕೊಟ್ಟವನನ್ನು ಅಪರಾಧಿಯನ್ನಾಗಿ ಮಾಡಿ ದಂಡಿಸುವುದು ಲೋಕಸಿದ್ಧವು. ಆದಕಾರಣ ನಮಗೆ ಗುರುಗಳಾದ ಇಂದ್ರಿಯಗಳಿಗೆ ಬೇಕಾದ ಶಕ್ತಿಯನ್ನು ಕೊಟ್ಟು ತತ್ತ್ವಜ್ಞಾನದಾಯಕರಾಗಿ ಮಹೋಪಕಾರಿಗಳಾದ ಆ ಸಮಸ್ತ ದೇವರ್ಷ್ಯಾದಿಗಳಲ್ಲಿ ತಾರತಮ್ಯಜ್ಞಾನವು ಆವಶ್ಯಕವು. ಇನ್ನು ಗೀತೆಯಲ್ಲಿ ''ಊರ್ಧ್ವಂ ಗಚ್ಛಂತಿ ಸತ್ವಸ್ಥಾಃ ಮಧ್ಯೇ ತಿಷ್ಠಂತಿ ರಾಜಸಾಃ'' ಇತ್ಯಾದಿಗಳಿಂದ ಜೀವರಲ್ಲಿ ವೈಷಮ್ಯವು ಕಥಿತವಾಗಿದೆ.

## ಇನ್ನು ತಾರತಮ್ಯ ನಿರೂಪಿಸುವುದು.

1. ಶ್ರೀಪರಮಾತ್ಮನಿಂದ ಅನಂತಾನಂತಗುಣಗಳಿಗೆ ಲಕ್ಷ್ಮಿಯು ಅವರಳು. ದೇಶತಃ ಕಾಲತಃ ಸಮಾನವಾದ ವ್ಯಾಪ್ತಿ ಉಳ್ಳವಳು. ಪರಮಾತ್ಮನಿಂದ ನಿತ್ಯಾವಿಯೋಗಿನಿಯು. ದೇಹತೋಪಿ ನಾಶಶೂನ್ಯಳು. ಈಶನಾರಾಯಣನಂತೆ ಅಪ್ರಾಕೃತವಾದ ಶರೀರವುಳ್ಳವಳು. ಈಶನಾದ ನಾರಾಯಣನೊಬ್ಬನಿಗೇ ಅಧೀನಳು. ಬ್ರಹ್ಮದೇವರಿಂದ ಕೋಟಿಗುಣಗಳಿಗೆ ಉತ್ತಮಳು.

2. ವಿಧಿಪ್ರಾಣನಾಥರು ಈಶಲಕ್ಷ್ಮೀ ಇವರಿಬ್ಬರಿಗೆ ಮಾತ್ರ ನಿಯಮ್ಯರು. ಇವರಿಗೆ ಈಶಲಕ್ಷ್ಮೀ ಇವರಿಬ್ಬರ ಗುಣಗಳಲ್ಲಿ ಮುಖ್ಯವಾದ ಸಾರ್ವಜ್ಞ್ಯವಿಲ್ಲ. ಜಗದ್ವಿಷಯದಲ್ಲಿ ಉಂಟು. ಲಕ್ಷ್ಮೀದೇವಿಯರಿಂದ ಕೋಟಿಗುಣಗಳಿಗೆ ಅಧಮರು. ಇಬ್ಬರೂ ಸಮಾನಿಕರು. ವಾಯುದೇವರೇ ಬರುವ ಕಲ್ಪಕ್ಕೆ ಬ್ರಹ್ಮಪದವಿಗೆ ಬಂದು ಸರ್ವಾಂಗಸಾಯುಜ್ಯರೂಪವಾದ ಮುಕ್ತಿಯನ್ನು ಹೊಂದುವರು. ಈಗ ಅವರಲ್ಲಿ ಪದವೈಷಮ್ಯಮಾತ್ರ ಅಂದರೆ ಭಗವದ್ಗುಣಗಳ ಜ್ಞಾನವು ಸಮಾನವಾಗಿರುವುದು. ಅದರ ಪ್ರಕಾಶದಲ್ಲಿ ಮಾತ್ರ ವ್ಯತ್ಯಾಸವು. ಒಂದೇ ವಸ್ತುವಿನ ಸೂರ್ಯಪ್ರಕಾಶದಲ್ಲಿ ಬರುವ ಜ್ಞಾನವು ದೀಪಪ್ರಕಾಶದಲ್ಲಿ ಬರುವಜ್ಞಾನಕ್ಕೂ ಇದ್ದ ವೈಷಮ್ಯದಂತೆ ಯತ್ಕಿಂಚಿತ್ ವೈಷಮ್ಯಮಾತ್ರ. ಭಗವದ್ಗುಣಗಳ ಜ್ಞಾನದಲ್ಲಿ ಪ್ರಮಾದವಾಗಲೀ ತಿಳಿದು ಜ್ಞಾನದ ತಿರೋಭಾವಾದಿಗಳಾಗಲೀ ಇಲ್ಲ. ಇವರು ದ್ವಾತ್ರಿಂಶಲ್ಲಕ್ಷಣೋಪೇತವಾದ ದೇಹವುಳ್ಳವರು. ಇವರು ಜೀವರಾದ ಕಾರಣ ಲಿಂಗದೇಹವುಳ್ಳವರು. ಇವರಿಗೆ ಬ್ರಹ್ಮಪದಪ್ರಾಪ್ತಿಗೆ ನೂರುಕಲ್ಪದ ಸಾಧನೆಯು ಬೇಕು. ನೂರನೇ ಕಲ್ಪದ ಸಾಧನೆಯೇ ಬ್ರಹ್ಮಪದವಿಯು.

3. ಸರಸ್ವತೀಭಾರತಿಯರು ವಿಧಿಪ್ರಾಣನಾಥರಂತೆ ಸಮಾನಿಕರು. ಅವರಂತೆಯೇ ಪದಕೃತವೈಷಮ್ಯಮಾತ್ರ. ಬ್ರಹ್ಮವಾಯುಗಳಿಂದ ನೂರುಗುಣ ಊನರು. ಲಕ್ಷ್ಮೀನಾರಾಯಣರು ಬ್ರಹ್ಮವಾಯುಗಳು ಮಾತ್ರ ಇವರಿಗೆ ನಿಯಾಮಕರು. ಇವರಿಗೆ ಭಗವದ್ವಿಷಯದಲ್ಲಿ ವಿರೋಧಾಚರಣೆಯು ಇಲ್ಲ. ಕಲ್ಯಾವೇಶನಿಮಿತ್ತ ಅಜ್ಞಾನಾದಿಗಳು ಇಲ್ಲ. ಬ್ರಹ್ಮಸರಸ್ವತಿಯರಿಗೆ ಅವತಾರವಿಲ್ಲ. ಮುಖ್ಯಪ್ರಾಣಭಾರತಿಯರು ದೇವರ ಜ್ಞಾನಕಾರ್ಯಗಳಲ್ಲಿ ''ಪ್ರಧಾನಾಂಗಂ ಹಿ ಮಾರುತಿಃ'' ಎಂದು ಇದ್ದುದರಿಂದ ಜನ್ಮವನ್ನು ಹೊಂದಿ ಮುಖ್ಯವಾಗಿ ಸೇವಾಕರ್ತರು. ಮೂಲರೂಪಕ್ಕಿಂತ ಅವತಾರರೂಪದಲ್ಲಿ ಬಲಜ್ಞಾನಾದಿಗಳಲ್ಲಿ ವೈಷಮ್ಯವಾಗಲೀ ಇವರಿಗೆ ತಿಳಿದವಿಷಯದಲ್ಲಿ ಅಜ್ಞಾನವಾಗಲೀ ಇಲ್ಲ. ಆದರೆ ಆಯಾಯ ಯುಗಮಾನಕಾರ್ಯವಿಶೇಷಗಳನ್ನನುಸರಿಸಿ ಬಲಜ್ಞಾನಾದಿಗಳನ್ನು ವ್ಯಕ್ತಪಡಿಸುವರು. ಅವತಾರದಲ್ಲಿ ಅಜ್ಞಾನದುಃಖ ಪರಾಜಯಾದಿಗಳನ್ನು ತೋರ್ಪಡಿಸುವುದು ಹರಿಯ ಪ್ರೀತಿಗಾಗಿಯೂ ಅಯೋಗ್ಯರ ಮೋಹನಕ್ಕಾಗಿಯೂ, ಸರಸ್ವತಿಭಾರತಿಯರಿಗೆ ನೂರು ಕಲ್ಪದ ಸಾಧನೆಯು. ನೂರನೇ ಕಲ್ಪದ ಸಾಧನೆಯು ಸರಸ್ವತೀಪದವಿಯು.

4. ಗರುಡಶೇಷರುದ್ರರು ಸಮಾನಿಕರು. ಆ ಪೈಕಿ ರುದ್ರನೇ ಮೇಲಿನ ಕಲ್ಪಕ್ಕೆ ಶೇಷಪದವಿಗೆ ಬರುವವನು. ಇವರಿಗೆ ಐವತ್ತು ಕಲ್ಪ ಸಾಧನವು. ಸರಸ್ವತೀಭಾರತೀಯರಿಂದ ನೂರುಗುಣಗಳಿಗೆ ಕಮ್ಮಿಯವರು. ಗರುಡನಿಗೆ ಉತ್ಪತ್ತಿಯಿಲ್ಲ. ಶೇಷರುದ್ರರಿಗೆ ಭೂಮಿಯಲ್ಲಿ ಉತ್ಪತ್ತಿ ಉಂಟು.

5. ಜಾಂಬವತಿ, ನೀಲಾ, ಭದ್ರಾ, ಮಿತ್ರವಿಂದಾ, ಕಾಲಿಂದಿ, ಲಕ್ಷಣಾ ಇವರು ಆರುಸ್ತ್ರೀಯರು ದೇವರ ನಿಯತಪತ್ನಿಯರು. ಕಾಮನಿಂದ 20 ಗುಣಗಳಿಗೆ ಅಧಿಕರು. ಲಕ್ಷ್ಮಿಯವಿಶೇಷ ಆವೇಶವುಳ್ಳವರು. ಇವರಿಗೆ 50 ಕಲ್ಪದ ಸಾಧನವು.

6. ಸೌಪರ್ಣೀ, ವಾರುಣೀ, ಪಾರ್ವತೀ ಇವರು ಸಮಾನಿಕರು. ಸೌಪರ್ಣಿಗೆ ಉತ್ಪತ್ತಿಯಿಲ್ಲ. ಇವರಿಗೆ ಐವತ್ತು ಕಲ್ಪದ ಸಾಧನವು.

7. ಇಂದ್ರಕಾಮರು ಪಾರ್ವತ್ಯಾದಿಗಳಿಗಿಂತ ಹತ್ತು ಗುಣಗಳಿಗೆ ಕಡಿಮೆಯಾದವರು. ಇಂದ್ರನಿಂತ ಕಾಮನು ಕಿಂಚಿದೂನನು. ಇವರಿಗೆ ಇಪ್ಪತ್ತು ಕಲ್ಪ ಸಾಧನವು.

8. ಅಹಂಕಾರಿಕ ಪ್ರಾಣನು ಇಂದ್ರನಿಂತ ಹತ್ತುಗುಣ ಊನನು. 18 ಕಲ್ಪದ ಸಾಧನವು.

9. ಅನಿರುದ್ಧ, ರತಿ, ಸ್ವಾಯಂಭುವಮನು, ಗುರು, ದಕ್ಷ, ಶಚಿ ಇವರು ಸಮಾನಿಕರು. ಇವರು ಅಹಂಕಾರಿಕ ಪ್ರಾಣನಿಗಿಂತ ಹತ್ತು ಗುಣಗಳಿಗೆ ಊನರು. ಇವರಿಗೆ 16 ಕಲ್ಪದ ಸಾಧನವು.

10. ಪ್ರವಹವಾಯುವು ಗುರುದಕ್ಷಾದಿಗಳಿಗಿಂತ ಐದು ಗುಣಗಳಿಗೆ ಅಧಮನು. ಇವನಿಗೆ 12 ಕಲ್ಪದ ಸಾಧನವು.

11. ಯಮ,ಸೂರ್ಯ, ಚಂದ್ರ, ಶತರೂಪಾ (ಸ್ವಾಯಂಭುವಮನುವಿನ ಪತ್ನಿ) ಇವರು ಸಮಾನಿಕರು. ಪ್ರವಹವಾಯುವಿಗಿಂತ ಎರಡು ಗುಣ ಅಧಮರು. ಇವರಿಗೆ ಹತ್ತು ಕಲ್ಪ ಸಾಧನವು. ಈ ಸೂರ್ಯನು ದ್ವಾದಶಾದಿತ್ಯರ ಮಧ್ಯದಲ್ಲಿ ವಿವಸ್ವಾನ್ ನಾಮಕನು.

12. ವರುಣನು ಸೂರ್ಯಾದಿಗಳಿಗಿಂತ ಒಂದು ಗುಣದಲ್ಲಿ 3/8 ರಷ್ಟು ಯೋಗ್ಯತೆಯಲ್ಲಿ ಕಡಿಮೆಯವನು. ಇವನಿಗೆ 10 ಕಲ್ಪದ ಸಾಧನ.

13. ನಾರದರು ವರುಣನಿಂದ ಒಂದುಗುಣ ಅಧಮರು. ಇವರಿಗೆ ಹತ್ತು ಕಲ್ಪದಸಾಧನವು.

14. ಭೃಗುಮುನಿಯು, ಅನಲನಾಮಕ ಅಗ್ನಿ, ಪ್ರಸೂತಿ (ದಕ್ಷನ ಹೆಂಡತಿ) ಇವರು ಸಮಾನಿಕರು. ವರುಣನಿಂದ ಒಂದೂಕಾಲು ಗುಣದಷ್ಟು ಕಡಿಮೆಯವರು, ಇವರಿಗೆ ಹತ್ತು ಕಲ್ಪದ ಸಾಧನವು.

15. ವಿಶ್ವಾಮಿತ್ರ, ಮರೀಚ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ, ವೈವಸ್ವತಮನು ಇವರು ಅಗ್ನಿಯಿಂದ ಎರಡು ಗುಣ ಅಧಮರು. ಪರಸ್ಪರ ಸಮಾನಿಕರು.

16. ಮಿತ್ರ, ತಾರಾ, ನಿರ್ಋತಿ, ಪ್ರಾವಹೀ ಇವರು ಸಮಾನಿಕರು. ಮಿತ್ರದ್ವಾದಶಸೂರ್ಯರಲ್ಲಿ ಒಬ್ಬನು. ತಾರಾ ಬೃಹಸ್ಪತಿಯ ಭಾರ್ಯೆಯು. ನಿರ್ಋತಿ ಕೋಣಾಧಿಪನು. ಪ್ರಾವಹೀ ಪ್ರವಹನಾಮಕ ವಾಯುವಿನ ಪತ್ನಿಯು. ಮರೀಚ್ಯಾದಿಗಳಿಂದ ಕಿಂಚಿದೂನರು. ಇವರಿಗೆ 9 ಕಲ್ಪದ ಸಾಧನವು.

17. ವಿಷ್ವಕ್ಸೇನ, ಅಶ್ವಿನೀದೇವತೆಗಳು, ಗಣಪತಿ, ಕುಬೇರ, ಅಗ್ನಿಯನ್ನುಳಿದು 7 ವಸುಗಳು, ಪ್ರಧಾನರುದ್ರನನ್ನು ಬಿಟ್ಟು 10 ಜನ ರುದ್ರರು, ಹನ್ನೆರಡು ಆದಿತ್ಯರಲ್ಲಿ ಆರು ಮಂದಿ, 41 ಮರುತ್ತುಗಳು, 10 ವಿಶ್ವೇದೇವತೆಗಳು, 1 ಋಭು ದ್ಯಾವಾಪೃಥಿವ್ಯಭಿಮಾನಿಗಳಿಬ್ಬರು ಪಿತರರು 3 ಇವರು ಮಿತ್ರಾದಿಗಳಿಂದ ಕಿಂಚಿದೂನರು. ಇವರಿಗೆ 8 ಕಲ್ಪದ ಸಾಧನವು.

18. ಕರ್ಮಜದೇವತೆಗಳು, 11 ಮನುಗಳು, ಚ್ಯವನ, ಉಚಥ್ಯ ಋಷಿಗಳು, ವೈನ್ಯ, ಕಾರ್ತವೀರ್ಯ, ಶಶಬಿಂದು, ಪ್ರಿಯವ್ರತ ಇತ್ಯಾದಿ ರಾಜರುಗಳು, ಸನಕ, ಸನಂದನ, ಸನಾತನ, ಏಳು ಇಂದ್ರರು, ಜಯಂತ, ಹರಿಪಾರ್ಷದರು ಇತ್ಯಾದಿಗಳು.

19. ಗಂಗೆ, ಪರ್ಜನ್ಯ, ಸಂಜ್ಞಾ, ರೋಹಿಣೀ, ಶ್ಯಾಮಲಾ ಇವರು ಸಮಾನಿಕರು, ಇವರಿಗೆ ಆರುಕಲ್ಪದ ಸಾಧನವು.

20. ಸ್ವಾಹಾ, ಇವಳು ಗಂಗೆಯಿಂದ 2 ಗುಣಗಳಿಗಧಮಳು. ಅಗ್ನಿದೇವರ ಹೆಂಡತಿಯು. ಇವಳಿಗೆ ಆರು ಕಲ್ಪದ ಸಾಧನವು.

ಬುಧನು ಕಾಲಕಲಾಭಿಮಾನಿಯು. 6 ಕಲ್ಪದ ಸಾಧನವು. ಉಷಾದೇವಿಯು ಅಶ್ವಿನಿದೇವತೆಗಳ ಭಾರ್ಯೆಯು. ಮೂರುಕಲ್ಪದ ಸಾಧನೆಯು. ಶನಿಯು ಉಷಾದೇವಿಯಿಂದ ಕಿಂಚಿದೂನನು. ಇವರಿಗೆ ಆರುಕಲ್ಪದ ಸಾಧನವು. ಪುಷ್ಕರನು ಶನಿಯಿಂದ ಕಿಂಚಿದೂನನು. ಇವನು ಕರ್ಮಾಭಿಮಾನಿಯು. ಇವನಿಗೆ ಆರುಕಲ್ಪದ ಸಾಧನವು. **ತತ್ವಾಭಿಮಾನಿದೇವತೆಗಳ ತಾರತಮ್ಯವು ಇಲ್ಲಿಗೆ ಮುಗಿಯಿತು.**

**ಇನ್ನು ದೈತ್ಯರ ತಾರತಮ್ಯವು ಸ್ವಲ್ಪ ಹೇಳುವುದು.**

ಅವರ ನೀಚತಾ ಜ್ಞಾನವು ಪುರುಷಾರ್ಥಸಾಧನವು. 1. ಕಿರ್ಮೀರ, 2 ಕುಭಲ, 3 ಕುಂಭಕರ್ಣ, 4 ಹಂಸ, 5 ಡಿಭಿಕ, 6 ಕಾಲಕೇಯ, 7 ದುಂಧುಮಾರ, 8 ಲವಣ, 9 ತೃಣಾವರ್ತ, 10 ಕೇಶೀ, 11 ಧೇನುಕ, 12 ವಾತಾಪಿ, 13 ನಮುಚಿ, 14 ಪಾಕ, 15 ಇಲ್ವಲ, 16 ಬಾಣ, 17 ದ್ವಾಪರ, 18 ಹಿಡಿಂಬ, 19 ಶಂಬರ, 20 ಸಾಲ್ವ, 21 ತಾರಕ, 22 ಬಕ, 23 ಹಿರಣ್ಯಾಕ್ಷ, 24 ಹಿರಣ್ಯಕಶಿಪು, 25 ಮಣಿಮಾನ್, 26 ಮಧು, 27 ಕೈಟಭ, 28 ವಿಕರ್ಣ, 29 ಅತಿಕಾಯ, 30 ಕಾಲನೇಮಿ, 31 ನರಕಾಸುರ, 32 ಇಂದ್ರಜಿತ್, 33 ವಿಪ್ರಚಿತ್ತಿ, 34 ಅಲಕ್ಷ್ಮಿ, 35 ಕಲಿ. ಇವರಲ್ಲಿ ಒಬ್ಬೊರಿಂದ ಮೇಲಿನ ಮತ್ತೊಬ್ಬರು ಕ್ರಮವಾಗಿ ನೀಚರು. ಭಗವದ್ವೇಷದಲ್ಲಿ ಶ್ರೇಷ್ಠರು. ಎಲ್ಲರಿಂದಲೂ ಕಲಿಯು ಹರಿವಾಯುಗಳಲ್ಲಿ ಹೆಚ್ಚು ದ್ವೇಷಿಯು.

## ಮೋಕ್ಷಸ್ವರೂಪವು.

ಮೋಕ್ಷವೆಂದರೆ ಸರ್ವರಿಗೂ ಅಪೇಕ್ಷಣೀಯವಾದ ಪುನರಾವೃತ್ತಿಶೂನ್ಯವಾದ ಸ್ಥಾನ ವಿಶೇಷವು. 'ಪರಂಜ್ಯೋತಿರು- ಪಸಂಪದ್ಯ ಸ್ವೇನ ರೂಪೇಣಾಭಿನಿಷ್ಪದ್ಯತೇ' ಎಂಬ ಶ್ರುತಿಯಲ್ಲಿ ಮುಕ್ತಿಯೋಗ್ಯಜೀವನು ಜ್ಞಾನಸುಖಾದಿಸ್ವರೂಪನು. ಅವನು ಪರಂಜ್ಯೋತಿಃ ಶಬ್ದವಾಚ್ಯನಾದ ಗುಣಪೂರ್ಣನಾರಾಯಣನನ್ನು ಹೊಂದಿ ತನ್ನ ಸ್ವರೂಪ ಅಭಿವ್ಯಕ್ತಿ ಹೊಂದಿ ಇರುವನೆಂದು ಹೇಳಿದೆ. ಜ್ಞಾನಸುಖಾದಿಸ್ವರೂಪರಾದ ಜೀವರಿಗೆ ಸ್ವರೂಪಾಭಿವ್ಯಕ್ತಿ ಎಂದರೆ ಸ್ವರೂಪಭೂತಗಳಾದ ಜ್ಞಾನಸುಖಾದಿಗಳ ಅನುಭವವೇ ಹೊರತು ಇತರ ವಾದಿಗಳು ಹೇಳುವ ಶೂನ್ಯಭಾವವಾಗಲೀ ನಿರ್ಗುಣ, ನಿರಾಕಾರ, ಅನಿರ್ವಾಚ್ಯ, ಸರ್ವಧರ್ಮ ಶೂನ್ಯ ಬ್ರಹ್ಮಭಾವಾಪನ್ನತೆಯಾಗಲೀ ಏಕವಿಂಶತಿದುಃಖಧ್ವಂಸರೂಪತೆಯಾಗಲೀ, ಸಂತತೋರ್ಧ್ವಗಮನರೂಪವಾದ- ದ್ದಾಗಲೀ

ಮೋಕ್ಷವಲ್ಲ. ಯಾಕೆಂದರೆ ಪ್ರತಿಯೊಬ್ಬನಿಗೂ ''ಸುಖಮೇವ ಮೇ ಸ್ಯಾತ್ ದುಃಖಂ ಮನಾಗಪಿ ಮಾಭೂತ್'' ಎಂತ ಸ್ವಲ್ಪ ಸಹಾ ದುಃಖದಿಂದ ಕೂಡದಿರುವ ಸುಖವೇ ಪ್ರಾರ್ಥ್ಯವು. ಯಾರಿಗಾದರೂ ಧನಸ್ವಾಮಿತಾಬೇಕೆಂಬ ಇಚ್ಛೆಯಿರುವುದು ಸಹಜ, ಅನುಭವವಿಲ್ಲದ ಧನರೂಪತಾ ಬೇಕೆಂದು ಯಾರಿಗಾದರೂ ಇರುವುದೇ? ಹಾಗಿದ್ದ ಮೇಲೆ ಏನು ಸುಖಾನುಭವ ಇಲ್ಲದ್ದು, ಬ್ರಹ್ಮಭಾವವಾಗಲೀ ಶೂನ್ಯಭಾವವಾಗಲೀ ಬರಬೇಕೆಂದು ಯಾರು ಕಾಮಿಸಿಯಾನು? ಪ್ರಾರ್ಥಿಸಿಯಾನು? ಏಕವಿಂಶತಿದುಃಖಧ್ವಂಸರೂಪವಾದ ಮೋಕ್ಷವು ದುಃಖ ಇಲ್ಲದಿದ್ದರೂ ಸುಖಾನುಭವವಿಲ್ಲದಕಾರಣ ಪ್ರಾರ್ಥ್ಯವಲ್ಲ. ಸಂತತೋರ್ಧ್ವಗಮನರೂಪವಾದ ಮೋಕ್ಷ ದುಖಸ್ವರೂಪವೇ ಆದಕಾರಣ ಯಾರಿಂದಲೂ ಪ್ರಾರ್ಥ್ಯವೇ ಅಲ್ಲ. ನಮ್ಮ ನಿಮ್ಮ ವಿಚಾರ ಬಿಡಿ, ಮಹಾಮಹಾಋಷಿಗಳಿಗೂ ಸುಖದಲ್ಲಿಯೇ ದೃಷ್ಟಿ. ಬಲಿ ಮತ್ತು ಇಂದ್ರರಲ್ಲಿ ಯುದ್ಧವೊದಗಿ ಬ್ರಹ್ಮಾಸ್ತ್ರವನ್ನು ಪರಸ್ಪರ ಪ್ರಯೋಗಿಸಿಕೊಂಡಾಗ ತಜ್ಜನ್ಯತಾಪದಿಂದ ದಗ್ಧರಾದಾಗ್ಯೂ ನಾರದಾದಿ ಮಹರ್ಷಿಗಳು ಆತ್ಮೀಯ ದೇವತೆಗಳ ವಿಜಯದರ್ಶನದಲ್ಲಿ ಲಾಲಸರಾಗಿ ಯುದ್ಧದರ್ಶನವನ್ನು ಬಿಡಲಿಲ್ಲ. ಈ ವಿಷಯದಲ್ಲಿ ''**ಯದೇಂದ್ರವೈರೋಚನಯೋಃ ಬ್ರಹ್ಮಾಸ್ತ್ರಾಭ್ಯಾಂ ಸುತಾಪಿತಾಃ । ತದಾಪಿ ನ ಜಹುರ್ಯುದ್ಧಂ ರಸಾತ್ತೇ ನಾರದಾದಯಃ ।**'' ಎಂಬ ಪುರಾಣ ವಚನವು ಪ್ರಮಾಣವು. ಇದರಿಂದ ಸುಖವು ಪ್ರಾರ್ಥ್ಯವು, ತದರ್ಥವಾಗಿ ದುಃಖವೂ ಸಹನೀಯವೆಂದಾಯಿತು. ಆದ್ದರಿಂದಲೇ ಮಹಾಮಹಾಋಷಿಗಳೂ ಸ್ವರ್ಗದಲ್ಲಿ ಸರ್ವಸುಖವಿದ್ದರೂ ಪತನಭಯವೊಂದಿರುವ ಕಾರಣ ಆ ಸ್ವರ್ಗದ ಉದ್ದಿಶ್ಯವಾಗಿ ಕರ್ಮಗಳನ್ನು ಮಾಡದೇ ಮೋಕ್ಷದ ಉದ್ದಿಶ್ಯವಾಗಿ ನಿಷ್ಕಾಮಕರ್ಮ ಶ್ರವಣ ಮನನಾದಿಗಳನ್ನೇ ಮಾಡುವರು. ಅದರಿಂದ ಮೋಕ್ಷವು ದುಃಖಾಸಂಭಿನ್ನವಾದ ಸ್ವರೂಪಸುಖಕ್ಕೆ ಸಾಧನವೆಂದಾಗುವುದಿಲ್ಲವೇ? ಅತ ಏವ ಶ್ರುತಿಯಲ್ಲಿ ''ಸ್ತ್ರೀಭಿರ್ವಾ ಯಾನೈರ್ವಾ ಜ್ಞಾತಿಭಿರ್ವಾ ಜಕ್ಷನ್ ಭಕ್ಷನ್ ಕ್ರೀಡನ್ ರಮಮಾಣಃ'' ಎಂದು ಸುಖಾನುಭವವನ್ನು ಹೇಳಿದೆ.

ಇನ್ನು 'ಶ್ಯಾಮಾವದಾತಾಃ ಶತಪತ್ರಲೋಚನಾಃ ದಿಶಂಗ ವಸ್ತ್ರಾಃ ...... ಸರ್ವೇ ಚತುರ್ಬಾಹವಃ'' ಇತ್ಯಾದಿಗಳಿಂದ ಮುಕ್ತಿಯಲ್ಲಿರುವವರಿಗೆ ಮಹಾಸುಖವನ್ನು ಹೇಳಿದೆ. ಇನ್ನು ಅಮೃತಮಯ ಸಮುದ್ರದಲ್ಲಿ ತನಗೆಷ್ಟೆಷ್ಟು ಜಲ ಅಪೇಕ್ಷಿತವೋ ಅಷ್ಟುಜಲದಲ್ಲಿ ಜಲಕ್ರೀಡಾದಿಗಳನ್ನು ಮಾಡಿಕೊಂಡು ಹಾಗೆಯೇ ಸರ್ವಋತುಗಳ ಫಲಪುಷ್ಪಾದಿಗಳಿಂದ ಕೂಡಿದ ವನಗಳಲ್ಲಿ ವನಕ್ರೀಡಾರತರಾಗಿ '' ಸುರಭಿತ್ವಮೇವಬಹಿರಂತರಪಿ' 'ನನುಮಾನ್ಯತೇ ಹಿ ಮುನಿಭಿಃ ಸುರತಂ' ಎಂಬೀ ವಾಕ್ಯಗಳಲ್ಲಿ ಲೋಕರೀತಿಯಿಂದ ನಿಂದ್ಯವಾದ ವನಕ್ರೀಡಾದಿಗಳು ಅಲ್ಲಿ ಮಾನ್ಯವೆಂದು ಹೇಳಿದರೀತ್ಯಾ ಮಹಾಸುಖವನ್ನು ಅನುಭವಿಸಿ-ಕೊಂಡಿರುವರೆಂದು ಹೇಳಿದೆ. ಇನ್ನು ಗೀತೆಯಲ್ಲಿ ''ಇದಂ ಜ್ಞಾನಮುಪಾಶ್ರಿತ್ಯ.......... ಪ್ರಲಯೇ ನ ವ್ಯಥಂತಿ ಚ'' ಎಂದು ಜೀವರು ನನ್ನ ಜ್ಞಾನವನ್ನು ಹೊಂದಿ ತಜ್ಜನ್ಯ ನನ್ನ ಮಹಾಪ್ರಸಾದದಿಂದ ಮುಕ್ತರಾಗಿ ನನ್ನಂತೆ ಚತುರ್ಭುಜಾದಿಗಳಿಂದ ಕೂಡಿ ಸೃಷ್ಟಿಪ್ರಲಯಗಳಲ್ಲಿ ಉತ್ಪತ್ತಿನಾಶರಹಿತರಾಗಿ ಇರುವರೆಂದು ಮೋಕ್ಷಸ್ವರೂಪವನ್ನು ಶ್ರೀಕೃಷ್ಣನು ಹೇಳಿರುವನು. ಇಂತಹ ಪರಮಸುಖರೂಪವಾದಪ್ರಯುಕ್ತವೇ ಪರಮವಿರಕ್ತರಾದ ಮಹರ್ಷಿಗಳೂ ಕೂಡಾ ಮೋಕ್ಷದ ಉದ್ದಿಶ್ಯದಿಂದ ಶೀತತಾಪಾದಿ ಬಹುದುಃಖಗಳನ್ನು ಸಹಿಸಿಯಾದರೂ ತಪಸ್ಸನ್ನು ಆಚರಿಸುತ್ತಿರುವರೆಂಬುದು ಯುಕ್ತಿಯುಕ್ತವಾಗುವುದು.

ಇನ್ನು ''ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ'' ಎಂಬ ಶ್ರುತಿಯು ಅಪರೋಕ್ಷಿಜೀವನು ಮಹಾಜ್ಞಾನಿಯಾದ ಚತುರ್ಮುಖನಿಂದ ಕೂಡಿಕೊಂಡು ಕಾಮಿತಸಕಲಸುಖಗಳನ್ನು ಭೋಗಿಸುವನೆಂದು ಮೋಕ್ಷದಲ್ಲಿ ಮಹಾಸುಖಾನುಭವವನ್ನು ಹೇಳಿದೆ.

ಆದುದರಿಂದ ಇತರ ವಾದಿಗಳು ''ಪಿಂಡೇ ಪಿಂಡೇ ಮತಿರ್ಭಿನ್ನಾ'' ಎಂಬ ವಾಕ್ಯಾನುಸಾರವಾಗಿ ಸ್ವಕಪೋಲಕಲ್ಪಿತವಾಗಿ ವಿಚಾರ ಮಾಡಿದಾಗ ಅನುಭವಕ್ಕೆ ವಿರುದ್ಧವಾಗಿ ಸಾಧಕಪ್ರಮಾಣಗಳೇನೂ ಇಲ್ಲದೇ ನಾನಾವಿಧವಾಗಿ ಹೇಳಿದರೂ ಅದನ್ನು ತಿಳಿಯಬಾರದು. ಸ್ವರೂಪಸುಖಾನುಭವವೇ ಮೋಕ್ಷವು. ಶ್ರುತಿ, ಯುಕ್ತಿ ಅನುಭವ, ಇವುಗಳಿಗನುಕೂಲವಾದ ಇಂತಹ ಮೋಕ್ಷದ ಪ್ರಾಪ್ತಿಗಾಗಿ ಮುಖ್ಯಸಾಧನವೆಂದರೆ ಭಕ್ತಿಯು. ಅದರಿಂದ ಪರಮಪುರುಷ ನಾರಾಯಣನ ಪರಮಪ್ರಸಾದವನ್ನು ಸಂಪಾದಿಸಬೇಕು.

## ಭಕ್ತಿಯ ಸ್ವರೂಪ.

ಭಕ್ತಿಯೆಂದರೆ 'ಮಾಹಾತ್ಮ್ಯ ಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ। ಸ್ನೇಹೋ ಭಕ್ತಿರಿತಿ ಪ್ರೋಕ್ತಸ್ತಯಾ ಮುಕ್ತಿರ್ನಚಾನ್ಯಥಾ'' ಎಂದು ಭಕ್ತಿಯ ಸ್ವರೂಪವನ್ನೂ ಭಕ್ತಿಗೆ ಮೋಕ್ಷಸಾಧಾರಣಕಾರಣತ್ವವನ್ನೂ ಆಚಾರ್ಯರು ನಿರೂಪಿಸಿ ದ್ದಾರೆ. ವಿಚಾರಮಾಡಿದರೆ ಅದು

ಬಹುಯುಕ್ತವಾಗಿ ಕಾಣುವುದು. ಒಬ್ಬ ಪ್ರಭುವಿನ ಸಕಾಶದಿಂದ ನಮಗೆ ಮಹತ್ತರವಾದ ಕೆಲಸವಾಗಬೇಕಾದರೆ ಅವನಲ್ಲಿರುವ ಒಳ್ಳೊಳ್ಳೇ ಗುಣಗಳನ್ನು ತಿಳಿದು ಆತನಲ್ಲಿ ಸ್ನೇಹವನ್ನು ಮಾಡಬೇಕು. ಅನ್ಯಥಾ ಅವನ ಅನುಗ್ರಹವಾಗುವುದಿಲ್ಲ. ಅನುಗ್ರಹಕ್ಕೆ ಸರಿಯಾಗಿ ಸ್ನೇಹವನ್ನು ಮಾಡಬೇಕು. ಅನ್ಯಥಾ ಅವನ ಅನುಗ್ರಹವಾಗುವುದಿಲ್ಲ. ವಿವೇಕಿಯಾದ ಪ್ರಭುವು ಸ್ನೇಹಕ್ಕೆ ಸರಿಯಾಗಿ ಅನುಗ್ರಹವನ್ನು ಮಾಡುವನು. ಲೋಕದಲ್ಲಿ ಸಾತ್ವಿಕಸ್ವಭಾವವುಳ್ಳ ಪುರುಷನು ಮಾತಾಪಿತೃಗಳು ನಮಗೆ ದೇಹಕ್ಕೆ ಕಾರಣರಾಗಿ ಉತ್ಪನ್ನಕೊಟ್ಟು ಸಲಹುವ ಕಾರಣ ಅವರಲ್ಲಿ ಎಷ್ಟೊಂದು ಸ್ನೇಹವನ್ನು ಇಡುವನು ಮಾತಾಪಿತರಲ್ಲಿ ಅಧಿಕವಾದ ಸ್ನೇಹವನ್ನು ಇಡಬೇಕೆಂಬುದನ್ನು ತೋರಿಸಲಿಕ್ಕಾಗಿ ಪರಶುರಾಮನು ತಂದೆಯಮಾತಿನಂತೆ ಪೂಜ್ಯಳಾದ ತಾಯಿಯನ್ನು ಕೊಂದ. ದಾಶರಥಿರಾಮನು ಕ್ರಮಪರಂಪರಾಪ್ರಾಪ್ತವಾದ ರಾಜ್ಯವನ್ನು ಬಿಟ್ಟು ವನವನ್ನು ತೆರಳಿದ. ಮಹಾಭಗವದ್ಭಕ್ತನಾದ ಪ್ರಹ್ಲಾದನು ತಂದೆಯು ಕೊಟ್ಟ ಸರ್ವಶಿಕ್ಷೆಯನ್ನು ಸಹಿಸಿಕೊಂಡು ನರಸಿಂಹದೇವನು ವರವೇನು ಬೇಕೆಂದು ಕೇಳಿದಾಗ ''ತಸ್ಮಾತ್ ಪಿತಾ ಮೇ ಪೂಯೇತ ದುರಂತಾದ್ದುಸ್ತರಾದಘಾತ್'' ಎಂದು ಪಿತನ ಶ್ರೇಯಸ್ಸನ್ನೇ ಕೋರಿದ. ಹೀಗೆ ಒಂದು ಜನ್ಮದಲ್ಲಿ ದೇಹಕಾರಣನಾದ ಪಿತನಲ್ಲಿ ಇಂತಹ ಭಕ್ತಿಯನ್ನು ಮಾಡುವುದು ಶಿಷ್ಟಾಚಾರ ಪ್ರಾಪ್ತವಾದಾಗ ಜನ್ಮಜನ್ಮಾಂತರದಲ್ಲೂ ಗರ್ಭದಲ್ಲಿ ರಕ್ಷಿಸುವಾತ ಅವನೇ ಹರಿಯು. 'ಸ ರಕ್ಷಿತಾ ರಕ್ಷತ ಯೋ ಹಿ ಗರ್ಭೇ' ಎಂಬ ಪ್ರಮಾಣ- ಸಿದ್ಧವು. ಬಾಲ್ಯವಸ್ಥೆಯಲ್ಲಿ ತಂದೆಯಿಂದ ಪರಿತ್ಯಕ್ತನಾದ ಐದು ವರ್ಷದ ಬಾಲಕನಾದ ಧ್ರುವನನ್ನು ನಾರಾಯಣನು ಅನುಗ್ರಹಿಸಿರುವ ಪ್ರಯುಕ್ತವೇ ಪೂರ್ವದಲ್ಲಿ ಔದಾಸೀನ್ಯವನ್ನು ತೋರಿಸಿದ ತಂದೆಯು ಅಭಿಮಾನದಿಂದ ಸ್ವೀಕರಿಸಿದ್ದಲ್ಲದೇ ತನ್ನ ಪೂರ್ವಕೃತಿಗೆ ಪಶ್ಚಾತ್ತಾಪಪಟ್ಟ. ಇನ್ನು ಲೋಕದಲ್ಲಿ ಸತಿಯ ಭಕ್ತಿಗೆ ವಶನಾದ ಪತಿಯು ಸತಿಯನ್ನು ಮನಃಪೂರ್ವಕವಾಗಿ ರಕ್ಷಿಸುವುದು ಶಾಸ್ತ್ರ ಮತ್ತು ಅನುಭವಸಿದ್ಧ. ಪತಿಗಳ ಎದುರಲ್ಲಿ ದುಷ್ಟ ದುಃಶಾಸನನಿಂದ ಮಾನಹಾನಿಗೊಳಪಟ್ಟ ದ್ರೌಪದಿಯ ಭಕ್ತಿಗೆ ವಶನಾದ ದ್ವಾರಕಾವಾಸಿ ಶ್ರೀಕೃಷ್ಣನೇ ಅಕ್ಷಯಾಂಬರವನ್ನು ಕೊಟ್ಟು ಮಾನರಕ್ಷಿಸಿದನು. ಹೀಗೆ ಎಲ್ಲಿನೋಡಿದಾಗ್ಯೂ ಯಾವ ಅವಸ್ಥೆಯಲ್ಲಿಯೂ ಬೇಕಾದ್ದನ್ನು ಕೊಟ್ಟು ರಕ್ಷಿಸುವವನು ಶ್ರೀಹರಿ ಒಬ್ಬನೇ. ಆದ್ದರಿಂದ ಸಮಸ್ತ ಬಂಧುಗಳಲ್ಲಿರುವ ಸ್ನೇಹಕ್ಕಿಂತಲೂ ಅಧಿಕವಾದ ಮತ್ತು ಯಾವ ಕಾಲದಲ್ಲಿಯೂ ಯಾವ ಅವಸ್ಥೆಯಲ್ಲಿಯೂ ಲೋಪವಿಲ್ಲದ ಅವಿಚ್ಛಿನ್ನವಾದ ತನಗೆ ಪ್ರಿಯತಮಗಳೆಂದು ಯಾವುಯಾವುಗಳನ್ನು ತಿಳಕೊಂಡಿದ್ದಾನೋ ಅವುಗಳಲ್ಲಿರುವದಕ್ಕಿಂತಲೂ ಅಧಿಕವಾದ ಸ್ನೇಹವನ್ನು ಈತನಲ್ಲಿ ಮಾಡಬೇಕು. ಇದೇ ಅರ್ಥವನ್ನು ''ನಿರವಧಿಕಾನಂತಾನವದ್ಯಕಲ್ಯಾಣಗುಣತ್ವಜ್ಞಾನಪೂರ್ವಕ ಸ್ವಾತ್ಮಾತ್ಮೀಯ- ಸಮಸ್ತ ವಸ್ತುಭ್ಯೋಽನೇಕಗುಣಾಧಿಕಃ ಅಂತರಾಯಸಹಸ್ರೇಣಾಪ್ಯಪ್ರತಿಬದ್ಧಃ ನಿರಂತರಸ್ನೇಹಪ್ರವಾಹಃ ಭಕ್ತಿಃ'' ಎಂದು ಟೀಕಾಕೃತ್ಪಾದರು ತಮ್ಮ ಸುಧಾಗ್ರಂಥದಲ್ಲಿ ಅಪ್ಪಣೆಕೊಡಿಸಿದ್ದಾರೆ. ಭಕ್ತಿಯೇ ಮೋಕ್ಷಕ್ಕೆ ಪ್ರಧಾನಕಾರಣವೆನ್ನುವುದನ್ನು ''ವ್ಯಾಧಸ್ಯಾಚರಣಂ'' ''ಭಕ್ತ್ಯಾತುಷ್ಯತಿ ಕೇವಲಂ ನತು ಗುಣೈಃ ಭಕ್ತ್ಯೈಕತುಷ್ಟೋ ಹರಿಃ'' ಎಂದು ನಿರೂಪಿಸಿದ್ದಾರೆ. ಆದಕಾರಣ ಫಲೇಚ್ಛಾರಹಿತವಾದ ಭಕ್ತಿಯನ್ನು ಶ್ರೀಹರಿಯಲ್ಲಿ ಮಾಡಿ ಪುರುಷಾರ್ಥಭಾಜನರಾಗಬೇಕು.

## ಪ್ರಮಾಣತ್ರಯಸ್ವರೂಪನಿರೂಪಣ

ಪ್ರಮಾಣವೆಂದರೆ ಯಥಾರ್ಥಜ್ಞಾನಸಾಧನವೆಂದರ್ಥ. ಅದು ಮೂರು ವಿಧವಾದದ್ದು. ಪ್ರತ್ಯಕ್ಷ ಅನುಮಾನ ಆಗಮವೆಂದು. ಪ್ರತ್ಯಕ್ಷಪ್ರಮಾಣವು ಚಕ್ಷುಸ್ಸು ಘ್ರಾಣ, ರಸನ, ಶ್ರೋತ್ರ, ತ್ವಕ್, ಮನಸ್ಸು, ಹೀಗೆ ಆರುವಿಧ. ಆ ಪೈಕಿ ಮನಸ್ಸು ಎಲ್ಲ ಜ್ಞಾನಕ್ಕೂ ಕಾರಣಕೋಟಿಯಲ್ಲಿ (ಕಾರಣವಾದವುಗಳಲ್ಲಿ) ಸೇರುವುದು. ಈ ಆರು ಇಂದ್ರಿಯಗಳಿಂದ ಹುಟ್ಟುವ ಜ್ಞಾನವು ಆರು ವಿಧವಾದದ್ದು. ಚಕ್ಷುರಿಂದ್ರಿಯವು ರೂಪಜ್ಞಾನವನ್ನು ತಂದುಕೊಡುವುದು. ಯಾವ ಇಂದ್ರಿಯದಿಂದ ಯಾವ ವಸ್ತುವಿನ ಜ್ಞಾನವು ಬರುವುದೋ ಅದು ಅದಕ್ಕೆ ವಿಷಯವೆಂದು ಹೇಳುವರು. ಘ್ರಾಣಕ್ಕೆ ಗಂಧವಿಷಯ, ರಸನಕ್ಕೆ ರಸ, ತ್ವಗಿಂದ್ರಿಯಕ್ಕೆ ಸ್ಪರ್ಶ, ಶ್ರವಣೇಂದ್ರಿಯಕ್ಕೆ ಶಬ್ದ, ಮನ ಇಂದ್ರಿಯಕ್ಕೆ ಸರ್ವವೂ ಹೀಗೆ ಆರುವಿಧಜ್ಞಾನಗಳು. ಸಾಮಾನ್ಯವಾಗಿ ಇಂದ್ರಿಯಗಳು ವಸ್ತುವಿಷಯಕ ಯಥಾರ್ಥಜ್ಞಾನವನ್ನೇ ತಂದು ಕೊಡುವುವು. ದೋಷವಿದ್ದರೆ ಯಥಾರ್ಥಜ್ಞಾನವನ್ನು ತಂದುಕೊಡುವುದಿಲ್ಲ. ದೋಷವು ಎರಡು ವಿಧವಾದದ್ದು. ಅರ್ಥಗತ ಇಂದ್ರಿಯಗತವೆಂದು. ಚಕ್ಷುರೂಪವಾದ ಇಂದ್ರಿಯಗತದೋಷವೆಂದರೆ ಅತಿಸಾಮೀಪ್ಯ ಅತಿದೂರತ್ವರೂಪವಾದುದು. ಹೀಗೆ ಎಲ್ಲಾ ಇಂದ್ರಿಯಗಳಲ್ಲಿಯೂ ಇಂದ್ರಿಯಗಳ ವಿಷಯಗಳಲ್ಲಿಯೂ ದೋಷಗಳನ್ನು ತಿಳಿಯತಕ್ಕದ್ದು. ಹ್ಯಾಗೆ ತಿಂದ ಅನ್ನವು ಭೋಕ್ತೃ ಪುರುಷನಲ್ಲಿ ಜ್ವರಾದಿರೂಪದೋಷ ಇಲ್ಲದಿದ್ದರೆ ಹಿತಕರವೋ ದೋಷವಿದ್ದರೆ ಅಹಿತಕರವೋ ಹಾಗೆಯೇ ಅನ್ನದಲ್ಲಿ ವಿಷಮಿಶ್ರಿತತ್ವಾದಿ ದೋಷವಿಲ್ಲದಿದ್ದರೆ ಹಿತಕರವೋ ದೋಷವಿದ್ದರೆ ಅದೇ ಅಹಿತಕರವೋ. ಹಾಗೆಯೇ ಇಂದ್ರಿಯ ಮತ್ತು ವಿಷಯಗಳಲ್ಲಿ ದೋಷವಿಲ್ಲದಿದ್ದಲ್ಲಿ ಯಥಾರ್ಥಜ್ಞಾನವೂ ದೋಷವಿದ್ದಲ್ಲಿ ಭ್ರಮಾತ್ಮಕಜ್ಞಾನವೂ ಬರುವುದು.

ಅನುಮಾನವೆಂದರೆ, ಒಂದು ದಿಕ್ಕಿನಲ್ಲಿ ಕಾರಣಕಾರ್ಯಗಳು ಜೊತೆಯಲ್ಲಿ ಇರುವುದನ್ನು ನೋಡಿ ಇನ್ನೊಂದು ದಿಕ್ಕಿನಲ್ಲಿ ಕಾರ್ಯದಿಂದ

ಕಾರಣವನ್ನು ಊಹಿಸುವುದು. ಅಡಿಗೆಮನೆಯಲ್ಲಿ ಕೆಳಗೆ ಬೆಂಕಿಯಿರುವುದನ್ನೂ ಮೇಲೆ ಹೊಗೆ ಇರುವುದನ್ನೂ ನೋಡಿ ಕಾಡಿಗೆ ಹೋದ ಮನುಷ್ಯನು ಬೆಟ್ಟದ ಮೇಲೆ ಹೊಗೆಯನ್ನು ನೋಡಿದರೆ ಅಲ್ಲಿಯೇ ಕೆಳಗೆ ಬೆಂಕಿಯನ್ನು ಊಹಿಸುವನು. ಇದೇ ಅನುಮಾನವು. ಇದರಲ್ಲಿಯೂ ಊಹೆಗೆ ಕಾರಣವಾದದ್ದು ದುಷ್ಟವಾದರೆ ಊಹಿಸಿದ ಜ್ಞಾನವು ಯಥಾರ್ಥವಾಗುವುದಿಲ್ಲ. ಮಂಜನ್ನು ನೋಡಿ ಭ್ರಮಿಸಿ ( ಧೂಮವೆಂದು ತಿಳಿದು) ಅಲ್ಲಿ ಬೆಂಕಿ ಉಂಟೆಂದು ಊಹಿಸಿದರೆ ಅದರಿಂದಬರುವ ಕೆಳಗೆ ಬೆಂಕಿ ಉಂಟೆಂಬ ಜ್ಞಾನವು ಯಥಾರ್ಥವಾಗುವುದಿಲ್ಲ. ಹೀಗೆ ಊಹಾತ್ಮಕ ಜ್ಞಾನವು ಪ್ರತ್ಯಕ್ಷವನ್ನಾಗಲೀ ಶಬ್ದವನ್ನಾಗಲೀ ಆಶ್ರಯಿಸಿಕೊಂಡು ಇರುವ ಕಾರಣ ಇದಕ್ಕೆ ಅನುಮಾನ ( ಅನುಸರಿಸಿಕೊಂಡಿರುವ ಜ್ಞಾನಸಾಧನ)ವೆಂದೆನ್ನುವರು.

ಶಬ್ದವು ಯಥಾರ್ಥಜ್ಞಾನಸಾಧನವು. ಅದನ್ನೇ ಆಗಮವೆಂದೆನ್ನುವರು. ಈ ಶಬ್ದವು ಅಪೌರುಷೇಯವಾದ ಶಬ್ದವೆಂದರೆ ವೇದ. ಪೌರುಷೇಯವಾದ ಶಬ್ದವೆಂದರೆ ಶಾಸ್ತ್ರಾದಿರೂಪವಾದದ್ದು. ಇದರಲ್ಲಿ ವೇದವು ಅಪೌರುಷೇಯವಾದ ಕಾರಣ ದೋಷವಿಲ್ಲದ್ದು. ನಿಯಮೇನ ಯಥಾರ್ಥಜ್ಞಾನ ಸಾಧನವು. ಹಾಗಾದರೆ ತತ್ವಮಸಿ ಎಂಬ ಒಂದೇ ವಾಕ್ಯದಿಂದ ಈಶ್ವರನೇ ಜೀವನೆಂಬ ಅರ್ಥವನ್ನು ಅದ್ವೈತಿಗಳೂ, ಈಶ್ವರನ ಸದೃಶನು ಜೀವನೆಂಬ ಅರ್ಥವನ್ನು ದ್ವೈತಿಗಳೂ ದ್ವಿವಿಧವಾಗಿ ಹೇಗೆ ಹೇಳುವರೆಂದು ಶಂಕಿಸಬಹುದು. ಅದು ಶಬ್ದಗತವಾದ ದೋಷದಿಂದಲ್ಲ. ಮತ್ತೆ ಶಬ್ದಕ್ಕೆ ಅರ್ಥಮಾಡುವ ಪುರುಷನ ಶಬ್ದದ ತಾತ್ಪರ್ಯಲಿಂಗದ ಅಜ್ಞಾನ ಮೂಲಕವು. ಇನ್ನು ಪೌರುಷೇಯಶಬ್ದವು ಪ್ರಮಾಣ ಅಪ್ರಮಾಣವಾಗಿ ಎರಡು ವಿಧವು. ಆಪ್ತನಾದ ಪುರುಷನಿಂದ ಉಚ್ಚರಿತವಾದ ಶಬ್ದವು ಪ್ರಮಾಣವು. ಉಚ್ಚಾರಣ ಮಾಡುವ ಪುರುಷನಲ್ಲಿ ಹೇಳುವ ವಸ್ತುವಿನ ಯಥಾರ್ಥಜ್ಞಾನ, ಅದನ್ನು ತಿಳಿಸಬೇಕೆಂಬ ಇಚ್ಛಾ, ಮಾತ್ಸರ್ಯ ಇಲ್ಲದೇ ಇರೋಣ, ಇಂದ್ರಿಯಾದಿಗಳಲ್ಲಿ ಶಕ್ತಿ ಈ ನಾಲ್ಕು ಗುಣಗಳು ಇದ್ದರೆ ಅವನು ಆಪ್ತನಾಗುವನು. ಈ ಗುಣಗಳಿಲ್ಲದಿದ್ದರೆ ಅವನು ಅನಾಪ್ತನು. ಈ ಪೌರುಷೇಯಾಪೌರುಷೇಯ ಶಬ್ದಗಳ ಪೈಕಿ ವೇದರೂಪವಾದ ಅಪೌರುಷೇಯ ಆಗಮವು ಕಣ್ಣಿಗೆ ತೋರದಿದ್ದ ವಸ್ತುವಿನ ಜ್ಞಾನವನ್ನು ಹುಟ್ಟಿಸುವುದರಲ್ಲಿ ಶ್ರೇಷ್ಠವಾದುದು. ವೇದವು ಅಪೌರುಷೇಯವೆಂದಾದಮೇಲೆ ಆ ಪುರುಷನ ಬುದ್ಧಿದೋಷ ಪ್ರಯುಕ್ತದೋಷವು ಬರುವುದು. ಈ ವಿಷಯದಲ್ಲಿ ವಿಚಾರಮಾಡುವಾಗ ''ವಾಚಾ ವಿರೂಪ ನಿತ್ಯಯಾ'', ''ನಿತ್ಯಾ ವಾವ ಶ್ರುತಯಃ'' 'ನಿತ್ಯಯಾऽನಿತ್ಯಯಾ ಸ್ತೌಮಿ' 'ನಿತ್ಯಾ ವೇದಾಃ ಸಮಸ್ತಾಶ್ಚ' ಎಂಬ ಅಲ್ಲಲ್ಲಿರುವ ವೇದವಾಕ್ಯಗಳು ವೇದಕ್ಕೆ ನಿತ್ಯತ್ವವನ್ನು ಸ್ಪಷ್ಟವಾಗಿ ಹೇಳುತ್ತವೆ. ಅದೂ ಅಲ್ಲದೇ ಕೆಲವರು ವೇದಕ್ಕೆ ಪ್ರಾಮಾಣ್ಯವನ್ನೇ ಒಪ್ಪುವುದಿಲ್ಲ. ಈ ವಿಷಯದಲ್ಲಿ ವಿಚಾರಮಾಡಿದರೆ ಒಂದು ನ್ಯಾಯವನ್ನು ನಾವು ನೋಡುವ. ಯಾವುದಾದರೂ ಒಂದು ಪ್ರಮೇಯದಲ್ಲಿ ವಿವಾದಬಂದಾಗ ಬಹುಮತದಿಂದ ತೀರ್ಮಾನಿಸುವುದು ಅನಾದಿಯಿಂದ ಬಂದಿದೆ. ಶಾಸ್ತ್ರಕಾರರಲ್ಲಿ ವೇದಾಂತಿ, ಸಾಂಖ್ಯ, ಮೀಮಾಂಸಕ, ನೈಯಾಯಿಕ, ಚಾರ್ವಾಕ, ಬೌದ್ಧ ಈ ಆರು ಮಂದಿ ಪ್ರಸಿದ್ಧರು. ಈ ಪೈಕಿ ಬೌದ್ಧ ಚಾರ್ವಾಕರನ್ನು ಬಿಟ್ಟು ಉಳಿದ ಜನರು ವೇದವನ್ನು ಅಪೌರುಷೇಯಪ್ರಮಾಣವೆಂದು ಒಪ್ಪುವರು. ಈ ವಿಷಯದಲ್ಲಿ ಬಹುಮತಸಿದ್ಧವಾದ ಅಪೌರುಷೇಯತ್ವವು ಅಂಗೀಕಾರ್ಯವು. ಆ ಪೈಕಿ ನೈಯಾಯಿಕನೊಬ್ಬನು ವೇದವು ಪ್ರಮಾಣ ಆದರೆ ಈಶ್ವರಕೃತವೆಂದು ಮಾತ್ರ ಹೇಳುವನು. ಅದು ಯುಕ್ತಿವಿರುದ್ಧವು. ಈಶ್ವರನು ಸರ್ವಜ್ಞನೆಂದು ''ಯಃ ಸರ್ವಜ್ಞಃ ಸರ್ವವಿತ್'' ಎಂಬ ಶ್ರುತಿಸಿದ್ಧವು. ಸರ್ವಜ್ಞನಾದ ಈಶ್ವರನು ಸೃಷ್ಟಿಯ ಆದಿಕಾಲದಲ್ಲಿ ಮಾಡಿದ ವೇದವನ್ನು ಮರೆಯಲಿಕ್ಕಿಲ್ಲವಷ್ಟೆ. ಪುನಃ ಸೃಷ್ಟಿಯ ಕಾಲಕ್ಕೆ ಬೇರೆ ವೇದವನ್ನು ಯಾಕೆ ಮಾಡುವನು? ಬಂದಿಗಳು ರಾಜನನ್ನು ಸ್ತುತಿಪಾಠದಿಂದ ನಿದ್ರಿತನನ್ನು ಹೇಗೆ ಎಚ್ಚರಿಸುವರೋ ಅದೇ ರೀತಿ ಸೃಷ್ಟಿಯ ಆದಿಕಾಲದಲ್ಲಿ ವೇದಾಭಿಮಾನಿ ದುರ್ಗಾದೇವಿಯು ವೇದವಾಕ್ಯದಿಂದ ನಾರಾಯಣನನ್ನು ಸ್ತುತಿಸಿದ್ದಾಳೆಂದು ಭಾಗವತ- ಕಾರರು ನಿರೂಪಿಸಿರುವರು. ಈಶ್ವರ ಪ್ರಬೋಧವಾಗದೇ ಇರುವ ಕಾಲದಲ್ಲಿ ಈಶ್ವರ ಸೃಷ್ಟವಾಗಿದ್ದರೆ ವೇದವಿರಲು ಶಕ್ಯವಿಲ್ಲ. ಆದ ಕಾರಣ ನೈಯಾಯಿಕರು ಈಶ್ವರಕೃತವೆಂದು ಹೇಳುವುದು ಸರಿಯಲ್ಲ. ಇನ್ನು 'ನಾಮೈವಾಸ್ಯ ಮಹಿಮಾನ ಮಾಚಷ್ಟೇ' ಎಂಬ ವಾಕ್ಯದಲ್ಲಿ ಹೇಳಿದಂತೆ 'ವೇದ' ಶ್ರುತಿಗಳೆಂಬ ಶಬ್ದಗಳೇ ವೇದಕ್ಕೆ ನಿತ್ಯತ್ವ ಪ್ರಮಾಣಗಳನ್ನೂ ಹೇಳುವವು. ಎಲ್ಲರಿದ್ದಲೂ ಶ್ರುತವೇ ಆದದ್ದು. ಆದುದರಿಂದಲೇ ಶ್ರುತಿಯೆಂದು ಹೆಸರು. ಎಲ್ಲರ ಜ್ಞಾನಕ್ಕೂ ಕಾರಣವಾದ ಕಾರಣ ವೇದವೆಂದು ಹೇಳುವುದು. ಇನ್ನು ಆದ್ಯನಾದ ಚತುರ್ಮುಖನಿಗೆ ಹಯಗ್ರೀವಾವತಾರದಲ್ಲಿ ವೇದವನ್ನುಪದೇಶಕೊಟ್ಟದ್ದು ಇತಿಹಾಸ ಪ್ರಸಿದ್ಧವು. ಈಶ್ವರನು ಹೊಸದಾಗಿ ವೇದವನ್ನು ಮಾಡಿ ಉಪದೇಶಕೊಟ್ಟದ್ದಾದರೆ ಆ ಹಯಗ್ರೀವನ ಕೈಯಲ್ಲಿ ಪುಸ್ತಕ ಯಾಕೆ? ಹಯಗ್ರೀವದೇವರ ಪ್ರತಿಮೆಯ ಹಸ್ತದಲ್ಲಿ ಪುಸ್ತಕವಿರು- ವುದು ಸರ್ವಾನುಭವಸಿದ್ಧವು.

ಇನ್ನು ವೇದವು ಯಾರಿಂದಾದರೂ ರಚಿತವಾದದ್ದಾದರೆ ಅತ್ಯುತ್ತಮವಸ್ತುವು ಆಗದೇ ಇರಲಿಕ್ಕೂ ಸಾಕು. ಹಯಗ್ರೀವಾಸುರನು ಸೃಷ್ಟಿಯ ಆದಿಕಾಲದಲ್ಲಿ ಬ್ರಹ್ಮದೇವರ ಕೈಯಿಂದ ವೇದವನ್ನಪಹರಿಸಿದ್ದು ಸುಪ್ರಸಿದ್ಧವಷ್ಟೆ? ಗುರುರಾಜರು(ವಾದಿರಾಜರು) ಅಪ್ಪಣೆ ಕೊಡಿಸಿದ

''ಸುವಿತ್ತಸ್ಯೈವ ಚೋರೋಽಸ್ತಿ ದುರ್ವಿತ್ತಸ್ಯ ನ ತಸ್ಕರಃ'' ಎಂಬ ವಾಕ್ಯದಂತೆ ಪಂಚರಾತ್ರಾದಿಗ್ರಂಥಗಳಿರುವಾಗ ವೇದವನ್ನು ಅಪಹರಿಸಿದ್ದು ಅಪೌರುಷೇಯತ್ವರೂಪ ಮಹಿಮಾಸಾಧಕವು.

ಇನ್ನು ಶ್ರೀಪರಮಾತ್ಮನು ಪ್ರತ್ಯಕ್ಷದಿಂದ ತಿಳಿಯಲು ಶಕ್ಯನಲ್ಲ. ಅವನು ನಮ್ಮ ಈ ಚರ್ಮಚಕ್ಷುಸ್ಸಿಗೆ ವಿಷಯನಾಗುವುದಾದರೆ ಮಹಾಮಹಾಋಷಿಗಳು ಶೀತಾತಪಾದಿಗಳನ್ನು ಸಹಿಸಿಕೊಂಡು ನಿದಾಘಕಾಲದಲ್ಲಿ ಪಂಚಾಗ್ನಿಮಧ್ಯದಲ್ಲಿಯೂ ವರ್ಷಕಾಲಾದಿಗಳಲ್ಲಿ ಜಲಬಾಧೆಯನ್ನು ಸಹಿಸಿಕೊಂಡು ಜಲಮಧ್ಯದಲ್ಲಿಯೂ ಸಹಸ್ರಾರು ವರ್ಷಗಳಲ್ಲಿ ಆತನ ಪ್ರತ್ಯಕ್ಷಕ್ಕಾಗಿ ಯಾಕೆ ತಪಸ್ಸನ್ನಾಚರಿಸಿದರು. ''ಕಿಂ ಮೂಢಾಃ ಪೂರ್ವಸೂರಯಃ?'' ಅಷ್ಟು ನಮ್ಮ ಪೂರ್ವಿಕರು ಅವಿಚಾರಿಗಳೇ? ಇನ್ನು ಗೀತೆಯಲ್ಲಿ ಇಂದ್ರಾವತಾರನಾದ ಅರ್ಜುನನು ಶ್ರೀಕೃಷ್ಣನನ್ನು ''ದ್ರಷ್ಟುಮಿಚ್ಛಾಮಿ ತೇ ರೂಪಂ ............ಐಶ್ವರಂ ಪುರಷೋತ್ತಮಂ'' ಎಂದು ಜಗನ್ನಿಯಾಮಕವಾದ ರೂಪವನ್ನು ನೋಡಲಿಚ್ಛಿಸುವೆನೆಂದು ಪ್ರಾರ್ಥಿಸಿದಾಗ 'ನ ತು ಮಾಂ ಶಕ್ಯಸೇ ದ್ರಷ್ಟುಮನೇನೈವ ಸ್ವಚಕ್ಷುಷಾ' ಎಂದು ಈ ಚರ್ಮಚಕ್ಷುಸ್ಸಿನಿಂದ ನನ್ನ ದಿವ್ಯರೂಪವನ್ನು ನೋಡಲು ಶಕ್ಯವಿಲ್ಲವೆಂದು ಹೇಳಿ ದಿವ್ಯಂ ದದಾಮಿ ತೇ ಚಕ್ಷುಃ ಪಶ್ಯ ಮೇ ಯೋಗಮೈಶ್ವರಂ' ಎಂದು ತನ್ನ ಯೋಗ ಬಲದಿಂದ ದಿವ್ಯದೃಷ್ಟಿಯನ್ನು ಕೊಟ್ಟು ತನ್ನ ಅಲೌಕಿಕ ರೂಪವನ್ನು ತೋರಿಸಿದ್ದಾನೆಂದು ತೋರುತ್ತದೆ. ಹೀಗೆ ದೇವಾಂಶಸಂಭೂತನಾದ ಅರ್ಜುನನಿಗೆ ಶ್ರೀಕೃಷ್ಣನ ಮಹಾರೂಪವನ್ನು ನೋಡಲು ಶಕ್ಯವಿಲ್ಲವೆಂದಾದ ಮೇಲೆ ನಮ್ಮಂತಹವರ ದೃಷ್ಟಿಗೆ ಗೋಚರವಿಲ್ಲವೆಂದು ಹೇಳಬೇಕಾಗಿಲ್ಲ.

ಇನ್ನು ''ನೈಷಾ ತರ್ಕೇಣ ಮತಿರಾಪನೇಯಾ'' ಎಂಬ ಶ್ರುತಿಯು ಈಶ್ವರನ ಜ್ಞಾನವನ್ನು ಅನುಮಾನದಿಂದ ಸ್ವತಂತ್ರವಾಗಿ ಪಡೆಯಲಿಕ್ಕಾಗಲೀ ನಿರಾಕರಿಸಲಿಕ್ಕಾಗಲೀ ಶಕ್ಯವಿಲ್ಲವೆಂದು ಹೇಳಿರುತ್ತದೆ. ಇನ್ನೊಂದು ದಿಕ್ಕಿನಲ್ಲಿ 'ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ' ಎಂದು ಚಕ್ಷುರಿಂದ್ರಿಯ ಮತ್ತು ವಾಗಿಂದ್ರಿಯಕ್ಕೆ ಈಶ್ವರನು ಅಗೋಚರನೆಂದು ಹೇಳಿದೆ.

''ವೇದಾ ಹ್ಯೇವೈನಂ ವೇದಯಂತಿ'' ''ನಾರಾಯಣಪರಾ ವೇದಾಃ'' ಎಂಬ ಶ್ರುತಿಗಳು ಸ್ಪಷ್ಟವಾಗಿ ವೇದೈಕವೇದ್ಯತ್ವವನ್ನು ಪರಮಾತ್ಮನಿಗೆ ಹೇಳಿರುತ್ತವೆ. ಇನ್ನು ಗೀತೆಯಲ್ಲಿ ''ವೇದೈಶ್ಚ ಸರ್ವೈಃ ಅಹಮೇವ ವೇದ್ಯೋ'' ಇತ್ಯಾದಿ ವಾಕ್ಯಗಳಿಂದ ತನಗೆ ವೇದೈಕ ಪ್ರತಿಪಾದ್ಯತ್ವವನ್ನು ನಿರೂಪಿಸಿದ್ದಾನೆ. ಆದುದರಿಂದ ಶ್ರೀನಾರಾಯಣನು ವೇದೈಕ ಪ್ರತಿಪಾದ್ಯನು.

**ಪ್ರತಿಯೊಬ್ಬರಿಗೂ ದುಃಖಾಸಂಭಿನ್ನವಾದ(ಸ್ವಲ್ಪವೂ ದುಃಖವಿಲ್ಲದ) ಮೋಕ್ಷಸುಖವು ಪ್ರಾರ್ಥ್ಯವು. ಆದಕಾರಣ ''ಅಥವಾ ಸತತಂ ಶಾಸ್ತ್ರವಿಮರ್ಶೇನ ಭವಿಷ್ಯತಿ'' ಎಂದು ಆಚಾರ್ಯರು ಅಪ್ಪಣೆ ಕೊಟ್ಟಿರುವರು. ಪ್ರತಿಯೊಬ್ಬನೂ ಶಾಸ್ತ್ರಾರ್ಥಭೂತವಾದ ಈ ಸಿದ್ಧಾಂತೋಪದೇಶದಲ್ಲೇ ಕಾಲವನ್ನು ಉಪಯೋಗಿಸಿಕೊಂಡು ಆ ತತ್ವವನ್ನು ಮನದಲ್ಲಿ ದೃಢೀಕರಿಸಿಕೊಂಡು ಪುರುಷಾರ್ಥಭಾಜಕನಾಗಬೇಕು.**

**||ಇತಿ ಶಂ||**

ಶ್ರೀಲಕ್ಷ್ಮೀಂದ್ರತೀರ್ಥಾಂತರ್ಗತ ಶ್ರೀಭಾರತೀರಮಣಸುಮಧ್ವಹಂಸಾಂತರ್ಯಾಮಿನ್ ಶ್ರೀಲಕ್ಷ್ಮೀಹಯಗ್ರೀವಾತ್ಮಕ ಶ್ರೀಕೃಷ್ಣಾರ್ಪಣಮಸ್ತು.

## ಬ್ರಹ್ಮಸೂತ್ರಾಣಾಂ ಭಗವತಾ ಶ್ರೀಮಧ್ವಾಚಾರ್ಯೇಣ ಕೃತ ಭಾಷ್ಯಾತ್ ಪ್ರತೀಯಮಾನ ಸಿದ್ಧಾಂತಃ

**ಪ್ರಶ್ನೆ1)** ಜಗತ್ಕಾರಣಂ ಕಿಂ ? :: ವಿಷ್ಣುಃ ಸ ಏವ ಪರಂ ಬ್ರಹ್ಮ!!

(ಜಗತ್ತಿಗೆ ಕಾರಣ ಯಾವುದು ? ಉ:- ವಿಷ್ಣುವೇ ಕಾರಣ . ಅವನೇ ಪರಬ್ರಹ್ಮ. )

**ಪ್ರಶ್ನೆ2)** ವಿಷ್ಣುರಿತಿ ಕಥಂ ಜ್ಞಾತವ್ಯಂ ? :: ಶಾಸ್ತ್ರಾತ್।

(ವಿಷ್ಣುವೆಂದು ತಿಳಿದು ಬರುವುದು ಹೇಗೆ ? ಶಾಸ್ತ್ರಗಳಿಂದ.)

**ಪ್ರಶ್ನೆ3)** ಕಾನಿ ಶಾಸ್ತ್ರಾಣಿ ಪ್ರಮಾಣಾನಿ? :: ಸರ್ವೇವೇದಾಃ ಭಾರತಂ ಪಂಚರಾತ್ರಂ ಮೂಲರಾಮಾಯಣಂ ಏತಾನಿ ಶಾಸ್ತ್ರಾಣಿ. ತೇಷಾಂ ಅನುಕೂಲಾನಿ ಇತರ ಶಾಸ್ತ್ರಾಣಿ ಚ ಪ್ರಮಾಣಾನಿ, ನೇತರಾಣಿ।

(ಯಾವ ಶಾಸ್ತ್ರಗಳು ಪ್ರಮಾಣಗಳು ? ಉ:- ನಾಲ್ಕು ವೇದಗಳು, ಭಾರತ, ಪಂಚರಾತ್ರ, ಮೂಲರಾಮಾಯಣ ಇವುಗಳು ಮತ್ತು ಅವುಗಳಿಗೆ ಅವಿರುದ್ಧವಾದವು ಪ್ರಮಾಣಗಳು. ಬೇರೆಯವಲ್ಲ. )

**ಪ್ರಶ್ನೆ4)** ಅನ್ಯಶಾಸ್ತ್ರಾಣಿ ಕೇನ ರಚಿತಾನಿ ? ಕಸ್ಮಾತ್ ತಾನಿ ಅಪ್ರಮಾಣಾನಿ ? :: ಅಯೋಗ್ಯ ಜೀವಾನಾಂ ಮೋಹನಾರ್ಥಂ

ವಿಷ್ಣೋರಾಜ್ಞಯಾ ತಾನಿ ಶಾಸ್ತ್ರಾಣಿ ರುದ್ರೇಣ ಕೃತಾನಿ ಕಾರಿತಾನಿ ಚ।

(ಅಯೋಗ್ಯ ಜೀವರಿಗೆ ಮೋಹಿಸುವುದಕ್ಕಾಗಿ ವಿಷ್ಣುವಿನ ಆಜ್ಞೆಯಿಂದಲೇ ರುದ್ರದೇವರು ಅಂತಹ ಶಾಸ್ತ್ರಗಳನ್ನು ಮಾಡಿದ್ದಾರೆ. ಮತ್ತೆ ಕೆಲವು ಮಾಡಿಸಿದ್ದಾರೆ.)

**ಪ್ರಶ್ನೆ5)** ವೇದೇ ಅನೇಕ ಪರಸ್ಪರ ವಿರೋಧಾಃ ಸಂತಿ, ಏಕತ್ರ ಆಕಾಶಃ ಜಗತ್ಕಾರಣಮಿತಿ ಉಕ್ತಂ ಅನ್ಯತ್ರ ಪರಮಾತ್ಮೇತಿ ; ಏಕತ್ರ ಪೃಥಿವೀಸ್ವರ್ಗಾದಿ ಆಧಾರಃ ರುದ್ರ ಇತಿ ಅನ್ಯತ್ರ ವಿಷ್ಣುರಿತಿ ಉಕ್ತಂ। ಇತ್ಯಾದಿ ಪರಸ್ಪರವಿರೋಧಾಃ ಬಹವಃ ಸಂತಿ। ಏತಾದೃಶ ವೇದಃ ಕಥಂ ಪ್ರಮಾಣಮಿತಿ ಅಂಗೀಕರ್ತವ್ಯಃ ? :: **ಉ:-** ಯದ್ಯಪಿ ವೇದೇ ಆಪಾತತಃ ಪರಸ್ಪರಂ ವಿರೋಧಾಃ ಪ್ರತೀಯಂತೇ। ತಥಾಪಿ ಪೂರ್ವಾಪರವಾಕ್ಯಪರ್ಯಾಲೋಚನಯಾ ಉಪಕ್ರಮ ಉಪಸಂಹಾರಾದಿಭಿಃ ವಿಮರ್ಶೀಕೃತೇ ವೇದೇ ಏಕವಾಕ್ಯತಾ ಸಿಧ್ಯತಿ। ಯುಷ್ಮಾಭಿಃ ಉಕ್ತಾಃ ಆಕಾಶರುದ್ರಾದಿ ಶಬ್ದಾಃ ವಿಷ್ಣುಪರಾಃ ನೇತರಪರಾಃ। ಮುಖ್ಯವೃತ್ಯಾಸರ್ವೇಶಬ್ದಾಃ ಪರಮಾತ್ಮ ವಾಚಕಾಃ। ಯತ್ರ ಮುಖ್ಯಾರ್ಥಗ್ರಹಣೇ ಬಾಧಕಂ ನ, ತತ್ರ ಮುಖ್ಯಾರ್ಥ ಏವ ಗ್ರಾಹ್ಯಃ। ಯತ್ರ ಮುಖ್ಯಾರ್ಥಗ್ರಹಣೇ ಬಾಧಕಂ ತತ್ರ ಅಮುಖ್ಯಾರ್ಥಗ್ರಹಣಂ ಯುಕ್ತಂ।

( ವೇದದಲ್ಲಿಪರಸ್ಪರ ಅನೇಕವಿರೋಧಗಳು ಇವೆ, ಕೆಲವೆಡೆ ಆಕಾಶವು ಜಗತ್ತಿಗೆ ಕಾರಣ ಎಂದಿದೆ. ಕೆಲವೆಡೆ ವಿಷ್ಣುಕಾರಣ ಎಂದು, ಕೆಲವೆಡೆ ಸ್ವರ್ಗಪೃಥಿವ್ಯಾದಿಗಳಿಗೆ ರುದ್ರ ಆಧಾರ ಎಂದಿದ್ದರೆ, ಕೆಲವೆಡೆ ವಿಷ್ಣು ಎಂದು ಹೇಳಲಾಗಿದೆ. ಹೀಗೆ ಪರಸ್ಪರ ವಿರೋಧಗಳಿಗೆ ಇಂತಹ ವೇದ ಪ್ರಮಾಣ ಎಂದು ಹೇಗೆ ಸ್ವೀಕರಿಸುವುದು ? **ಉ:-** ವಾಸ್ತವಿಕವಾಗಿ ಮೇಲುನೋಟದಲ್ಲಿ ವೇದದಲ್ಲಿ ಪರಸ್ಪರ ವಿರೋಧ ಕಂಡುಬರುತ್ತದೆ. ಹಾಗಿದ್ದರೂ ಪೂರ್ವಾಪರವಾಕ್ಯಗಳನ್ನು ಆಲೋಚಿಸಿದಾಗ ಹಾಗೂ ಉಪಕ್ರಮ ಉಪಸಂಹಾರಾದಿಗಳನ್ನು ಕಂಡಾಗ ಒಂದೇ ರೀತಿಯ ಜ್ಞಾನವು ಸಿದ್ಧಿಸುತ್ತದೆ. ಇಲ್ಲಿ ಹೇಳಿದ ಆಕಾಶ, ರುದ್ರ ಇವೆಲ್ಲ ಶಬ್ದಗಳೂ ವಿಷ್ಣುವನ್ನೇ ಹೇಳುತ್ತವೆ ಹೊರತು ಬೇರೇ ಯಾರನ್ನೂ ಅಲ್ಲ. ಎಲ್ಲ ಶಬ್ದಗಳು ಮುಖ್ಯವೃತ್ತಿಯಿಂದ ವಿಷ್ಣುವನ್ನೇ ಹೇಳುತ್ತವೆ. ಎಂತಹ ಸ್ಥಳದಲ್ಲಿ ಮುಖ್ಯಾರ್ಥವನ್ನು ಹೇಳಲಿಕ್ಕೆ ತೊಂದರೆಇಲ್ಲವೋ ಅಲ್ಲಿ ಮುಖ್ಯಾರ್ಥವನ್ನೇ ಹೇಳಬೇಕು. ಎಲ್ಲಿ ಬಾಧಕವಿದೆಯೋ ಅಲ್ಲಿ ಅಮುಖ್ಯಾರ್ಥವಾದ ಅರ್ಥವನ್ನು ಹೇಳಬಹುದು.)

**ಪ್ರಶ್ನೆ6)** ವಿಷ್ಣುಃ ಜಗತ್ಕಾರಣಂ ಇತಿ ಭವದ್ಭಿರುಕ್ತಂ। ಸೃಷ್ಟೇಃ ಪೂರ್ವಂ ಜೀವಾಃ ಸಂತಿ ವಾ ನ ವಾ? :: ಸೃಷ್ಟೇಃ ಪೂರ್ವಂ ಜೀವಾಃ ಸಂತ್ಯೇವ। ಯಥಾ ಪರಮಾತ್ಮಾ ಅನಾದಿಃ ತಥಾ ಜೀವಾ ಅಪಿ ಅನಾದಯಃ। ಜೀವಾನಾಂ ಬಾಹ್ಯದೇಹಸಂಬಂಧಃ ಪರಮಾತ್ಮನಾ ಭವತಿ। ಸೈವ ಜೀವಸೃಷ್ಟಿಃ

(ವಿಷ್ಣು ಜಗತ್ತಿನ ಸೃಷ್ಟಿಕಾರಣ ಎಂದು ಹೇಳಿದಾಗ ಬರುವ ಪ್ರಶ್ನೆ ಸೃಷ್ಟಿಮಾಡಲು ಜೀವರು ಇದ್ದರೋ ಇಲ್ಲವೋ ? **ಉ:-** ಇದ್ದರು. ಪರಮಾತ್ಮನಂತೆ ಜೀವರೂ ಅನಾದಿ ನಿತ್ಯರು. ಹಾಗಾದರೆ ಜೀವನಿಗೆ ಸೃಷ್ಟಿಯೆಂದರೆ ಹೊರಗಿನ ದೇಹದ ಸಂಬಂಧ. )

**ಪ್ರಶ್ನೆ7)**ಸ್ವಪ್ನಾದಿಷು ದೃಷ್ಟದ್ರವ್ಯಾಣ್ಯಪಿ ಪರಮಾತ್ಮನಾ ಸೃಷ್ಟಾನಿ ವಾ ಮಾಯಾಕಲ್ಪಿತಾನಿ ವಾ? :: ತಾನ್ಯಪಿ ಪರಮಾತ್ಮಸೃಷ್ಟಾನಿ, ನ ಮಾಯಾಕಲ್ಪಿತಾನಿ। ತೇಷಾಂ ಸೃಷ್ಟಿಃ ವಿನಾಶಶ್ಚ ಪರಮಾತ್ಮನಾ ಭವತಿ।

(ಕನಸಿನಲ್ಲಿ ಕಂಡ ಪದಾರ್ಥಗಳನ್ನು ಪರಮಾತ್ಮ ಸೃಷ್ಟಿಸಿದನೋ ? ಅಥವಾ ಮಾಯೆಯಿಂದ ಕಲ್ಪಿತವೋ? **ಉ:-** ಅವುಗಳನ್ನೂ ಪರಮಾತ್ಮನೇ ಸೃಷ್ಟಿಸಿದ್ದು, ಮಾಯಾಕಲ್ಪಿತಗಳಲ್ಲ. ಅವುಗಳ ಸೃಷ್ಟಿ ಹಾಗೂ ನಾಶವನ್ನೂ ಭಗವಂತನೇ ಮಾಡುತ್ತಾನೆ. )

**ಪ್ರಶ್ನೆ8)** ತಥಾ ಸತಿ ಸ್ವಪ್ನ ಪ್ರತೀತಾಃ ಯಥಾರ್ಥಾ ವಾ? :: ಸ್ವಪ್ನ ದೃಷ್ಟಪದಾರ್ಥಾಃ ಸತ್ಯಾ ಏವ। ತಥಾಪಿ ಜಾಗ್ರತಿ ದೃಷ್ಟಪದಾರ್ಥ ಏವ ಅಯಂ ಇತಿ ಯತ್ ಜ್ಞಾನಂ ತತ್ ಭ್ರಮಾತ್ಮಕಂ।

(ಸ್ವಪ್ನದಲ್ಲಿ ಕಂಡ ಪದಾರ್ಥಗಳು ಸತ್ಯವೇ? **ಉ:-** ಅವು ಸತ್ಯವೇ. ಆದರೆ ಜಾಗ್ರದಾವಸ್ಥೆಯಲ್ಲಿ ಹೊರಗೆ ಕಂಡ ಪದಾರ್ಥಗಳೇ ಇವೆ ಯೆಂದು ತಿಳಿಯುವುದು ಭ್ರಮೆ.)

**ಪ್ರಶ್ನೆ9)** ಸೃಷ್ಟ್ಯಾ ಪರಮಾತ್ಮನಃ ಕಿಂ ಪ್ರಯೋಜನಮ್? :: ಪ್ರಯೋಜನಮ್ ನ। ಲೋಕೇ ಆನಂದೋದ್ರೇಕವತಃ ಪುರುಷಸ್ಯ ನೃತ್ಯಗಾನಾದಿವತ್ ಪ್ರಯೋಜನ ಅನಪೇಕ್ಷ್ಯೈವ ಸೃಷ್ಟಿಃ।

(ಜಗತ್ತಿನ ಸೃಷ್ಟಿಯಿಂದ ಪರಮಾತ್ಮನಿಗೆ ಏನು ಪ್ರಯೋಜನ ? **ಉ:-** ಪ್ರಯೋಜನ ಇಲ್ಲ. ಲೋಕದಲ್ಲಿ ತುಂಬ ಸಂತುಷ್ಟನಾದ ವ್ಯಕ್ತಿ ಹಾಡುವಂತೆ ಕುಣಿಯುವಂತೆ ಯಾವುದರ ಅಪೇಕ್ಷೆಯೂ ಇಲ್ಲದೇ ಲೀಲೆಯಂತೆ ಮಾಡುತ್ತಾನೆ. )

**ಪ್ರಶ್ನೆ10)** ಜೀವಾಃ ಪರಮಾತ್ಮನಃ ಅತ್ಯಂತಭಿನ್ನಾವಾ? :: ಅತ್ಯಂತ ಭಿನ್ನಾಃ।

(ಜೀವರು ಪರಮಾತ್ಮನಿಗಿಂತ ಭಿನ್ನರೋ? **ಉ:-** ಅತ್ಯಂತ ಭಿನ್ನರು. )

**ಪ್ರಶ್ನೆ11)** ಜೀವಃ ಅಣುರ್ವಾ ವ್ಯಾಪೀ ವಾ? :: ಅಣುರೇವ। ಸಃ ಹೃದಯೇ ವರ್ತತೇ। ತಥಾಪಿ ಯಥಾ ಚಂದನಂ ಏಕಸ್ಥಲೇ ವರ್ತಮಾನಮಪಿ ಅನ್ಯತ್ರ ಅಂಶೇನ ವ್ಯಾಪಕಂ ಭವತಿ, ಯಥಾ ದೀಪಃ ಏಕತ್ರ ವಿದ್ಯಮಾನೋಽಪಿ ಪ್ರಕಾಶಗುಣೇನ ವ್ಯಾಪಕೋ ಭವತಿ ತಥಾ ಜೀವಃ ಅಂಶೇನ ವಾ ಗುಣೇನವಾ ದೇಹೇ ಸರ್ವತ್ರ ವ್ಯಾಪೀಭವತಿ।

(ಜೀವರು ವ್ಯಾಪ್ತರೋ ಪರಮಾಣುಸ್ವರೂಪರೋ? **ಉ:-** ಜೀವನು ಪರಮಾಣುಗಾತ್ರನು. ಅವನು ಹೃದಯದಲ್ಲಿರುತ್ತಾನೆ. ಹಾಗಿದ್ದರೂ ಗಂಧವುಒಂದೆಡೆ ಇದ್ದರೂ ಬೇರೆಡೆ ಅಂಶದಿಂದ ವ್ಯಾಪಕವಾದಂತೆ, ದೀಪವು ಒಂದೆಡೆಯಿದ್ದರೂ ಪ್ರಕಾಶಗುಣದಿಂದ ಎಲ್ಲೆಡೆ ವ್ಯಾಪಕವಾದಂತೆ, ಜೀವರು ಪ್ರಕಾಶಗುಣದಿಂದ ದೇಹದಲ್ಲಿವ್ಯಾಪ್ತರಾಗಿರುತ್ತಾರೆ.)

**ಪ್ರಶ್ನೆ12)** ಜೀವಸ್ಯ ಸ್ವರೂಪಂ ಕೀದೃಶಂ? :: ತ್ರಿವಿಧಂ ಮುಕ್ತಿಯೋಗ್ಯಾನಾಂ ಜ್ಞಾನಾನಂದಸ್ವರೂಪಂ, ತಮೋಯೋಗ್ಯಾನಾಂ ಅಜ್ಞಾನದುಃಖಸ್ವರೂಪಂ, ನಿತ್ಯಸಂಸಾರಿಣಾಂ ಮಿಶ್ರಸ್ವರೂಪಂ।

(ಜೀವನ ಸ್ವರೂಪ ಎಂಥದ್ದು? **ಉ:-** ಮೂರುವಿಧ. ಮುಕ್ತಿಯೋಗ್ಯರದ್ದು ಜ್ಞಾನಾನಂದಸ್ವರೂಪ, ತಮೋಯೋಗ್ಯರದ್ದು ಅಜ್ಞಾನ ದುಃಖಸ್ವರೂಪ, ನಿತ್ಯಸಂಸಾರಿಗಳದ್ದು ಮಿಶ್ರಸ್ವರೂಪ)

**ಪ್ರಶ್ನೆ13)** ಏವಂ ಸತಿ ತ್ರಿವಿಧಾನಾಂ ವಿಪರೀತಾನುಭವಃ ಕಥಂ ಸಂಭವತಿ? :: ಸ್ವರೂಪಂ ಅವಿದ್ಯಯಾ ಆವೃತಂ। ಅತಃ ಅನ್ಯಥಾನುಭವಃ ಔಪಾಧಿಕಃ।

(ತ್ರಿವಿಧ ಜೀವರಿಗೆ ಅವರ ಸ್ವರೂಪಕ್ಕೆ ವಿರುದ್ಧವಾದ ಅನುಭವವು ಏಕೆ ಆಗುತ್ತದೆ ? **ಉ:-** ಸ್ವರೂಪವನ್ನು ಅವಿದ್ಯೆ ಆವರಿಸಿದೆ. ಆದ್ದರಿಂದ ವಿಪರೀತವಾಗಿ ಆಗುವ ಅನುಭವ ಉಪಾಧಿಯಿಂದ ಉಂಟಾಗುತ್ತದೆ.)

**ಪ್ರಶ್ನೆ14)** ಜೀವಾಃ ಭಗವದಧೀನಾ ವಾ ಸ್ವತಂತ್ರಾ ವಾ? :: ಪರಮಾತ್ಮಾಧೀನಾಏವ। ತಥಾಪಿ ತೇಷಾಂ ಕಿಂಚಿತ್ ಭಗವದ್ದತ್ತಸ್ವಾತಂತ್ರ್ಯಂ ಅಸ್ತಿ।ತಥಾ ನ ಚೇತ್ ಶಾಸ್ತ್ರಸ್ಯ ನಿಷ್ಪ್ರಯೋಜನತ್ವಂ ಸ್ಯಾತ್ ಖಲು।

(ಜೀವರು ಸ್ವತಂತ್ರರೋ, ಭಗವಂತನ ಅಧೀನರೋ ? **ಉ:-** ಪರಮಾತ್ಮನ ಅಧೀನರೇ. ಹಾಗಿದ್ದರೂ ಅವರಿಗೆ ಭಗವಂತ ಸ್ವಲ್ಪ-ಸ್ವಾತಂತ್ರ್ಯವನ್ನು ಕೊಟ್ಟಿದ್ದಾನೆ. ಹಾಗಿಲ್ಲದಿದ್ದರೆ ಶಾಸ್ತ್ರವು ನಿಷ್ಪ್ರಯೋಜನ ಆಗುತ್ತಿತ್ತು. )

**ಪ್ರಶ್ನೆ15)** ಜೀವಾನಾಂ ಭೂತಸಂಬಂಧಃ ದೇಹಾಂತೇ ನಿವರ್ತತೇ ವಾ ನ ವಾ?

ನ ನಿವರ್ತತೇ। ಜೀವಾಃ ಕರ್ಮಾನುಸಾರೇಣ ಭೂಯೋಭೂಯಃ ಜನ್ಮಾಂತರಂ ಪ್ರಾಪ್ನುವಂತಿ।

(ಜೀವರಿಗೆ ದೇಹ ಬಿಟ್ಟನಂತರ ಪೃಥಿವ್ಯಾದಿಭೂತಗಳ ಸಂಬಂಧ ಕಳಚಿಹೋಗುತ್ತದೋ ? **ಉ:-** ಬಿಡುವುದಿಲ್ಲ. ಜೀವರ ಕರ್ಮಾನುಸಾರೇಣ ಮತ್ತೆ ಮತ್ತೆ ಬೇರೆಬೇರೆ ಜನ್ಮಗಳನ್ನು ಹೊಂದುತ್ತಾರೆ. )

**ಪ್ರಶ್ನೆ16)** ಜೀವಾನಾಂ ಜನ್ಮಾಂತರಾದಿ ಕ್ಲೇಶಾತ್ ಕಥಂ ಮುಕ್ತಿಃ?

ಪರಮಾತ್ಮಾನುಗ್ರಹಜನ್ಯತದಪರೋಕ್ಷೇಣ ಮೋಕ್ಷಃ ಸಂಭವತಿ।

(ಜೀವರಿಗೆ ಬೇರೆ ಜನ್ಮಗಳಿಂದ ಉಂಟಾಗುವ ದುಃಖದಿಂದ ಮೋಕ್ಷ ಹೇಗೆ? **ಉ:-** ಪರಮಾತ್ಮನ ಅನುಗ್ರಹದಿಂದ ಅವನ ಅಪರೋಕ್ಷದಿಂದ ಮುಕ್ತಿಯು ಆಗುತ್ತದೆ.)

**ಪ್ರಶ್ನೆ17)** ಪರಮಾತ್ಮಾನುಗ್ರಹಃ ಕಥಂ ಸಂಭವತಿ?

ಶ್ರವಣಮನನಾದಿಭಿಃ ಹರಿಗುರುಭಕ್ತಿಶಮದಮಾದಿಭಿಃ ಸಂಭವತಿ।

(ಪರಮಾತ್ಮನ ಅನುಗ್ರಹ ಹೇಗೆ ಆಗುತ್ತದೆ? **ಉ:-** ಶ್ರವಣಮನನಾದಿಗಳಿಂದ, ಹರಿಗುರುಗಳಲ್ಲಿ ಭಕ್ತಿ, ಶಮ, ದಮ, ಇವುಗಳಿಂದ ಉಂಟಾಗುತ್ತದೆ.)

**ಪ್ರಶ್ನೆ18)** ಕರ್ಮಣಃ ಪ್ರಯೋಜನಂ ನ ಕಿಂ?

ಅಸ್ತಿ। ಕರ್ಮದ್ವಿವಿಧಂ ಕಾಮ್ಯಂ ಅಕಾಮ್ಯಂ ಚೇತಿ। ಕಾಮ್ಯಂ ಕರ್ಮ ಐಹಿಕಫಲಂ ದದಾತಿ। ಅಕಾಮ್ಯಂ ಅಪರೋಕ್ಷಾತ್ ಪೂರ್ವಭಾವಿ ಚೇತ್ ಜ್ಞಾನಸಾಧನಂ ಭವತಿ। ಉತ್ತರಭಾವಿಚೇತ್ ಮೋಕ್ಷೇ ಅತಿಶಯಂ ದದಾತಿ।

(ಕರ್ಮಕ್ಕೆ ಪ್ರಯೋಜನವೇನಿಲ್ಲವೋ ? ಪ್ರಯೋಜನವಿದೆ. ಕರ್ಮವು ಎರಡು ವಿಧ. ಕಾಮ್ಯ ಮತ್ತು ಅಕಾಮ್ಯವೆಂದು. ಕಾಮ್ಯಕರ್ಮವು ಐಹಿಕ ಫಲವನ್ನು ಕೊಡುತ್ತದೆ. ಅಕಾಮ್ಯಕರ್ಮವಾದರೋ ಅಪರೋಕ್ಷಜ್ಞಾನಕ್ಕಿಂತ ಮೊದಲಿನದಾಗಿದ್ದರೆ ಜ್ಞಾನಕ್ಕೆ ಸಾಧನವು ಮತ್ತು

ನಂತರದ್ದಾಗಿದ್ದರೆ ಮೋಕ್ಷದಲ್ಲಿ ಆನಂದಾತಿಶಯಕ್ಕೆ ಕಾರಣವು. )

**ಪ್ರಶ್ನೆ19)** ಸ್ವರ್ಗಾದಿಫಲಂ ಕೇನ ಭವತಿ?

ದೇವಾದ್ಯಂಶಾನಾಂ ಜ್ಞಾನೇನೈವ ಸರ್ವಫಲಂ ಭವತಿ। ಕರ್ಮಣಾ ಅತಿಶಯಃ, ಇತರೇಷಾಂ ತು ಮೋಕ್ಷೇತರದೃಷ್ಟಾದೃಷ್ಟಫಲಂ ಕರ್ಮಣಾ ಭವತಿ, ಜ್ಞಾನೇನ ಅತಿಶಯಃ।

(ಸ್ವರ್ಗಾದಿ ಫಲವು ಯಾವುದರಿಂದ ಆಗುತ್ತದೆ ? **ಉ:-** ದೇವತೆಗಳು ಮೊದಲಾದವರಿಗೆ ಜ್ಞಾನದಿಂದಲೇ ಎಲ್ಲ ಫಲವೂ ಲಭಿಸುತ್ತದೆ. ಉಳಿದವರಿಗೆ ಮೋಕ್ಷಕ್ಕಿಂತ ಬೇರೆಯಾದ ದೃಷ್ಟ ಮತ್ತು ಅದೃಷ್ಟ ಫಲಗಳು ಕರ್ಮದಿಂದ ಆಗುತ್ತದೆ. ಜ್ಞಾನದಿಂದ ಅತಿಶಯವಾಗುತ್ತದೆ. )

**ಪ್ರಶ್ನೆ20)** ವೇದಾಧಿಕಾರಿಣಃ ಕೇ?

ತ್ರಿವರ್ಣಾನಾಂ ಮಧ್ಯೇ ಯೇ ವಿಷ್ಣುಭಕ್ತಾಃ ಗುರುಭಕ್ತಾಃ ಶಮದಮಾದಿಮಂತಃ ತ ಏವ ವೇದಾಧಿಕಾರಿಣಃ।

(ವೇದಕ್ಕೆ ಅಧಿಕಾರಿಗಳು ಯಾರು ? ಮೂರುವರ್ಣದವರಲ್ಲಿ ಯಾರು ವಿಷ್ಣುಭಕ್ತರೋ, ಗುರುಭಕ್ತಿಯುಳ್ಳವರೋ, ಶಮ- ದಮ ಉಳ್ಳವರೋ ಅವರೇ ವೇದಾಧಿಕಾರಿಗಳು.)

**ಪ್ರಶ್ನೆ21)** ಶೂದ್ರಾಣಾಂ ವೇದಾವಿದ್ಯಾಧಿಕಾರಃ ನ ಕಿಂ ?

ಪೂರ್ವಜನ್ಮನಿ ಪ್ರಾಪ್ತ ಅಪರೋಕ್ಷಜ್ಞಾನವ್ಯತಿರಿಕ್ತ ಶೂದ್ರಾಣಾಂ ವೇದವಿದ್ಯಾಧಿಕಾರೋ ನ।

(ಶೂದ್ರರಿಗೆ ವೇದವಿದ್ಯೆಯಲ್ಲಿ ಅಧಿಕಾರವಿಲ್ಲವೇನು ? **ಉ:-** ಪೂರ್ವಜನ್ಮದಲ್ಲಿ ಅಪರೋಕ್ಷಜ್ಞಾನವನ್ನು ಹೊಂದದಿರುವ ಶೂದ್ರರಿಗೆ ಅಧಿಕಾರವಿಲ್ಲ.)

**ಪ್ರಶ್ನೆ22)** ಸರ್ವೇ ವೇದಾಧಿಕಾರಿಣಃ ಅಪರೋಕ್ಷಯೋಗ್ಯಾಃ ಕಿಂ?

ನ। ಕೇಚಿತ್ ಜೀವಾ ಏವ ಸ್ವಭಾವೇನ ಯೋಗ್ಯಾಃ, ತೇಷಾಮೇವ ಭಗವದಪರೋಕ್ಷಂ। ಕೇಚಿತ್ ನಿತ್ಯಸಂಸಾರಿಣಃ, ಕೇಚಿತ್ ಸ್ವಭಾವೇನ ತಮೋಯೋಗ್ಯಾಃ। ತೇಷಾಂ ಅಪರೋಕ್ಷಂ ಕದಾಪಿ ನ ಭವತಿ। ಸರ್ವೇ ಜೀವಾಃ ಯೋಗ್ಯತಾನುಸಾರೇಣ ಕರ್ಮ ಕುರ್ವಂತಿ। ಸಮ್ಯಗ್ ಜ್ಞಾನಂ ವಾ ವಿಪರೀತ ಜ್ಞಾನಂ ವಾ ಪ್ರಾಪ್ನುವಂತಿ, ತದನುಸಾರೇಣ ಫಲಂ ಅನುಭವಂತಿ । ಶ್ರವಣಮನನಾದಿಷು ಯತ್ನವತಾಂ ಅಪಿ ಅಯೋಗ್ಯಜೀವಾನಾಂ ಜ್ಞಾನಂ ಕದಾಪಿ ನ ಸಂಭವತಿ। ತೇಷಾಂ ನಿತ್ಯನರಕಸ್ಯೈವ ಪ್ರಾಪ್ತಿಃ, ನಿತ್ಯಸಂಸಾರಿಣಾಂ ನಿತ್ಯ ಸಂಸಾರ ಏವ ಸ್ಥಿತಿಃ।

(ಎಲ್ಲಾ ವೇದಾಧಿಕಾರಿಗಳೂ ಅಪರೋಕ್ಷಯೋಗ್ಯರೇ ? **ಉ:-** ಅಲ್ಲ. ಕೆಲವು ಜೀವರು ಮಾತ್ರ ಸ್ವಭಾವತಃ ಯೋಗ್ಯರು. ಅವರಿಗೆ ಮಾತ್ರ ಭಗವಂತನ ಅಪರೋಕ್ಷವಾಗುವುದು. ಕೆಲವರು ನಿತ್ಯಸಂಸಾರಿಗಳು, ಕೆಲವರು ಸ್ವಭಾವತಃ ತಮೋಯೋಗ್ಯರು. ಅವರಿಗೆ ಅಪರೋಕ್ಷ ಯಾವತ್ತೂ ಆಗುವುದಿಲ್ಲ. ಎಲ್ಲಾ ಜೀವರೂ ಯೋಗ್ಯತಾನುಸಾರವಾಗಿ ಕರ್ಮವನ್ನು ಮಾಡುತ್ತಾರೆ. ಸರಿಯಾದುದನ್ನೋ ವಿಪರೀತಜ್ಞಾನವನ್ನೋ ಹೊಂದುತ್ತಾರೆ. ಅದಕ್ಕನುಗುಣವಾಗಿ ಫಲವನ್ನು ಅನುಭವಿಸುತ್ತಾರೆ. ಶ್ರವಣ ಮನನಾದಿಗಳಲ್ಲಿ ಪ್ರಯತ್ನಮಾಡುತ್ತಿದ್ದರೂ ಅಯೋಗ್ಯರಿಗೆ ಜ್ಞಾನ ಯಾವತ್ತಿಗೂ ಆಗುವುದಿಲ್ಲ. ಅವರಿಗೆ ನಿತ್ಯನರಕವೇ ಲಭಿಸುತ್ತದೆ. ನಿತ್ಯಸಂಸಾರಿಗಳು ಯಾವಾಗಲೂ ಸಂಸಾರದಲ್ಲಿಯೇ ಉಳಿಯುತ್ತಾರೆ.)

**ಪ್ರಶ್ನೆ23)** ವೇದಾಧ್ಯಯನ ಅಧಿಕಾರ ಅಭಾವೇ ಕೇವಲ ಶೂದ್ರಾದೀನಾಂ ಜ್ಞಾನಂ ಕಥಂ ಸಂಭವತಿ?

ಭಾರತ ಪುರಾಣಶ್ರವಣಾದಿಷು ತೇಷಾಂ ಅಧಿಕಾರಃ, ತಚ್ಛ್ರವಣಾದಿನಾ ಅಪರೋಕ್ಷಜ್ಞಾನಂ ಸಂಭವತಿ, ಅತಃ ಮೋಕ್ಷಃ।

(ವೇದಾಧ್ಯಯನ ಅಧಿಕಾರವಿಲ್ಲದ ಶೂದ್ರರಿಗೆ ಜ್ಞಾನ ಹೇಗೆ ? **ಉ :-** ಅವರಿಗೆ ಭಾರತಪುರಾಣಾದಿಗಳನ್ನು ಕೇಳುವುದರಲ್ಲಿ ಅಧಿ ಕಾರವಿದೆ. ಅದನ್ನು ಕೇಳುವುದರಿಂದ ಅಪರೋಕ್ಷಜ್ಞಾನ ಉಂಟಾಗುತ್ತದೆ. ಅದರಿಂದ ಮೋಕ್ಷವು.)

**ಪ್ರಶ್ನೆ24)** ಸ್ತ್ರೀಣಾಂ ವೇದಾಧಿಕಾರಃ ಅಸ್ತಿ ನ ವಾ? ನೇತಿ ಚೇತ್ ತಾಸಾಂ ಜ್ಞಾನಂ ಕಥಂ?

ದೇವಋಷ್ಯಾದಿಸ್ತ್ರೀಣಾಂ ವೇದಾಧಿಕಾರೋ ವರ್ತತೇ। ಇತರಾನಾಂ ವೇದಾಧಿಕಾರೋ ನ। ತಾಸಾಂ ಶೂದ್ರವತ್ ಪುರಾಣಶ್ರವಣಾದಿನಾ ಜ್ಞಾನಂ, ಅತಃ ಮೋಕ್ಷಃ।

(ಸ್ತ್ರೀಯರಿಗೆ ವೇದಾಧಿಕಾರ ಇದೆಯೋ ಇಲ್ಲವೋ ? ಇಲ್ಲ ಎಂತಾದರೆ ಅವರಿಗೆ ಜ್ಞಾನವಾಗುವ ಬಗೆ ಹೇಗೆ ? **ಉ: -** ದೇವಋಷ್ಯಾದಿಸ್ತ್ರೀಯರಿಗೆ ವೇದಾಧಿಕಾರವಿದೆ. ಬೇರೆಯವರಿಗೆ ಅಧಿಕಾರವಿಲ್ಲ. ಅವರಿಗೆ ಶೂದ್ರರಿಗೆ ಹೇಳಿದಂತೆ ಪುರಾಣಾದಿ ಶ್ರವಣದಿಂದ ಜ್ಞಾನ ಹಾಗೆಯೇ ಮೋಕ್ಷವು. )

**ಪ್ರಶ್ನೆ25)** ಭಗವದಪರೋಕ್ಷಾತ್ ಮೋಕ್ಷ ಇತಿ ಭವದ್ಭಿರುಕ್ತಂ ಖಲು, ರಾಮಕೃಷ್ಣಾದ್ಯವತಾರಕಾಲೇ ಅನೇಕಜನಾನಾಂ ಭಗವದಪರೋಕ್ಷಂ

ಆಸೀತ್ ಖಲು, ತೇಷಾಂ ಸರ್ವೇಷಾಂ ಮೋಕ್ಷಃ ಅಸ್ತಿ ಕಿಂ ?

ತೇಷಾಂ ಉತ್ತಮಲೋಕಪ್ರಾಪ್ತಿರೇವ, ನ ಮೋಕ್ಷಃ। ಹೃದಯಸ್ಥಂ ಬಿಂಬದರ್ಶನಾದೇವ ಮುಕ್ತಿರ್ಭವತಿ।

( ಭಗವಂತನ ಅಪರೋಕ್ಷದಿಂದ ಮೋಕ್ಷ ಎಂದಾಗ ರಾಮಕೃಷ್ಣಾದಿ ಅವತಾರಕಾಲದಲ್ಲಿ ಇದ್ದ ಅನೇಕ ಜೀವರಿಗೆ ಅಪರೋಕ್ಷವಾಗಿದೆ. ಆದ್ದರಿಂದ ಅವರೆಲ್ಲರಿಗೂ ಮೋಕ್ಷ ಇದೆಯೋ? **ಉ :-** ಅವರಿಗೆ ಉತ್ತಮ ಲೋಕಪ್ರಾಪ್ತಿ ಹೊರತು ಮೋಕ್ಷವಿಲ್ಲ. ಹೃದಯದಲ್ಲಿರುವ ಬಿಂಬನ ದರ್ಶನಮಾತ್ರದಿಂದಲೇ ಮುಕ್ತಿಯಾಗುವುದು. )

**ಪ್ರಶ್ನೆ2** ಭಗವದಪರೋಕ್ಷಾತ್ ಪರಂ ಜ್ಞಾನಿನಾಂ ಯಥೇಚ್ಛಾನುಚರಣಂ ಯುಕ್ತಂ ವಾ?

ಭಗವದಪರೋಕ್ಷಾನಂತರಂ ದುಷ್ಕರ್ಮಣಾ ಮೋಕ್ಷಹಾನಿಃ ನ, ಕಿಂತು ಆನಂದಹ್ರಾಸಃ। ಸತ್ಕರ್ಮಾನುಷ್ಠಾನೇನ ಮೋಕ್ಷೇ ಫಲಾತಿಶಯಃ, ತಸ್ಮಾತ್ ಸ್ವೇಚ್ಛಯಾ ಸತ್ಕರ್ಮಾನುಷ್ಠಾನಮೇವ ಕರ್ತವ್ಯಂ।

( ಭಗವದಪರೋಕ್ಷನಂತರ ಜ್ಞಾನಿಗಳಿಗೆ ಸ್ವೇಚ್ಛಾಚಾರವು ಯುಕ್ತವೇ ? **ಉ:-** ಭಗವಂತನ ಅಪರೋಕ್ಷದ ನಂತರ ದುಷ್ಟಕರ್ಮ ದಿಂದ ಮೋಕ್ಷಕ್ಕೆ ಭಂಗವಿಲ್ಲ. ಆದರೆ ಆನಂದಹ್ರಾಸವಾಗುತ್ತದೆ. ಸತ್ಕರ್ಮದ ಅನುಷ್ಠಾನದಿಂದ ಮೋಕ್ಷದಲ್ಲಿ ಫಲಾತಿಶಯವಿದೆ. ಆದ್ದರಿಂದ ಸತ್ಕರ್ಮಾನುಷ್ಠಾನವನ್ನೇ ಮಾಡಬೇಕು.)

**ಪ್ರಶ್ನೆ27)** ಉಕ್ತ ಸತ್ಕರ್ಮಾನುಷ್ಠಾನಂ ಇಷ್ಟಾನುಸಾರೇಣ ಕರ್ತವ್ಯಂ ವಾ ವಿಧ್ಯನುಸಾರೇಣ ವಾ?

ಮನುಷ್ಯಾಃ ವಿಧ್ಯನುಸಾರೇಣೈವ ಕರ್ಮಕುರ್ಯುಃ, ದೇವಾಃ ಅನುಷ್ಠೇಯಕರ್ಮಮಧ್ಯೇ ಯತ್ಕರ್ಮಣಿ ಇಚ್ಛಾ ತತ್ಕರ್ಮಕುರ್ಯುಃ ; ವಿರಿಂಚಸ್ತು ಇಚ್ಛಾನುಸಾರೇಣ ಕರ್ಮಕುರ್ಯಾತ್, ತಸ್ಯ ಇಚ್ಛೈವ ವಿಧಿಃ।

( ಸತ್ಕರ್ಮಾನುಷ್ಠಾನವನ್ನು ಇಚ್ಛೆಗೆ ಬಂದಂತೆ ಮಾಡಬೇಕೋ, ಶಾಸ್ತ್ರವಿಧಿಗೆ ಅನುಸಾರವಾಗಿರಬೇಕೋ? **ಉ :-** ಮನುಷ್ಯರು ವಿಧಿಗನುಸಾರವಾಗಿಯೇ ಮಾಡಬೇಕು. ದೇವತೆಗಳು ಅನುಷ್ಠೇಯವಾದ ಕರ್ಮಗಳಲ್ಲಿ ಯಾವ ಕರ್ಮದಲ್ಲಿ ಇಚ್ಛೆಯಿದೆಯೋ ಅದನ್ನು ಮಾಡುವರು. ಬ್ರಹ್ಮದೇವರು ಇಚ್ಛೆಗನುಗುಣವಾಗಿಯೇ ಮಾಡುವರು. ಅವರಿಗೆ ಇಚ್ಛೆಯೇ ವಿಧಿಯಾಗಿದೆ. )

**ಪ್ರಶ್ನೆ28)** ಮೋಕ್ಷಃ ಕೀದೃಶಃ?

ಭೂತಬಂಧನಿವೃತ್ತಿರೇವ ಮೋಕ್ಷಃ।

( ಮೋಕ್ಷ ಎಂದರೇನು ? **ಉ :-** ಭೂತಗಳ ಸಂಬಂಧದಿಂದ ಬೇರಾಗುವಿಕೆ. ( ಪಂಚಭೂತಗಳ ನಿವೃತ್ತಿಯೇ ಮೋಕ್ಷ)

**ಪ್ರಶ್ನೆ29)** ಮೋಕ್ಷೇಫಲತಾರತಮ್ಯಂ ಅಸ್ತಿ ವಾ?

ಅಸ್ತಿ। ಮೋಕ್ಷೇ ಜೀವಾನಾಂ ಯೋಗ್ಯತಾನುಸಾರೇಣ ಆನಂದಃ।

( ಮೋಕ್ಷದಲ್ಲಿ ಫಲತಾರತಮ್ಯವಿದೆಯೇ ? **ಉ :-** ಇದೆ. ಮೋಕ್ಷದಲ್ಲಿ ಜೀವರ ಯೋಗ್ಯತೆಗೆ ಅನುಸಾರವಾಗಿ ಆನಂದವು. )

**ಪ್ರಶ್ನೆ30)** ಅಪರೋಕ್ಷಾನಂತರಂ ತತ್ಕ್ಷಣಮೇವ ವಿಷ್ಣುಲೋಕಪ್ರಾಪ್ತಿಃ ಭವತಿ ವಾ?

ಪ್ರಾರಬ್ಧಕರ್ಮಪ್ರತಿಬಂಧಾಭಾವೇ ಶರೀರಪಾತಾನಂತರಂ ಮುಕ್ತಿ। ತದ್ಭಾವೇ ತತ್ಫಲ ಭೋಗಾನಂತರಮೇವ।

( ಅಪರೋಕ್ಷದ ನಂತರ ಕೂಡಲೇ ವಿಷ್ಣುಲೋಕಪ್ರಾಪ್ತಿಯಾಗುತ್ತದೆಯೋ ? **ಉ :-** ಪ್ರಾರಬ್ಧಕರ್ಮರೂಪ ಪ್ರತಿಬಂಧಕವು ಇಲ್ಲ ಎಂದಾದಲ್ಲಿ, ಶರೀರಬಿದ್ದಕೂಡಲೇ ಮೋಕ್ಷ, ಪ್ರಾರಬ್ಧಕರ್ಮವಿದ್ದರೆ ಆ ಫಲವನ್ನು ಅನುಭವಿಸಿದ ನಂತರವೇ ಮೋಕ್ಷ. )

**ಪ್ರಶ್ನೆ31)** ಪ್ರಾರಬ್ಧಕರ್ಮಸದ್ಭಾವೇ ಅಪರೋಕ್ಷಃ ಕಥಂ ಭವತಿ?

ಅಪರೋಕ್ಷಪ್ರತಿಬಂಧಕ ಪ್ರಾರಬ್ಧಕರ್ಮಸದ್ಭಾವೇ ಅಪರೋಕ್ಷಃ ನ ಭವತಿ। ಪ್ರತಿಬಂಧಕಕರ್ಮ ಅಭಾವೇ ಅಪರೋಕ್ಷಃ ಭವತಿ।

( ಪ್ರಾರಬ್ಧಕರ್ಮವಿದ್ದಾಗ ಅಪರೋಕ್ಷವು ಹೇಗೆ? **ಉ :-** ಅಪರೋಕ್ಷಪ್ರತಿಬಂಧಕವಾದ ಪ್ರಾರಬ್ಧಕರ್ಮವಿದ್ದರೆ ಅಪರೋಕ್ಷ ಆಗುವುದಿಲ್ಲ, ಅದಿಲ್ಲದಿದ್ದರೆ ಅಪರೋಕ್ಷವಾಗುವುದು.)

**ಪ್ರಶ್ನೆ32)** ಅಪರೋಕ್ಷಾನಂತರಂ ಪೂರ್ವಕೃತಂ ಅಪ್ರಾರಬ್ಧಕಾಮ್ಯಕರ್ಮ ಕುತ್ರ ಗಚ್ಛತಿ?

ತತ್ ಪುಣ್ಯಕರ್ಮಸುಹೃದಂ ಪ್ರಾಪ್ನೋತಿ, ಪಾಪಕರ್ಮ ದ್ವೇಷಿಣಂ ಪ್ರಾಪ್ನೋತಿ।

( ಅಪರೋಕ್ಷದನಂತರ ಹಿಂದೆ ಮಾಡಿದ ಪ್ರಾರಬ್ಧವಲ್ಲದ ಕಾಮ್ಯಕರ್ಮ ಏನಾಗುತ್ತದೆ? **ಉ :-** ಆ ಪುಣ್ಯಕರ್ಮವು ವಿಷ್ಣುಭಕ್ತನನ್ನು ಹೊಂದುತ್ತದೆ. ಪಾಪಕರ್ಮವು ದ್ವೇಷಿಯನ್ನು ಸೇರುತ್ತದೆ. )

**ಪ್ರಶ್ನೆ33)** ಕೇನಮಾರ್ಗೇಣ ಜೀವಾಃ ವಿಷ್ಣುಲೋಕಂ ಗಚ್ಛಂತಿ ?

ವಕ್ಷ್ಯಮಾಣದೇವತಾದಿವ್ಯತಿರಿಕ್ತ ಜ್ಞಾನಿನಃ ದೇಹಾಂತೇ ಅರ್ಚಿರಾದಿಮಾರ್ಗೇಣ ಆತಿವಾಹಿಕವಾಯುಲೋಕಂ ಪ್ರಾಪ್ಯ ತಸ್ಮಾತ್ ತಟಿಲ್ಲೋಕಂ ತತಃ ವಾಯುಲೋಕಂ ಪ್ರಾಪ್ನುವಂತಿ, ತತಃ ವಿರಿಂಚೇನ ಸಹ ವಿಷ್ಣುಲೋಕಂ ಗಚ್ಛಂತಿ। ದೇವತಾಃ ಶತ ಋಷಯಃ ಶತ- ಗಂಧರ್ವಾಃ ಶತಂ ರಾಜಾನಃ ಸ್ವೋತ್ತಮ ದೇಹೇ ನಿಲೀಯ ಪರಂಪರಯಾ ಉತ್ತಮೋತ್ತಮದ್ವಾರೇಣ ಪರಮಾತ್ಮಾನಂ ಪ್ರಾಪ್ನುವಂತಿ।

( ಜೀವರು ಯಾವಮಾರ್ಗದಿಂದ ವಿಷ್ಣುಲೋಕವನ್ನು ಸೇರುತ್ತಾರೆ ? **ಉ:-** ಮುಂದೆ ಹೇಳುವ ದೇವತಾದಿಗಳನ್ನು ಬಿಟ್ಟು ಉಳಿದ ಜ್ಞಾನಿಗಳು ದೇಹವನ್ನು ಬಿಟ್ಟು ಅರ್ಚಿರಾದಿ ಮಾರ್ಗದಿಂದ ಆತಿವಾಹಿಕ ವಾಯುಲೋಕವನ್ನು ಹೊಂದಿ, ಅಲ್ಲಿಂದ ತಟಿಲ್ಲೋಕವನ್ನು ಹೊಂದಿ, ವಾಯುಲೋಕವನ್ನು ಹೊಂದಿ, ಅಲ್ಲಿಂದ ಬ್ರಹ್ಮದೇವರೊಂದಿಗೆ ವಿಷ್ಣುಲೋಕವನ್ನು ಕುರಿತು ಹೋಗುತ್ತಾರೆ. ದೇವತೆಗಳು, 100 ಋಷಿಗಳು, 100 ಗಂಧರ್ವರು, 100ರಾಜರು, ಸ್ವೋತ್ತಮರ ದೇಹದಲ್ಲಿ ಸೇರಿ ಪರಂಪರೆಯಿಂದ ಉತ್ತಮರ ಮೂಲಕವಾಗಿ ಪರಮಾತ್ಮನನ್ನು ಹೊಂದುತ್ತಾರೆ. )

**ಪ್ರಶ್ನೆ34)** ಮುಕ್ತಾಃ ವಿಷ್ಣುಲೋಕಂ ಪ್ರವಿಶ್ಯ ಕಿಂ ಕುರ್ವಂತಿ ?

ವಿಷ್ಣುಲೋಕಂ ಪ್ರವಿಶ್ಯ ತತ್ರ ವಾ ವಿಷ್ಣೋಃ ಅನುಜ್ಞಯಾ ತದಿತರಲೋಕೇಷು ವಾ ಯೋಗ್ಯತಾನುಸಾರೇಣ ಸಾಲೋಕ್ಯಂ ವಾ ಸಾರೂಪ್ಯಂ ವಾ ಸಾಮೀಪ್ಯಂ ವಾ ಸಾಯುಜ್ಯಂ ವಾ ಪ್ರಾಪ್ತಾಃ ಸಂತಃ ಸ್ವಸಂಕಲ್ಪಾನುಸಾರೇಣ ಸೃಷ್ಟ್ಯಾದಿ ವ್ಯತಿರಿಕ್ತ ಸರ್ವಕಾಮಾನ್ ಚಿದ್ರೂಪೇಣ ವಾ ಶುದ್ಧಸತ್ವರೂಪೇಣವಾ ದೇಹೇನ ಭುಂಜತೇ। ತೇಷಾಂ ಸರ್ವೇಷಾಂ ಪುನರಾವೃತ್ತಿ- ರ್ನಾಸ್ತಿ।

( ವಿಷ್ಣುಲೋಕವನ್ನು ಸೇರಿ ಮುಕ್ತರು ಏನು ಮಾಡುತ್ತಾರೆ? **ಉ :-** ವಿಷ್ಣುಲೋಕವನ್ನು ಹೊಂದಿ ಅಲ್ಲಿ ಅಥವಾ ವಿಷ್ಣುವಿನ ಅನುಜ್ಞೆಯಿಂದ ಬೇರೆ ಲೋಕಗಳಲ್ಲಿಯೋ ತಮ್ಮ ಯೋಗ್ಯತೆಗನುಗುಣವಾಗಿ ಸಾಲೋಕ್ಯವನ್ನೋ, ಸಾರೂಪ್ಯವನ್ನೋ, ಸಾಮೀಪ್ಯ- ವನ್ನೋ, ಸಾಯುಜ್ಯವನ್ನೋ ಹೊಂದಿ ತಮ್ಮ ಇಚ್ಛೆಯಂತೆ ಸೃಷ್ಟ್ಯಾದಿಗಳನ್ನು ಬಿಟ್ಟು ಉಳಿದ ಕಾಮನೆಗಳನ್ನು ಚಿದ್ರೂಪದಿಂದಲೋ ಶುದ್ಧಸತ್ವರೂಪದಿಂದಲೋ ದೇಹದಿಂದ ಅನುಭವಿಸುತ್ತಾರೆ. ಅವರೆಲ್ಲರಿಗೂ ಹಿಂತಿರುಗಿ ಬರುವಿಕೆಯು ಇಲ್ಲ.)

**ಪ್ರಶ್ನೆ35)** ಕರ್ಮಿಣಾಂ ದೇಹಾಂತೇ ಕಾ ಗತಿಃ?

ಪುಣ್ಯಕರ್ಮಿಣಃ ಧೂಮಾದಿಮಾರ್ಗೇಣ ಚಂದ್ರಲೋಕಂ ಪ್ರಾಪ್ಯತತ್ರ ಭೋಗಾನ್ ಭುಕ್ತ್ವಾ ಶೇಷೇಣಕರ್ಮಣಾ ಇಮಂಲೋಕಂ ಆಯಾಂತಿ, ಪಾಪಕರ್ಮಿಣಃ ತಿರ್ಯಗ್ ಜನ್ಮವಾ ನರಕಂ ವಾ ಪ್ರಾಪ್ನುವಂತಿ, ತತ್ರ ದುಃಖಂ ಅನುಭೂಯ ಕೇಚಿತ್ ಜೀವಾಃ ಪುನರಪಿ ಮನುಷ್ಯ ಜನ್ಮ ಪ್ರಾಪ್ನುವಂತಿ, ಕೇಚಿತ್ ಜೀವಾಃ ತಮಸಿ ಅವರೋಹಂತಿ।

(ಕರ್ಮಿಗಳಿಗೆ ದೇಹ ಬಿಟ್ಟನಂತರ ಯಾವ ಗತಿ ? **ಉ :-** ಪುಣ್ಯಕರ್ಮಿಗಳು ಧೂಮಾದಿಮಾರ್ಗದಿಂದ ಚಂದ್ರಲೋಕವನ್ನು ಹೊಂದಿ ಅಲ್ಲಿ ಭೋಗಗಳನ್ನು ಅನುಭವಿಸಿ ಉಳಿದಕರ್ಮದೊಂದಿಗೆ ಈ ಲೋಕಕ್ಕೇ ತಿರುಗಿ ಬರುತ್ತಾರೆ. ಪಾಪಕರ್ಮಿಗಳು ನೀಚಯೋನಿಯನ್ನೋ ನರಕವನ್ನೋ ಹೊಂದುತ್ತಾರೆ. ಅಲ್ಲಿ ದುಃಖವನ್ನು ಅನುಭವಿಸಿ ಕೆಲವು ಜೀವರು ಮತ್ತೆ ಮನುಷ್ಯನ ಜನ್ಮವನ್ನು ಹೊಂದುತ್ತಾರೆ, ಕೆಲವರು ತಮಸ್ಸಿಗೆ ಹೋಗುತ್ತಾರೆ.)

**ಪ್ರಶ್ನೆ36)** ನರಕೇ ಭೇದಃ ಅಸ್ತಿ ವಾ?

ಅಸ್ತಿ। ನರಕಾಣಿ ಸಪ್ತ। ದ್ವೇ ನಿತ್ಯೇ। ಪಂಚ ಅನಿತ್ಯಾನಿ। ನಿತ್ಯನರಕೇ ಪತಿತಸ್ಯ ಆರೋಹಣಂ ನಾಸ್ತಿ।

(ನರಕದಲ್ಲಿ ಭೇದವಿದೆಯೋ ಇಲ್ಲವೋ ? **ಉ:-** ಇದೆ. ನರಕಗಳು ಏಳು. ಅವುಗಳಲ್ಲಿ ಎರಡು ನಿತ್ಯವಾದವು. ಐದು ಅನಿತ್ಯವಾದವು. ನಿತ್ಯನರಕದಲ್ಲಿ ಬಿದ್ದವನು ಮತ್ತೆ ಮೇಲೇಳುವುದಿಲ್ಲ. )

**ಪ್ರಶ್ನೆ37)** ಮೋಕ್ಷದಾತುಃ ವಿಷ್ಣೋಃ ಲಕ್ಷಣಾನಿ ಕಾನಿ?

ವಿಷ್ಣುಃ ಆನಂದಪೂರ್ಣಃ ಸರ್ವಾಂತರ್ಯಾಮೀ ಪೃಥಿವೀಸ್ವರ್ಗಾದ್ಯಾಧಾರಃ ಅದೃಶ್ಯಃ ಪ್ರಾಕೃತರೂಪರಹಿತಃ ಗುಣಗುಣಿ- ರ್ಭೇದರಹಿತಃ ಅವಯವಅವಯವಿಭೇದರಹಿತಃ ಜ್ಞಾನಾನಂದಾತ್ಮಕ ಶರೀರವಾನ್ ಸರ್ವಪಾಲಕಃ ಸೃಷ್ಟಿಸಂಹಾರಕರ್ತಾ ಅವ್ಯಕ್ತಃ ಮುಕ್ತಪ್ರಾಪ್ಯಃ ಸರ್ವಗತಃ ಸರ್ವಶಬ್ದವಾಚ್ಯಃ ಯುಕ್ತಿವಿರುದ್ಧಅನಿರುದ್ಧ ಅಚಿಂತ್ಯ ಸರ್ವಗುಣೋಪೇತಃ।

(ಮೋಕ್ಷವನ್ನು ದಯಪಾಲಿಸುವ ವಿಷ್ಣುವಿನ ಲಕ್ಷಣಗಳೇನು? **ಉ :-** ವಿಷ್ಣುವು ಆನಂದಪೂರ್ಣನಾಗಿದ್ದಾನೆ. ಅವನು ಸರ್ವಾಂತರ್ಯಾಮಿ, ಪೃಥಿವೀ ಸ್ವರ್ಗಾದಿಗಳಿಗೆ ಆಧಾರ, ಅದೃಶ್ಯ, ಪ್ರಾಕೃತರೂಪರಹಿತ, ಗುಣಗುಣಿ ಭೇದರಹಿತ ( ಅವನ ಗುಣಗಳಿಗೂ

ಅವನ ಸ್ವರೂಪಕ್ಕೂ ಭೇದವಿಲ್ಲ) ಅವನಿಗೆ ಅವನ ಅವಯವಗಳಿಂದ ಭೇದವಿಲ್ಲ. ಜ್ಞಾನಾನಂದಸ್ವರೂಪ, ಶರೀರವಿದೆ. ಎಲ್ಲರನ್ನೂ ರಕ್ಷಿಸುವವ, ಸೃಷ್ಟಿಸಂಹಾರಕರ್ತೃ, ಅವ್ಯಕ್ತ, ಮುಕ್ತಗಮ್ಯ, ಎಲ್ಲರಲ್ಲಿದ್ದಾನೆ. ಸರ್ವಶಬ್ದವಾಚ್ಯ , ಯುಕ್ತಿಗೆ ನಿಲುಕದ ಅಚಿಂತ್ಯಗುಣಭರಿತನಾಗಿದ್ದಾನೆ. )

**ಪ್ರಶ್ನೆ38)** ವಿಷ್ಣುಃ ಅದೃಶ್ಯಶ್ಚೇತ್ ಉಪಾಸಕಾನಾಂ ಕಥಂ ತಸ್ಯ ಸಾಕ್ಷಾತ್ಕಾರಃ ಭವತಿ ?

ಅದೃಶ್ಯೋಽಪಿ ಸ್ವಪ್ರಸಾದಾತ್ ಉಪಾಸಕಾನಾಂ ವ್ಯಕ್ತಃ ಭವತಿ।

( ವಿಷ್ಣುವು ಅದೃಶ್ಯನಾದಲ್ಲಿ ಉಪಾಸನೆ ಮಾಡುವ ಭಕ್ತರಿಗೆ ಕಾಣುವುದು ಹೇಗೆ ? **ಉ :-** ಅದೃಶ್ಯನಾದರೂ ತನ್ನ ಅನುಗ್ರಹದಿಂದ ಉಪಾಸಕರಿಗೆ ಕಾಣುತ್ತಾನೆ. )

**ಪ್ರಶ್ನೆ39)** ಪರಮಾತ್ಮಾ ಅವಾಚ್ಯ ಇತಿ ವೇದೇ ಉಕ್ತಂ ಖಲು, ತಸ್ಯ ಗುಣಾಃ ಕಥಂ ವರ್ಣನೀಯಾಃ ?

ಸಃ ಸಾಕಲ್ಯೇನ ಅವಾಚ್ಯೋಽಪಿ ಯತ್ಕಿಂಚಿದ್ರೂಪೇಣ ವಾಚ್ಯ ಏವ।

( ಅವನು ಅವಾಚ್ಯನೆಂದು ವೇದಗಳು ಹೇಳಿರುವಾಗ, ಗುಣಗಳನ್ನು ವರ್ಣಿಸುವುದು ಹೇಗೆ ? **ಉ :-** ಅವನು ಸಂಪೂರ್ಣವಾಗಿ ಹೇಳಿ ಮುಗಿಸಲಿಕ್ಕಾಗದವನಾಗಿದ್ದರೂ ಸ್ವಲ್ಪವಾಗಿ ಹೇಳಬಹುದಾಗಿದೆ. )

**ಪ್ರಶ್ನೆ40)** ವಿಷ್ಣೋಃ ಗುಣಾಃ ಅನಂತಾಃ ಖಲು, ತಸ್ಯ ಗುಣೋಪಾಸನಾ ಕಥಂ?

ವಿಷ್ಣುಃ ಸತ್ಯಂ ಜ್ಞಾನಂ ಆನಂದಂ ಬ್ರಹ್ಮೇತಿ ಚತುರ್ಗುಣೈಃ ಮಾನುಷ್ಯೈಃ ಉಪಸಂಹಾರಃ ಕರ್ತವ್ಯಃ. ದೇವೈಃ ಯೋಗ್ಯತಾ- ನುಸಾರೇಣ ಏಕಕಾಲೇ ಯಾವಂತೋಗುಣಾಃ ಸ್ಫುರಂತಿ ತಾವದ್ಗುಣೈಃ ಉಪಸಂಹಾರಃ ಕರ್ತವ್ಯಃ, ವಿರಿಂಚಸ್ತುಸರ್ವಗುಣೈಃ ಉಪಾಸನಾಂ ಕರ್ತುಂ ಯೋಗ್ಯಃ । ಸರ್ವೈರಪಿ ಪರಮಾತ್ಮಾ ಮಮಸ್ವಾಮೀ ಇತಿ ಉಪಾಸನಾ ಕಾರ್ಯಾ।

( ವಿಷ್ಣುವಿನ ಗುಣಗಳು ಅನಂತವೆಂದಮೇಲೆ ಅವನ ಗುಣಗಳನ್ನು ಉಪಾಸಿಸುವುದು ಹೇಗೆ? **ಉ:-** ವಿಷ್ಣುಸತ್ಯ, ಜ್ಞಾನ, ಆನಂದ, ಬ್ರಹ್ಮ ಎಂದು ನಾಲ್ಕುಗುಣಗಳಿಂದ ಮನುಷ್ಯರು ಉಪಾಸಿಸಬೇಕು. ದೇವತೆಗಳು ತಮ್ಮ ಯೋಗ್ಯತೆಗೆ ಅನುಗುಣವಾಗಿ ಎಷ್ಟು ಗುಣಗಳು ಹೊಳೆಯುತ್ತವೆಯೋ ಅಷ್ಟುಗುಣಗಳಿಂದ ಉಪಾಸನೆ ಮಾಡಬೇಕು. ಬ್ರಹ್ಮದೇವರು ಎಲ್ಲಗುಣಗಳಿಂದ ಉಪಾಸನೆ ಮಾಡಲು ಸಮರ್ಥರು. ಎಲ್ಲರೂ ಪರಮಾತ್ಮನು ನಮ್ಮ ಸ್ವಾಮಿಯು ಎಂದು ಉಪಾಸನೆ ಮಾಡಬೇಕು. )

**ಪ್ರಶ್ನೆ41)** ಅಧಿಕ ಗುಣೋಪಾಸನೇನ ಕಿಂ ಪ್ರಯೋಜನಂ ?

ಅಧಿಕಫಲಂ ಭವತಿ।

( ಹೆಚ್ಚಿನ ಗುಣಗಳ ಉಪಾಸನೆಯಿಂದ ಏನು ಪ್ರಯೋಜನ ? **ಉ :-** ಹೆಚ್ಚಿನ ಫಲವು ಸಿಗುತ್ತದೆ. )

**ಪ್ರಶ್ನೆ42)** ಮೋಕ್ಷಾನಂತರಮಪಿ ಜೀವಾನಾಂ ಉಪಾಸನಾ ಅಸ್ತಿ ಕಿಂ ?

ಮೋಕ್ಷೇ ಮುಕ್ತಾಃ ಸ್ವೇಚ್ಛಯಾ ಉಪಾಸನಾಂ ಕುರ್ವಂತಿ, ನ ಬದ್ಧತಯಾ।

( ಮೋಕ್ಷದನಂತರವೂ ಜೀವರಿಗೆ ಉಪಾಸನೆ ಇದೆಯೋ ? **ಉ :-** ಮೋಕ್ಷದಲ್ಲಿ ಮುಕ್ತರು ತಮ್ಮ ಇಚ್ಛೆಯಿಂದ ಉಪಾಸನೆಯನ್ನು ಮಾಡುತ್ತಾರೆ ಹೊರತು ವಿಧಿಬದ್ಧರಾಗಿ ಅಲ್ಲ. )

**ಪ್ರಶ್ನೆ43)** ಲಕ್ಷ್ಮೀ ನಿತ್ಯಮುಕ್ತಾಖಲು, ತಸ್ಯಾ ಅಪಿ ಉಪಾಸನಾ ಅಸ್ತಿ ಕಿಂ ?

ಸಾಪಿ ಭಕ್ತಿವಿಶೇಷಾತ್ ಸ್ವೇಚ್ಛಯಾ ಉಪಾಸನಾಂ ಕರೋತಿ ॥

( ಲಕ್ಷ್ಮೀ ನಿತ್ಯಮುಕ್ತಳು. ಅವಳಿಗೆ ಉಪಾಸನೆ ಇದೆಯೋ ? **ಉ :-** ಅವಳೂ ಭಕ್ತಿವಿಶೇಷದಿಂದ ಸ್ವೇಚ್ಛೆಯಿಂದ ಉಪಾಸನೆಯನ್ನು ಮಾಡುತ್ತಾಳೆ. )

**ಪ್ರಶ್ನೆ44)** ಸ್ವಯೋಗ್ಯಬಿಂಬವ್ಯತಿರಿಕ್ತರೂಪಾಣಿ ಉಪಾಸ್ಯಾನಿ ಕಿಂ ?

ಅಮುಮುಕ್ಷುಭಿಃ ಕಾಮ್ಯಾರ್ಥಂ ಉಪಾಸ್ಯಾನಿ। ಮುಮುಕ್ಷುಭಿಃ ಮೋಕ್ಷಪ್ರತಿಬಂಧಕ ದುರಿತಾದಿನಿವಾರಣಾರ್ಥಂ ಉಪಾಸ್ಯಾನಿ॥

( ಸ್ವಯೋಗ್ಯವಾದ ಬಿಂಬರೂಪವ್ಯತಿರಿಕ್ತವಾದ ರೂಪಗಳನ್ನು ಉಪಾಸನೆ ಮಾಡಬೇಕೋ ? **ಉ:-** ಮುಮುಕ್ಷು ಅಲ್ಲದವರು ಕಾಮ್ಯಕ್ಕಾಗಿ ಉಪಾಸನೆ ಮಾಡಬೇಕು. ಮುಮುಕ್ಷುಗಳು ಮೋಕ್ಷಪ್ರತಿಬಂಧಕವಾದ ಪಾಪಗಳನ್ನು ನಿವಾರಿಸುವುದಕ್ಕೋಸ್ಕರ ಉಪಾಸಿಸಬೇಕು. )

( ಈ ಪ್ರಶ್ನೋತ್ತರಾವಳಿಯು ಕೀರ್ತಿಶೇಷ ಮ॥ಶಾ॥ಸಂ॥ ಶ್ರೀಅಮರಗೋಳ ಸತ್ಯವರಾಚಾರ್ಯರು,ತುಮಕೂರು ಇವರಿಂದ

ಸಂಗೃಹೀತವಾಗಿದ್ದು. ನಮ್ಮತಂದೆಯವರಾದ ದಿ|| ಕೆ. ಎಸ್. ಕೃಷ್ಣಮೂರ್ತಿ, ಕೆಂಪದಾಳಿಹಳ್ಳಿ, ತುಮಕೂರುಜಿಲ್ಲೆ. ಸಂಗ್ರಹದಲ್ಲಿಇದೆ. ಇದನ್ನು ಸಹೃದಯ ಮಾಧ್ವಬಾಂಧವರು ಓದಿ ಆನಂದಿಸಿ, ಮಾಧ್ವಶಾಸ್ತ್ರಾಭ್ಯಾಸಿಗಳಾಗಬೇಕೆಂದು ಪ್ರಾರ್ಥಿಸುತ್ತಾ ಹಂಚಲಾಗಿದೆ )

ಶ್ರೀಫಲಿಮಾರುಮಠಾಧೀಶರಾದ 1008 ಶ್ರೀಶ್ರೀ ವಿದ್ಯಾಧೀಶ ಶ್ರೀಪಾದಂಗಳವರು ಬೆಂಗಳೂರಿನಲ್ಲಿ
ಚಾತುರ್ಮಾಸ್ಯದಲ್ಲಿ ನಡೆಸಿದ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತ ನ್ಯಾಯವಿವರಣ ಮಂಗಳೋತ್ಸವದ ದಿನ
ಅವರ ಅಂತರ್ಯಾಮಿನ್ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಪ್ರೀತ್ಯರ್ಥವಾಗಿ ಕೊಟ್ಟಿದ್ದು.

'ಶರ್ವಾದಿ ಸರ್ವಗೀರ್ವಾಣನಿರ್ವಾಣಗತಿ ಹೇತವಃ । ಪೂರ್ಣಪ್ರಜ್ಞಪದಾಂಭೋಜಪಾಂಸವಃ ಪಾಂತು ನಃ ಸದಾ ॥

ಭಾರತೀರಮಣೋಮಧ್ವೋಽಸೃಷ್ಟಿಸ್ಥಿತ್ಯಂತಕಾರಕಃ । ವಾಸುದೇವಾಜ್ಞಯಾ ನಿತ್ಯಂ ದುಷ್ಟಾನಾಂ ಪ್ರಾಣಘಾತಕಃ ॥

ಶ್ರೀಮಧ್ವೇಶಾರ್ಪಣಮಸ್ತು. (17-8-2001)